ಅಖಿಲ ಭಾರತ ಪತ್ರಿಕೆ

ಸೆಪ್ಟೆಂಬರ್ 2023



# ಅಂತರಾತ್ಮನ ಸಾಕ್ಷಾತ್ಕಾರ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ಹೊಮ್ಮಿತೋ ಚಿಮ್ಮಿ ಆಂತರ್ಯದಲ್ಲಿ ಸರ್ವಸ್ವ ಶೋಭೆಗೊಂಡು

**– ಪುಟ್ಟು ಕುಲಕರ್ಣಿ**

**(ಪುಟ 70)**

**ಅಖಿಲ ಭಾರತ ಪತ್ರಿಕೆ**
**ಸೆಪ್ಟೆಂಬರ್ 2023**

ಸಂಪುಟ: 33 ಸಂಚಿಕೆ: 09


**ಪರಿವಿಡಿ**


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


# ಅಂತರಾತ್ಮನ ಸಾಕ್ಷಾತ್ಕಾರ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

## ಭಾಗ 1
## ಶ್ರೀ ಅರವಿಂದರ ಅಭಿವ್ಯಕ್ತಿಗಳು


**ಅಂತರ್ಯಾಮಿ (ಅಂತರಂಗದ ಮಾರ್ಗದರ್ಶಿ)** 3
**ತತ್ ಸ್ವರೂಪದ ಅರಿವು** 4
**"ಸಾಕ್ಷಾತ್ಕಾರ" ಶಬ್ದದ ಅರ್ಥ** 7
**ದಿವ್ಯತ್ವದ ತ್ರಿಗುಣಗಳು** 9
**ಅಂತರಾತ್ಮದ ಸ್ವಯಂ ಸಾಕ್ಷಾತ್ಕಾರ** 11
**ವೈಶ್ವಿಕ ಆತ್ಮದ ಸಾಕ್ಷಾತ್ಕಾರ** 13
ಅನು: ಪುಟ್ಟು ಕುಲಕರ್ಣಿ

**ಅತೀತವನ್ನು ಅರಿಯುವುದು** 13
ಅನು: ಕಿಶೋರಕುಮಾರ ಕಾಸಾರ

**ಅಸ್ಮಿತೆಯ ತುರೀಯಾವಸ್ಥೆಯ ಸಾಧನೆ** 15
**ಇದುವೇ ತತ್–ಕಾರ್ಯ. ಇದುವೇ ತತ್–ಅಸ್ತಿತ್ವಕ್ಕಿರುವ ಪರಮ ಗುರಿ** 16
**ಅಜ್ಞಾನದ ಸುಳಿಯಿಂದ ಪಾರಾಗುವ ಕ್ರಮಗಳು** 22
**ದರ್ಶನದ ಮೂಲತತ್ತ್ವ** 27


## ಭಾಗ 2
## ಶ್ರೀಮಾತೆಯವರ ಅಭಿವ್ಯಕ್ತಿಗಳು


**ಗುರುತಿಸುವಿಕೆ** 28
**ಶ್ರೀಮಾತೆಯವರ ಅಭಿವ್ಯಕ್ತಿಗಳ ಮೌಕ್ತಿಕಗಳು** 29
**ದಿವ್ಯತ್ವದೊಳಗೆ ಸಂಯೋಗಗೊಳ್ಳಲು ಪ್ರಥಮ ಹೆಜ್ಜೆ** 31
ಅನು: ನಾಗಜ್ಯೋತಿ ಮಾನ್ವಿ

**ಧನಾತ್ಮಕ ಮತ್ತು ತ್ವರಿತ ಮಾರ್ಗ** 37
**ಅಲ್ಲಿರುವುದೊಂದೇ ಮಾರ್ಗ** 40
**ಅಹಂಕಾರರಹಿತ ಸ್ಥಿತಿ** 43
ಅನು: ಡಾ॥ ಮಹಾದೇವ ಸಕ್ರಿ

**ಶ್ರೀ ಅರವಿಂದರ 'ಕರ್ಮಯೋಗಿನ್' ಪತ್ರಿಕೆ**
**– ದೇವಿ ಸ್ತೋತ್ರಗಳು** 49
ಅನು: ಪುಟ್ಟು ಕುಲಕರ್ಣಿ

**ತ್ರಾಟಕ ಸೂರ್ಯ** 59
– ಪುಟ್ಟು ಕುಲಕರ್ಣಿ

**ಕಾವ್ಯ (ಮುಖಪುಟಗಳು)** 70–72
ಅನು: ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 73

## ಸಂಪಾದಕರ ಟಿಪ್ಪಣಿ

ದೈವತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವದು ಎಂದರೆ ಅದೊಂದು ಅವಶ್ಯಕ–ವಾಗಿರುವ ವಿಷಯವಾಗಿದೆ. ಉಳಿದೆಲ್ಲ ಸಂಗತಿಗಳೂ ಅಪೇಕ್ಷಣೀಯವಾಗಿಯೇ ಇದ್ದರೂ ಅವೆಲ್ಲವೂ ಅತೀ ದೂರದಲ್ಲಿಯೇ ಇರುತ್ತವೆ ಮತ್ತು ಇವೆಲ್ಲವೂ ಸಹಕಾರಿಯಾಗಿ ಅಥವಾ ಮುಂಚೂಣಿಯಲ್ಲಿ ಇದ್ದು 'ಆ' ದಿಸೆಯತ್ತ ಕರೆದೊಯ್ಯುತ್ತವೆ, ಅಥವಾ ಯಾವಾಗ ಅದನ್ನು ಅರಿತುಕೊಳ್ಳುತ್ತೇವೆಯೊ, ಮುಂದುವರೆಸಿಕೊಳ್ಳುತ್ತ ಮತ್ತು ಪ್ರಕಟೀಕರಣಗೊಳಿಸುತ್ತಾ ಸಾಗುತ್ತ ಸಾಗುತ್ತ... ಆದರೆ ಈ ಸಾಕ್ಷಾತ್ಕರವು ಮಾತ್ರ ಆದ್ಯ ಅಪೇಕ್ಷೆಯಾಗಿದ್ದು ಜೊತೆಗೆ ಇದರ ವೃತ್ತಾಕಾರದ ಸುತ್ತಲೂ ಉಳಿದ ಎಲ್ಲ ಸಂಗತಿಗಳೂ ಸಂಚಲನದಲ್ಲಿರುತ್ತವೆ, ಈ ವಿಷಯದ ಹೊರತಾಗಿ ಉಳಿದ ಸಂಗತಿಗಳೆಲ್ಲವೂ ಯಾವುದೇ ಅರ್ಥವನ್ನೂ ಒಳಗೊಂಡಿರುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/784 – ಶ್ರೀ ಅರವಿಂದರು**

## ಭಾಗ 1

# ಶ್ರೀ ಅರವಿಂದರ ಅಭಿವ್ಯಕ್ತಿಗಳು

# ಆಂತರ್ಯಾಮಿ (ಅಂತರಂಗದ ಮಾರ್ಗದರ್ಶಿ)

**– ಅನು: ಪುಟ್ಟು ಕುಲಕರ್ಣಿ**

ನಮ್ಮದೇ ಸ್ವಯಂ ಅಹಂಭಾವದಿಂದಾಗಿ ರೂಪುಗೊಂಡಿರುವ ಪೂರ್ವ ಗ್ರಹ ಸ್ವಭಾವದಿಂದಾಗಿ ಮತ್ತು ನಮ್ಮ ವೈಯಕ್ತಿಕ ಪ್ರಯತ್ನಗಳ ದಟ್ಟೈಸುವಿಕೆಯಿಂದ ಮತ್ತು ನಮ್ಮದೇ ಗುರಿಯ ಕಾರಣದಿಂದಾಗಿ ಬಹುತೇಕವಾಗಿ ನಮ್ಮ 'ಅಂತರಂಗದ ಮಾರ್ಗದರ್ಶಿಯು' ಆಚ್ಛಾದದೊಳಗೇ ಉಳಿದುಕೊಂಡಿರುತ್ತದೆ. ಯಾವಾಗ ನಾವು ಸ್ಪಷ್ಟತೆಯನ್ನು ಪಡೆದುಕೊಳ್ಳುತ್ತೇವೆಯೋ ಮತ್ತು ಅಹಂಕಾರದ ಪ್ರಯತ್ನಗಳಲ್ಲಿ ಪ್ರಕ್ಷುಬ್ಧಗೊಂಡಿರುವ ಸ್ಥಿತಿಯಿಂದ ಮುಕ್ತವಾಗುತ್ತೇವೆಯೋ, ಆಗ ಅದು ಒಂದು ಪ್ರಶಾಂತವಾದ ಸ್ವಯಂ ಪ್ರಜ್ಞೆಯ ಅರಿವನ್ನು ಒದಗಿಸುತ್ತದೆ. ಆಗ ನಮ್ಮಂತರಂಗದಲ್ಲಿಯೇ ಪ್ರಗತಿಗೊಳ್ಳುತ್ತಿರುವ ಪ್ರಕಾಶವೊಂದನ್ನು ಗುರುತಿಸಲು ಸಮರ್ಥರಾಗುತ್ತೇವೆ,

ಪೂರ್ವಾವಲೋಕನದಿಂದಲೇ ನಾವು ಇದನ್ನು ಗುರುತಿಸಿಕೊಂಡಾಗ, ನಮಗೆ ಅರಿವಾಗುವದೇನೆಂದರೆ, ನಮ್ಮ ಸರ್ವ ಘಟನೆಗಳೂ ಎಷ್ಟೊಂದು ಅಸ್ಪಷ್ಟವಾಗಿ ಹಾಗು ಅಸಮಂಜಸವಾಗಿವೆ ಮತ್ತು ಪರಸ್ಪರ ವಿರೋಧದ ಸ್ವರೂಪದಲ್ಲಿ ಇವೆ ಎನ್ನುವದನ್ನು ಅರಿತು, ಇದರಿಂದಲೇ ಒಂದು ಅಂತಿಮ ಫಲಿತಾಂಶವನ್ನು ಅರಿತುಕೊಳ್ಳಲು ಪ್ರಾರಂಭ ಮಾಡಬೇಕಿದೆ. ನಮಗಿಂತ ಪೂರ್ವದಲ್ಲಿ ಈ ಯೋಗ ಮಾರ್ಗವು ಹೇಗೆ ಪ್ರವೇಶ ಮಾಡಿಕೊಂಡು ಈ ಜೀವನವನ್ನು ವಿಕಾಸಗೊಳಿಸುತ್ತಿದೆ ಮತ್ತು ಜೀವನದ ವಿಧಾನವನ್ನು ರೂಪಿಸಿ ಒಂದು ನಿರ್ಣಾಯಕ ದಿಕ್ಕಿನೆಡೆಗೆ ಸಾಗಿಸಿಕೊಂಡು ಬಂದಿದೆ ಎನ್ನುವದನ್ನು ಕಂಡುಕೊಳ್ಳಬೇಕಿದೆ. ಇದೀಗ ನಾವು ನಮ್ಮ ಸಂಘರ್ಷಗಳ ಕುರಿತು ಮತ್ತು ಪ್ರಯಾಸಗಳ ಕುರಿತು ಹಾಗು ಅಸಫಲತೆಯನ್ನು ಪಡೆದುಕೊಳ್ಳುವ ಬಗೆಗೆ, ಅದರ ಭಾವವನ್ನು ಅರ್ಥೈಸಿಕೊಳ್ಳುವ ಜೊತೆಗೆ ಅಸಫಲತೆಯನ್ನು ಸಹಿತ ಸಮಾಧಾನದಿಂದ ಸ್ವೀಕರಿಸುವ ಬಗೆಗೆ, ಆ ಮೂಲಕ ಅಲ್ಲಿ ಎದುರಾಗುವ ಕಠಿಣಾತಿ ಕಠಿಣ ಸಂದರ್ಭಗಳ, ಕಷ್ಟ–ನಷ್ಟಗಳ ಕುರಿತು ಅರ್ಥೈಸಿಕೊಳ್ಳಲು ಸಮರ್ಥರಾಗುತ್ತೇವೆ. ಇಲ್ಲಿ ಬಂದ ಕಷ್ಟಗಳ ಬಗೆಗೆ ಹಾಗು ಅಲ್ಲಿಯೇ ದೊರೆತ ಸಹಾಯಗಳ ಕುರಿತು ಸ್ಪಂದನಗೊಳ್ಳಲು ಸಾಧ್ಯವಾಗುತ್ತದೆ.

ನಮಗೆ ಇವೆಲ್ಲವುಗಳಿಂದಲೂ ಪೆಟ್ಟು ಬಿದ್ದಿದೆ, ವಿರೋಧವೂ ಎದುರಾಗಿದೆ. ಬಹುತೇಕವಾಗಿ ನಮ್ಮ ಪತನವೂ ಸಹಿತ ಮುಂದಿನ ಸೂಕ್ತ ಫಲಿತಾಂಶದ ಉಪಯುಕ್ತತೆಗೆ ಬುನಾದಿಯಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/62–64 – ಶ್ರೀ ಅರವಿಂದರು**

## ತತ್ ಸ್ವರೂಪದ ಅರಿವು

ನಿಮ್ಮ ಕಣ್ಣುಗಳನ್ನು ಸೂರ್ಯನ ಕಡೆಗೆ ಅರೋಹಗೊಳಿಸಿಕೊಳ್ಳಿ; ಜೀವನದಲ್ಲಿ ಅವನೇ ಈ ಅಚ್ಚರಿಯ ಹೃದಯದಲ್ಲಿ ನೆಲೆಸಿ ಪ್ರಕಾಶಮಾನವಾಗಿಸಿದ್ದಾನೆ ಮತ್ತು ವೈಭವಗೊಳಿಸಿದ್ದಾನೆ. ಇನ್ನು ರಾತ್ರಿಯ ವೇಳೆಯಲ್ಲಿ ಗಮನಿಸಿದರೆ ಅಗಣಿತವಾಗಿರುವ ತಾರಾಗಣಗಳ ಮಿನುಗುವಿಕೆಯಿಂದಾಗಿ ಅಲ್ಲಿ ಶಾಶ್ವತದ ಆಂತರ್ಯದ ಘನ ಗುರುತ್ವದೊಂದಿಗೆ ಸದಾ ರಕ್ಷೆಯನ್ನು ನೀಡುತ್ತಿರುವ ದೇದೀಪ್ಯಮಾನ ಪುಂಜಗಳು ನಿರ್ಮಾಯ ಮೌನದಲ್ಲಿಯೇ ಇವೆ. ಈ ಮೌನವು ಶೂನ್ಯವಲ್ಲ, ಆದರೆ ಇಲ್ಲಿ ಅಸ್ತಿತ್ವದಲ್ಲಿರುವ ಏಕಮೇವ ಶಾಂತ ಮತ್ತು ಪ್ರಚಂಡ ಭಾವದ ಭೂಮದ ಅಸ್ತಿತ್ವವಿದೆ; ಇಲ್ಲಿರುವ ಓರಿಯಾನ್ (ಮಹಾವ್ಯಾಧ ನಕ್ಷತ್ರ ಪುಂಜ. ಇದನ್ನು ಕಾಲಪುರುಷ ನಕ್ಷತ್ರ ಪುಂಜವೆಂದೂ ಕರೆಯುತ್ತಾರೆ) ಗಮನಿಸಿ. ಈ ಮಹಾವ್ಯಾಧನು ತನ್ನ ಖಡ್ಗ ಮತ್ತು ಹೊಳೆಯುತ್ತಿರುವ ಕಟಿಬಂಧವನ್ನು ಗಮನಿಸಿ, ಹತ್ತು ಸಾವಿರ ವರ್ಷಗಳ ಹಿಂದೆ ಅವನು ಆರ್ಯ ಜನಾಂಗದ ಪ್ರಾರಂಭದ ಅವಧಿಯಲ್ಲಿದ್ದ ಸಂಗತಿಯನ್ನು ಹೊಳೆಯುವಂತೆ ತೋರಿಸುತ್ತಿದ್ದಾನೆ. ಅದೇ ರೀತಿ **ಸಿರಿಯಸ್ (ಲುಬ್ಧಕ** ಇದು ಯುಗಳ ನಕ್ಷತ್ರ) **ನಕ್ಷತ್ರವೂ** ಸಹಿತ ವೈಭವಪೂರ್ಣವಾಗಿದೆ. ಲೈರಾ (ಉತ್ತರ ದಿಕ್ಕಿನಲ್ಲಿರುವ ಅಭಿಜಿತ್) ನಕ್ಷತ್ರವೂ ಸಹಿತ ಈ ಅವಕಾಶದಲ್ಲಿ ಕೋಟ್ಯಾಂತರ ಮೈಲುಗಳ ದೂರದಲ್ಲಿ ಅನಂತಾನಂತವಾಗಿರುವ ಅವಕಾಶದ ಅರ್ಣವದಲ್ಲಿ ಯಾನ ನಡೆಸುತ್ತಿದೆ. ಈ ಅಸಂಖ್ಯಾತ ಲೋಕಗಳು ನಾವಿರುವ ನಮ್ಮ ಲೋಕಕ್ಕಿಂತ ಅಧಿಕಾಧಿಕವಾದ ತಮ್ಮದೇ ಸ್ವ–ಸಾಮರ್ಥ್ಯವನ್ನು ಹೊಂದಿವೆ. ಇವೆಲ್ಲವೂ ಅಪರಿಮಿತ ವೇಗದೊಂದಿಗೆ ಅನಾದಿ ಕಾಲದಿಂದಲೂ ಸುರುಳಿ ಸುತ್ತುತ್ತ ಚಲಿಸುತ್ತಿವೆ. ಈ ವಿಷಯ ತತ್ (ಅವನು) ಮಾತ್ರ ಅರಿತಿದ್ದಾನೆ. ಇವೆಲ್ಲವೂ ನಮ್ಮ ಹಿಮಾಲಯಕ್ಕಿಂತಲೂ ಕೋಟ್ಯಾಂತರ ಕೋಟ್ಯಾಂತರ ವರ್ಷಗಳಿಗಿಂತ ಪ್ರಾಚೀನ, ನೀವು ಕಾಣುತ್ತಿರುವ ಪರ್ವತಗಳ ಮೂಲಕ್ಕಿಂತಲೂ ಸ್ಥಿರತೆಯಲ್ಲಿವೆ. 'ಅವನು' ತನ್ನದೇ ಇಚ್ಛೆಯಲ್ಲಿ ಅವುಗಳನ್ನು ಅಲುಗಾಡಿಸಿದರೆ ಮಾತ್ರ ಈ ವೈಶ್ವಿಕ ಮಹಾವೃಕ್ಷದ ಒಣಗಿದ ಎಲೆಗಳು

ಉದುರಿದಂತೆ ಪಲ್ಲಟಗೊಳ್ಳುತ್ತವೆ. ಕಾಲದ ನಿತ್ಯನಿರಂತರತೆಯ ಕುರಿತು ಕಲ್ಪನೆ ರೂಪಿಸಿಕೊಳ್ಳಿ; ಸೀಮೆಯೇ ಇರದ ಅನಂತಾನಂತವಾಗಿರುವ ಅವಕಾಶವನ್ನು ಅರಿತುಕೊಳ್ಳಿ; ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಈ ಎಲ್ಲ ಜಗತ್ತುಗಳು ಇನ್ನೂ ನಿರ್ಮಾಣಗೊಳ್ಳುವದಕ್ಕೂ ಮುಂಚೆ 'ಅವನು' ಇದ್ದ. ಅದೂ ಈಗ ಹೇಗಿರುವನೋ ಅದೇ ರೀತಿಯಲ್ಲಿಯೇ ಇದ್ದನು. ಅವನು ಮುಂದೆಯೂ ಹೀಗೆಯೇ ಇರುವನು. ಲೈರಾ (ಲುಬ್ಧಕ) ನಕ್ಷತ್ರದ ಆಚೆ ಆಚೆ 'ಅವನು' ಇದ್ದಾನೆ. ಬ್ರಹ್ಮಾಂಡದ ದಕ್ಷಿಣ ಗೋಲಾರ್ಧದ ಆಚೆ ಭಾಗದಲ್ಲಿರುವ ನಕ್ಷತ್ರಗಳು ನಮಗೆ ಗೋಚರಕ್ಕೆ ಸಿಗದಿದ್ದರೂ ಸಹಿತ, ಅಲ್ಲಿಯೂ 'ಅವನೇ' ಇದ್ದಾನೆ.

ಇದೀಗ ಪೃಥ್ವಿಯ ಕಡೆಗೆ ಮರಳಿ ಬನ್ನಿರಿ, ಈಗ 'ಅವನು' ಯಾರು ಎಂದು ಅರಿತುಕೊಳ್ಳಿ. 'ಅವನು' ನಿಮ್ಮ ಸಮೀಪದಲ್ಲಿಯೇ ನೆಲೆಸಿದ್ದಾನೆ. ಅದೋ ಅಲ್ಲಿ ಬಾಗಿಕೊಂಡು ಬಾಗಿಕೊಂಡು, ಕೋಲೂರಿಕೊಂಡು ಸಾಗುತ್ತಿರುವ ವಯೋವೃದ್ಧನನ್ನು ನೋಡಿ. ಅಲ್ಲಿ ಈ ರೀತಿಯಲ್ಲಿ ಸಾಗುತ್ತಿರುವವನು 'ಪರಮಾತ್ಮ'ನೆನ್ನುವದು ನಿಮಗೆ ತಿಳಿದಿದೆಯೇ? ಸೂರ್ಯನ ಬೆಳಕನ್ನು–ಕಿರಣವನ್ನು ಕಂಡು ನಗುನಗುತ್ತ ಸಾಗುತ್ತಿರುವ ಮಗುವೊಂದು ಇಲ್ಲಿದೆ. ಅವನ ನಿಷ್ಕಲ್ಮಷ ನಗೆಯನ್ನು ನಿಮಗೆ ಕೇಳುತ್ತಿದೆಯೇ? ನೀವು ಇದನ್ನು ಒಪ್ಪದಿದ್ದರೂ, 'ಅವನು' ಈಗಲೂ ನಿಮಗೆ ಸಮೀಪದಲ್ಲಿಯೇ ಇರುವನು. 'ಅವನು' ನಿಮ್ಮಲ್ಲಿಯೇ ಇದ್ದಾನೆ. 'ಅವನು' ನೀವೇ ಆಗಿದ್ದೀರಿ (ತತ್ ತ್ವಂ ಅಸಿ). ಆ ಕೋಟ್ಯಾಂತರ ಕೋಟ್ಯಾಂತರ ಮೈಲುಗಳ ದೂರದಲ್ಲಿ ಆ ಅವಕಾಶವನ್ನು ಅನಂತತೆಯು ಸಂಗಮಿಸುವ – 'ಆ ದಿಸೆಯಲ್ಲಿ' ಸದಾ ಪ್ರಜ್ವಲನಗೊಳ್ಳುತ್ತಿರುವದು 'ನಿಮ್ಮ ವ್ಯಕ್ತಿತ್ವವೇ' ಆಗಿದೆ. ಅದು ಇಲ್ಲಿ ಕೆಳಗಡೆ ಸದಾ ಈ ತಾರಾ(ನಾದ) ಸ್ವರೂಪದ ಅಲೌಕಿಕವಾಗಿರುವ ಮತ್ತು ಸದಾ ಸಂಚಲಿಸುತ್ತಲೇ ಇರುವ ಅರ್ಣವದ ಮೇಲೆ ಸಂಪೂರ್ಣವಾಗಿ ಆತ್ಮವಿಶ್ವಾಸದಿಂದಲೇ ಹೆಜ್ಜೆಗಳನ್ನು ಹಾಕುತ್ತಿದೆ; ಅಲ್ಲಿ ನಿಗದಿಗೊಳಿಸಿ ರೂಪಿಸಿರುವ ತಾರೆಗಳ ಸ್ಥಾನಗಳನ್ನು ನೀವೇ ನಿರ್ಧರಿಸಿದ್ದೀರಿ ಮತ್ತು ಕೈಗಳನ್ನು ಬಳಸದೇ ಕೇವಲ ಯೋಗದ ಸಹಾಯದಿಂದ ಜ್ಯೋತಿ ಪುಂಜಗಳನ್ನು ಪೋಣಿಸಿ ಕಂಠ ಹಾರವನ್ನು ರಚಿಸಿದವರು ನೀವೇ ಆಗಿದ್ದೀರಿ, ಈ ಶಾಂತವಾಗಿರುವ ನಿಶ್ಚಲತೆಯಲ್ಲಿರುವ ವ್ಯಕ್ತಿಗತವಾಗಿರದ ಆತ್ಮೇಚ್ಛೆಯೊಂದು ಇಲ್ಲಿ ರೂಪಿಸಲ್ಪಟ್ಟಿದ್ದು ಅದು ನಿಮ್ಮ ಸಲುವಾಗಿಯೇ ಇರುವದನ್ನು ನಾನು ಅಲಿಸುತ್ತಿದ್ದೇನೆ. ಮತ್ತೂ ಊರ್ಧ್ವದೆಡೆಗೆ ಗಮನ ಕೊಡಿ, ಓ ಪ್ರಾಚೀನ ಯೋಗದ ಶಿಶುವೇ, ಎಂದಿಗೂ ಸಂದೇಹಗೊಳ್ಳಬೇಡ ಮತ್ತು ಸುದೀರ್ಘ

ಕಾಲದವರೆಗೆ ಕಂಪನಗೊಳ್ಳುವದು ಬೇಡ. ಅಂಜಿಕೆಯೂ ಬೇಡ, ಅನುಮಾನಿಸಬೇಡ, ದುಃಖಿಸಬೇಡ, ಪ್ರಕೃತಿದತ್ತವಾಗಿರುವ ಮತ್ತು ಸುಸ್ಪಷ್ಟವಾಗಿರುವ ನಿನ್ನದೇ ಶರೀರದಲ್ಲಿಯೇ ಇರುವ 'ಏಕವಾಗಿರುವ ಅವನು' ತನ್ನ ಒಂದೇ ಒಂದು ಉಸಿರಿನಲ್ಲಿ ಸೃಷ್ಟಿಸಲೂ ಬಲ್ಲ ಜೊತೆಗೆ ಜಗತ್ತುಗಳನ್ನು ಲಯಗೊಳಿಸಲೂ ಬಲ್ಲ.

ಇದು ಖಚಿತ. 'ಅವನು' ಅನಂತವಾಗಿರುವ ಈ ಆಧ್ಯಾತ್ಮಿಕ ಬಲದ ಅರ್ಣವದಲ್ಲಿ ಇರುವನು; ಒಂದು ವೇಳೆ 'ಅವನು' ಅಲ್ಲಿ ಇರದೇ ಹೋದಲ್ಲಿ, ಆಗ ಬಾಹ್ಯದಲ್ಲಿರುವ ನೀನೂ ಇರುವದಿಲ್ಲ ಜೊತೆಗೆ ಬಾಹ್ಯದಲ್ಲಿ ನಾನೂ ಇರುವದಿಲ್ಲ ಅಲ್ಲದೇ ಈ ಸೂರ್ಯನೂ ಇರುವದಿಲ್ಲ ಅಲ್ಲದೇ ಕಣ್ಣಿನ ರೆಪ್ಪೆ ಮಿಟುಕಿಸುವ ಸಮಯಕ್ಕಿಂತಲೂ ಲಕ್ಷಾಂತರ ಭಾಗದ ಊಹನಾತೀತ ಅತ್ಯಲ್ಪ ಸಮಯದಲ್ಲಿ ಈ ಸರ್ವ ಜಗತ್ತುಗಳೂ ಸಹಿತ ಕಣ್ಮರೆಯಾಗಿ ಬಿಡುತ್ತವೆ. **ಆ ರೀತಿ ಘಟಿಸಿದಾಗಲೂ ಸಹಿತ 'ಅವನು' ಬಾಹ್ಯದಲ್ಲಿ ಇದ್ದೇ ಇರುತ್ತಾನೆ. 'ಅವನದೇ'** ಪ್ರಸ್ಫುಟತೆಯಲ್ಲಿಯೂ 'ಅವನು' ಬಾಹ್ಯದಲ್ಲಿಯೇ ಇರುತ್ತಾನೆ – ಅಂದರೆ ಅದೆಲ್ಲವನ್ನೂ ಮೀರಿ ಆಚೆ ಇರುತ್ತಾನೆ. ಇದನ್ನೇ 'ಅತ್ಯತಿಷ್ಠದ್ದಶಾಂಗುಲಂ' ಎನ್ನುವದು. 'ಅವನ' ಈ ಪ್ರಸ್ಫುಟತೆಯೊಳಗೆ, 'ಅವನು' ಸಂಪೂರ್ಣವಾಗಿಯೇ ಅದರಿಂದ ಆಚೆ ಇರುತ್ತಾನೆ. ಇನ್ನುಳಿದ ಸಂಗತಿಗಳಿಗಿಂತ ಈ ಸತ್ಯವನ್ನು ಅರಿತುಕೊಳ್ಳುವದು ತುಂಬ ದುಸ್ತರವಾಗಿರುವ ಸಂಗತಿಯಾಗಿದೆ. ಆದರೆ ಇದನ್ನು ಗ್ರಹಿಸಿಕೊಳ್ಳಲೇಬೇಕಾಗಿದೆ. ಸರ್ವ ದೇವತಾ ಉಪಾಸನೆಯ ವಿಧಾನವೊಂದು ಈ ವಿಶ್ವವನ್ನು ಪರಮಾತ್ಮನೆಂದು ನೋಡುತ್ತದೆಯೇ ವಿನಾ ಪರಮಾತ್ಮನನ್ನು ವಿಶ್ವವೆಂದಲ್ಲ. ಆದರೆ, ಒಂದು ವೇಳೆ ಈ ವಿಶ್ವವೇ ಪರಮಾತ್ಮನಾದಲ್ಲಿ, ಆಗ ಪರಮಾತ್ಮನು ಭೌತಿಕವಾಗಿದ್ದು, ವಿಭಾಜ್ಯನಾಗಿದ್ದು ಜೊತೆಗೆ ಪರಿವರ್ತನಾ ಸ್ವರೂಪದವನಾಗುತ್ತಾನೆ, ಕೇವಲ ವಸ್ತು–ವಿಷಯಗಳ ಮುಮ್ಮುಖ–ಹಿಮ್ಮುಖ ಚಲನೆಯ ಆವರ್ತನದಲ್ಲಿರುತ್ತಾನೆ. ಆದರೆ ಇವಾವ ಸಂಗತಿಗಳೂ ಪರಮಾತ್ಮನಲ್ಲಿ ಇಲ್ಲವೇ ಇಲ್ಲ. ಆದರೆ ಪರಮಾತ್ಮನು ಅವನದೇ ಛಾಯೆಯೊಳಗೆ ಜೊತೆಗೆ ಉಪಸ್ಥಿತಿಯಲ್ಲಿ ಇರುತ್ತಾನೆ. ಅವೆಲ್ಲವೂ, ನಮ್ಮದೇ ರೂಪವನ್ನು ಪುನರಾವರ್ತಿಗೊಳಿಸುತ್ತಲಿವೆ. ಇವು ಶೆಕ್ಸಪಿಯರನ ಮನೋಗತ ಆಕೃತಿಗಳಂತೆ ಇರುತ್ತವೆ. ಶೆಕ್ಸಪಿಯರ್ ಕೇವಲ ಅವನ ನಾಟಕಗಳ–ಲೋಕಗಳನ್ನೆಲ್ಲ ಒಟ್ಟುಗೂಡಿಸಿದರೂ ಅದರಂತರಂಗದಲ್ಲಷ್ಟೇ ಅಲ್ಲದೇ ಬಾಹ್ಯದಲ್ಲಿಯೂ ಇರುತ್ತಾನೆ, ಆದರೆ ಅದರ ಹೊರತಾಗಿ ಮತ್ತು ಅದರಿಂದ ವಿಭಿನ್ನವಾಗಿ ಇರುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 17/130–32 – ಶ್ರೀ ಅರವಿಂದರು**

ಅತ್ಯಂತ ಗಂಭೀರವಾಗಿರುವ ಮತ್ತು ಆಧ್ಯಾತ್ಮಿಕ ಅನುಭಾವದ ಆಳದಾಳದಲ್ಲಿ ಒಂದು ಯಥಾರ್ಥಪೂರ್ಣವಾಗಿರುವ ಸಾಕ್ಷಾತ್ಕಾರ ಇರುತ್ತದೆ, ಅದು ವಸ್ತು–ವಿಷಯಗಳನ್ನು ಹೆಚ್ಚು ಹೆಚ್ಚು ನೈಜವಾಗಿ, ಗತ್ಯಾತ್ಮಕವಾಗಿ (ಗತಿಶೀಲವಾಗಿ), ಯಾವುದೇ ಭೌತಿಕ ವಸ್ತು–ವಿಷಯಕ್ಕಿಂತ ಹೆಚ್ಚು ಆತ್ಮೀಯವಾಗಿ ಪ್ರಜ್ಞೆಗೆ ಸಲ್ಲಿಸಲ್ಪಡುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/112**

*

ಬುದ್ಧನ, ಕ್ರಿಸ್ತ ಮತ್ತು ನಮ್ಮ ಕೃಷ್ಣನು ಸ್ವರೂಪ ಪಡೆದುಕೊಳ್ಳುವದನ್ನು ನಮ್ಮಲ್ಲಿ ಸಂಪೂರ್ಣವಾಗಿ ಅರಿತುಕೊಳ್ಳದೇ ಕೇವಲ ಕೃಷ್ಣನನ್ನು, ಬುದ್ಧನನ್ನು ಅಥವಾ ಕ್ರಿಸ್ತನನ್ನೊ ಆರಾಧಿಸಿದರೆ ಮಾತ್ರ ಸಾಲದು. ಇನ್ನುಳಿದ ಯಾವುದೇ ಸಹಾಯಕಾರೀ ಸಂಗತಿಗಳು ಈ ವಿಷಯಕ್ಕೆ ಸಮಾನವಾಗಿ ಯಾವುದೇ ಉದ್ದೇಶವನ್ನೂ ಹೊಂದಿಲ್ಲ. ಇಲ್ಲಿರುವ ಪ್ರತಿಯೊಂದೂ ಮಾನವನ ಸುಸ್ಥಿರವಾಗಿರುವ ಸ್ಥಿತಿಯಾಗಿದ್ದು ಮತ್ತು ದೈವತ್ವವನ್ನು ತನ್ನಂತರಂಗದಲ್ಲಿಯೇ ಶ್ರುತಿಗೊಳ್ಳುವದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/66 – ಶ್ರೀ ಅರವಿಂದರು**

## "ಸಾಕ್ಷಾತ್ಕಾರ" ಶಬ್ದದ ಅರ್ಥ

.. (ಈ ಸಾಕ್ಷಾತ್ಕಾರ) ಎನ್ನುವದು ಕೇವಲ ಬೋಧಾತ್ಮಕವಾಗಿರುವ ಗ್ರಹಿಕೆ ಮಾತ್ರ ಆಗಿರುವದಿಲ್ಲ ಅಥವಾ ಸತ್ಯದ ಸ್ಪಷ್ಟ ಭೇದಾಭೇದವೂ ಆಗಿರುವದಿಲ್ಲ. ಇದು ನಮ್ಮ ಅಸ್ತಿತ್ವದಲ್ಲಿರುವ ಜಾಗ್ರತಗೊಂಡ ಮನೋವೈಜ್ಞಾನಿಕ ಸ್ವರೂಪದ ಪ್ರಕಾರಗಳ ಅನುಭವವೂ ಆಗಿರುವದಿಲ್ಲ. ಸಂಪೂರ್ಣವಾದ ಸ್ವರೂಪಾರ್ಥವೆಂದರೆ ಇದು 'ಸಾಕ್ಷಾತ್ಕಾರ'; ಇದು ನಮ್ಮಂತರಂಗದಲ್ಲಿಯೇ ಇರುವ ಈ ಆತ್ಮದ ಮತ್ತು ಅದರ ನೈಜ–ಸ್ವರೂಪವನ್ನು ನಮ್ಮಲ್ಲಿಯೇ ಸ್ಪಷ್ಟಗೊಳಿಸಿ, ವಿಶ್ವಾತ್ಮಕವಾಗಿ ದೈವತ್ವವಾಗಿರುವ ಮತ್ತು ಸರ್ವೋತ್ಕೃಷ್ಟವಾಗಿ ಅತೀತವಾಗಿರುವದನ್ನು ಅನುಭವಕ್ಕೆ ತರುತ್ತದೆ. ಇದರ ನಂತರದಲ್ಲಿ ಇದು ಇಲ್ಲಿ ರೂಪುಗೊಳ್ಳುವ ವಿಧಾನಗಳನ್ನು, ಈ 'ಆತ್ಮದ' ಪ್ರಕಾಶವಿಲ್ಲದೇ ಕಾಣಲು ಸಾಧ್ಯವಾಗುವದಿಲ್ಲ ಮತ್ತು ಅಸ್ತಿತ್ವದಲ್ಲಿರುವ – ನಮ್ಮ

ಜಗತ್ತಿನ ಭೌತಿಕ ಸ್ವರೂಪ ಹಾಗು ಭೌತಿಕ ಸ್ಥಿತಿಗತಿಗಳ ನೈಜಾನುಭವದ ಪ್ರವಾಹವನ್ನು ಕಾಣಲು ಸಾಧ್ಯವಾಗುವದಿಲ್ಲ. ಹೀಗಾಗಿ ಈ ಸಾಕ್ಷಾತ್ಕಾರವು ಕ್ರಮಾಗತವಾದ ಮೂರು – ಅಂತರಂಗದ ದರ್ಶನ ಹೊಂದಿದ್ದು, ಸಂಪೂರ್ಣವಾದ ಆಂತರಂಗಿಕ ಅನುಭವ ಮತ್ತು ಅಸ್ಮಿತೆಯ – ಚಲನೆಗಳನ್ನು ಹೊಂದಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/304**

ಸಾಕ್ಷಾತ್ಕಾರಗಳು ಪ್ರಜ್ಞೆಯಲ್ಲಿ ಸ್ವಾಗತ ಪಡೆದುಕೊಳ್ಳುತ್ತವೆ ಮತ್ತು ಅಲ್ಲಿಯೇ ಮೂಲಭೂತವಾಗಿರುವ (ಚಿರಂತನ) ಸತ್ಯಗಳನ್ನು ಸ್ಥಾಪಿಸುತ್ತವೆ, ಇವು ಆ ಊರ್ಧ್ವದ ಅಥವಾ ಆ ದಿವ್ಯತ್ವದ ಪ್ರಕೃತಿಯ, ಲೋಕ–ಪ್ರಜ್ಞೆಯ ಮತ್ತು ಅವುಗಳ ಬಲಗಳನ್ನು ಲೀಲೆಗೊಳಿಸಿ ಕ್ರೀಡೆಗೊಳಿಸುತ್ತಿವೆ. ವ್ಯಕ್ತಿಯೋರ್ವನ 'ಸ್ವ'–ತ್ವದ ಮತ್ತು ನೈಜವಾಗಿರುವ ಸ್ವಭಾವದ ಹಾಗು ವಸ್ತುಗಳ ಆಂತರಂಗಿಕ ಸ್ವಭಾವವಾಗಿರುತ್ತವೆ, ಈ ಎಲ್ಲ ವಸ್ತುಗಳ ಶಕ್ತಿಯ ಒಂದಾಗುವವರೆಗೂ ಅಂದರೆ ಎಲ್ಲಿಯವರೆಗೂ ಅವು ಭಾಗ ಭಾಗಗಳಾಗಿರುತ್ತವೆಯೋ ಮತ್ತು ಅವೆಲ್ಲವೂ – 'ಏಕತ್ವ'ದ ಭಾಗಗಳಾಗುವರೆಗೂ ಮತ್ತು ಅಸ್ತಿತ್ವಗೊಳ್ಳುವವರೆಗೂ – ಪ್ರಗತಿ ಪಥದಲ್ಲಿಯೇ ಇರುತ್ತವೆ. ಉದಾಹರಣೆಗೆ, ದೈವೀಭಾವದ ಅಸ್ತಿತ್ವದ ಸಾಕ್ಷಾತ್ಕಾರ, ಪರಮ ಊರ್ಧ್ವದಲ್ಲಿರುವ ಆ ದಿವ್ಯಶಾಂತಿ, ಪ್ರಕಾಶ, ಬಲ ಮತ್ತು ಆನಂದಗಳು ಅವತರಣಗೊಂಡು ಇಲ್ಲಿ ಪ್ರಜ್ಞೆಯೊಳಗೆ ಸುಸ್ಥಿತಗೊಳ್ಳುವ, ಇಲ್ಲಿಯೇ ಕಾರ್ಯಪ್ರವೃತ್ತಗೊಳ್ಳುವ, ಆ ದಿವ್ಯ ಅಥವಾ ಆಧ್ಯಾತ್ಮಿಕ ಪ್ರೇಮವು ಸಾಕ್ಷಾತ್ಕಾರಗೊಳ್ಳುವ, ಅವನದೇ ಚೈತ್ಯ ಪುರುಷನ ಗ್ರಹಿಕೆಯು ಅವನಿಗೆ ಲಭ್ಯವಾಗುವ, ತನ್ನ ಸ್ವಂತಿಕೆಯ ಮನೋಮಯ ಸಂರಚನೆಯ ನೈಜತೆಯ ಶೋಧನೆ, ವಿಶ್ವಾತ್ಮದ ನೈಜ ಜೈವಿಕ–ಜೀವ(ನ)ದ, ನೈಜವಾಗಿರುವ ಭೌತಿಕ ಸ್ವರೂಪದ, ಅಧಿಮಾನಸದ ಸಾಕ್ಷಾತ್ಕಾರದ, ಅಥವಾ ಅತಿಮಾನಸ ಪ್ರಜ್ಞೆಯ ಸಾಕ್ಷಾತ್ಕಾರದ, ಇವೆಲ್ಲ ವಿಷಯಗಳ ಕುರಿತು ಸುಸ್ಪಷ್ಟವಾಗಿರುವ ಅರಿವು, ಈಗ ಸದ್ಯ ನಮಗಿರುವ ಈ ಮೃಣ್ಮಯದ ಸ್ವಭಾವದ ಕೀಳರಿಮೆ ಭಾವವನ್ನು ಪರಿವರ್ತಿತಗೊಳಿಸುವ ಸ್ಪಷ್ಟ ಗ್ರಹಿಕೆಯಾಗಿದೆ. ಇದರ ಬಗೆಗೆ ಇರುವ ವಿವರಗಳ ಪಟ್ಟಿಯು ಅನಂತಾ–ನಂತವಾಗಿಯೇ ಸುದೀರ್ಘವಾಗಿದೆ. ಬಹುತೇಕವಾಗಿ ಈ ಎಲ್ಲ ಸಂಗತಿಗಳನ್ನು – ಅವೆಲ್ಲವೂ ಈ ಮಿನುಗುವಿಕೆಯ (ಮಿಂಚಿನೋಪಾದಿಯಲ್ಲಿ), ಇದ್ದಕ್ಕಿದ್ದಂತೆಯೇ ಗ್ರಹಿತಗೊಳ್ಳುವ ಅಥವಾ ಅಪೂರ್ವವಾಗಿರುವ ದೈವಾನುಗ್ರಹಗಳಾಗಿವೆ. ಇವೆಲ್ಲವೂ ಸಂಪೂರ್ಣ ಧನಾತ್ಮಕವಾಗಿ ಮತ್ತು ಆಗಾಗ್ಗೆ ಅಥವಾ ನಿರಂತರವಾಗಿ ಇಲ್ಲವೇ

ಸರ್ವೇಸಾಮಾನ್ಯವಾಗಿ ಆಗಮಿಸಿದಲ್ಲಿ ಮಾತ್ರ ಅದನ್ನು ಪೂರ್ಣ–ಸಾಕ್ಷಾತ್ಕಾರವೆಂದು ಹೇಳಲಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/38 – ಶ್ರೀ ಅರವಿಂದರು**

## ಲಯ?

ಈ ಮರ್ತ್ಯದಲ್ಲಿ ಅಮೃತತ್ತ್ವ ಅದುವು ಅವಗಿರುವ ನಾಮ ರೂಪ;
ಪರಮದೇವನಾ ರೂಪಕಾರ ಇವನೀಗ ತಾನು ಇಲ್ಲಿ
ಪ್ರತಿಕ್ಷಣವು ತನ್ನ ತಾನೆರಕಗೊಳಿಸಿ ದಿವ್ಯ–ರೂಪಗಳ ಪಡೆದು
ಅದನೆಂದು ಎಂದು ಬಂಧಿಸಲು ಇಚ್ಛೆಯನು ಹೊಂದದಿರುವ

ನಕ್ಷತ್ರ ಗಡಣ ಸಾಕಾರಗೊಳಿಸೆ ನಿರತ ಅವನ ಕಾರ್ಯ,
ಈ ಹೃದಯವೀಗ ಪರಮಾತ್ಮನನ್ನು ಪರಿಶೋಧಗೊಳುವವರೆಗೆ
ಮತ್ತಿದೋ ಜೀವ ತನ್ನ ತಾನರಿತು, ಆಗಲೂ ಸಹಿತ
ಅಲ್ಲಿರದು ಪ್ರಲಯ ಅಲ್ಲಿರದು ಲಯವು ತಾನು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/644 – ಶ್ರೀ ಅರವಿಂದರು**

## ದಿವ್ಯತ್ವದ ತ್ರಿಗುಣಗಳು

(ಇಲ್ಲಿ ಬ್ರಹ್ಮನ ಮೂರು–ಗುಣಗಳನ್ನು ಹೇಳಲಾಗುತ್ತಿದೆ;
ಒಂದು ಸರ್ವಾತಿರಕ್ತತೆ, ನಂತೆ ವಿಶ್ವಾತ್ಮಕತೆ ಮತ್ತು ವ್ಯಕ್ತಿತ್ವ ಸ್ವರೂಪ)

ಆ ನಿರ್ವಿಶೇಷ ಅದು ನಿರ್ವಿಕಲ್ಪ ಆಕಾಶದಿಂದ ಅತ್ತ
ಆ ಪೂರ್ಣವೀಗ ಆಕಾರರಹಿತ ನಿರ್ದ್ವಂದ್ವವಾಗಿ ಚಿತ್ತ,
ಆ ತಾಣದಲ್ಲಿ ನಿಃಸ್ಸಂಗಿ ಪರಮ ಘನಶೂನ್ಯ ಸಾಂದ್ರ ಹಂತ
ಅವನ ಆ ಶಬ್ದಮುಗ್ಧ ಶಕ್ತಿಯಲಿ ಪುಟಗೊಳುವ ಅವನನಂತ,

ಲಕ್ಷಣದ ಕವಚ ತಾನಿರದೆ ಅವಳು ನಿರ್ಲಿಪ್ತ ವಾಸ ತಾಣ
ರೂಪಧಾರಣೆಯ ವ್ಯಾಪ ಹೊಂದಿರದ ಅಪರೂಪ ಮೌನ ತಾಣ
ಸಂಚಲನವಿರದ ಘನಶಾಂತದಲ್ಲಿ ಅವಳ ಸುಷುಪ್ತಿ ನಿದ್ರೆ
ಕಾಲಕಾಲದಲು ಕಾಲದಿಂದಲೇ ರಕ್ಷಣೆಯ ಕವಚ ಭದ್ರೆ,

ಆನಂದ ಬ್ರಹ್ಮ ಸಾನಂದವಾಗಿ ತನ್ಮಯದಿ ಏಕವಾದ
ಅವನ ಆ ನಿತ್ಯ ಏಕೈಕ ಶೌರ್ಯದನುಪಾಖ್ಯ ರೂಪವಾದ.
ಆ ನಿರ್ವಿಶೇಷ ಅದು ಪೂರ್ಣವೀಗ ನಿರ್ದ್ವಂದ್ವವಾಗಿ ಇಲ್ಲಿ
ಅವಕಾಶದಲ್ಲಿ ಅವನೀಗ ಬಂದ ನಿರ್ಮಾಯ ಮೌನದಲ್ಲಿ.

ಏಕೈಕವಾದ ಆ ಆತ್ಮದಿಂದ ಅಗಣಿತದ ಮೂರ್ತಿಗಳನು
ಅವನೀಗ ರೂಪುಗೊಳಿಸುತಲಿ ಅವಕೆ ಚೈತನ್ಯ ತುಂಬುತಿಹನು;
ತನ್ನ ಆ ಭೂಮ–ಬ್ರಹ್ಮಾಂಡದಲ್ಲಿ ನಿಃಸ್ಸಂಗಿ ಇದ್ದ ತೆರದಿ,
ಈ ಸರ್ವ ಮೂರ್ತರೂಪದಲು ಅವನು ಸ್ಪಂದಿಸುವ ನಿತ್ಯ ಮುದದಿ;

ಆಕಾಶವವನು ಅವಕಾಶವವನು ನಭೋಮಂಡಲದ ವ್ಯಾಪ್ತನವನು
ಮಹಾಕಾಶದಲಿ ಪರಮದಾಧಾರ ಪರಿಣಾಮ ಸ್ವತಃ ತಾನು;
ಮತ್ತೆ ಜೊತೆಗಲ್ಲಿ ಕಾಲ ತಾನಾಗಿ ಕಾಲಾತ್ಮ ಇವನೆ ಆಗಿ
ಕಾಲೋಪಹಿತದಿ ಕಾಲಕಲನದಲಿ ಚೇತನ–ವಿಭೂತಿಯಾಗಿ;

ಆ ನಿರ್ವಿಶೇಷ, ಪರಿಪೂರ್ಣವೀಗ, ಬಾಧನೆಯು ಇರದ ಮುಕ್ತ
ನಮ್ಮಂತರಂಗದಲ್ಲವನು, ಗೂಢ ನಮ್ಮಂತರಾತ್ಮ ಶಕ್ತ,
ನಮ್ಮ ಶೂನ್ಯತೆಯ ಬಾಹ್ಯ ಕವಚವನು ಊಹನೆಗೆ ಗಣಿಸಿಕೊಂಡು,
ಈ ರಕ್ತ–ಮಾಂಸ–ರಜ್ಜು–ಸ್ನಾಯುಗಳ ಸಂಲಗ್ನ ದೇಹ ಕಂಡು,

ತನ್ನ ನೆಲೆಗಾಗಿ ಸೂಕ್ತ ತಾಣವದು ನಿರ್ಧರಿಸಿ, ವಾಸಗೊಂಡು,
ಅದು ತನ್ನದೆಂದು ತಾನಿಂತು ಆ ಬಿಡಾರದಲಿ ಉಳಿದುಕೊಂಡು,
ಅವನ ಪ್ರತಿಯೊಂದು ಮನುಜ ಮಾನಕದ–ಎಲ್ಲೆಯಲಿ ರೂಪುಗೊಂಡು
ಅದು ಅವನ ದಿವ್ಯ–ಪರಿಮಾಣದಲ್ಲಿ, ನಾವೀಗ ಉದಿತಗೊಂಡು;

ಆಮೇಲೆ ಮತ್ತೆ ಆ ಒಂದು ದಿವ್ಯ–ಆಕೃತಿಯ ಕೃಪೆಯನಿತ್ತ
ಸೃಷ್ಟಾರನವನು ಪುನರ್–ಎರಕದಲಿ ನಮ್ಮನ್ನು ರೂಪಿಸುತ್ತ
ಜೊತೆಜೊತೆಗೆ ಮರ್ತ್ಯ–ಮಾನವನ ಅಚ್ಚು ರೂಪಣೆಗೆ ಆಗ ತಾನು
ಆ ಪರಮದೇವನಾ ನಕ್ಷೆಯನ್ನೆ ವಿಧಿಸುತಿಹನೀಗ ಅವನು

ಅವನ ಆ ಊರ್ಧ್ವ ಅದಿತಿಹಂತದೆಡೆ ಚಿತ್–ಸತ್ವಗೊಳಿಸುತಿರಲು
ಸಾಂತದಲಿ ಇರುವ ನಮ್ಮ ಮನುಸಗಳ ಆ ತಾಣದೆಡೆಗೆ ತರಲು,

ನಿತ್ಯತ್ವದಲ್ಲಿ ಸ್ಥಿರವಿರುವ ಸಾಕ್ಷಿ–ಚೈತನ್ಯವನ್ನು ಈಗ
ಸ್ಪರ್ಶಿಸುವ ಚಣವು ಸವಿಕಲ್ಪದಲ್ಲಿ ನಿಸ್ಸೀಮ ಸೇತು–ಯೋಗ

ಮೃಣ್ಮಯದ ರೂಪ ಪರಿವರ್ತವಾಗಿ ಚಿನ್ಮಯವೆ ಆಗುವತ್ತ
ಅದು ದಿವ್ಯ ದಿವಿಗೆ ಪರಿಶೋಧದಲ್ಲಿ ಪಾವತಿಸಲಿರುವ ಮೊತ್ತ;
ಪರಸ್ಪರರಲ್ಲಿ ಕೊಡು–ಕೊಳುವ ಋಣವು, ಮನುಜನನು ಬದ್ಧಗೊಳಿಸಿ
ಆ ಪರಾತ್ಪರದ ಜೊತೆಗೆ ಸತತದಲಿ ಸಂಬಂಧ ಭದ್ರಗೊಳಿಸಿ;

ಅದರ ಗುಣಧರ್ಮದಂತರಾಳದೊಲು ಕಾಯಕದಿ ನಾವು ನಿರತ
ನಮ್ಮ ಗುಣಧರ್ಮವನ್ನದುವು ನಿತ್ಯ ರಕ್ಷಿಸುವ ತೆರದಿ ಸತತ;
ನಾವೀಗ ದೇವಸಂತತಿಯ ಶ್ರೇಣಿ–ಶ್ರೇಣಿಯಲಿ ಸೇರೆ ಮತ್ತೆ
ಅವ ಬಯಸಿದಂತೆ ಅವನಿರುವ ತೆರದಿ ಕಡ್ಡಾಯವಾಗಿ ಸತ್ತೆ;

ಪ್ರಾಣದೆಳೆಯಲ್ಲಿ ದೇಹ ಧರಿಸಿರುವ ನಾವೀಗ ಅವನ ಅಂಶ,
ಕಡ್ಡಾಯದಲ್ಲಿ ದಿವ್ಯತ್ವದೆಡೆಗೆ ಬೆಳೆಬೆಳೆಯಬೇಕು ವಂಶ.
ನಮ್ಮ ಜೀವನವು ಮಾಯೆ–ಮೋಹದಲಿ ವೈರುದ್ಧ ತೆರೆಗಳಲ್ಲಿ
ಅಬ್ಬರದ ಉಕ್ಕು–ಉಬ್ಬರದ ಬೊಬ್ಬೆ ರಭಸಾತಿ ರಭಸದಲ್ಲಿ,

ಘನತಮದ ಪರದೆ ಅಲೆಯಲೆಯ ತೆರದಿ ಆವರಿಸಲೆಂದು ಸುತ್ತ
ಮಿಥ್ಯೆ–ಮಿಂಚುಗಳು ಕ್ಷಣದ ಪ್ರಭೆ ತೋರಿ ವಿಭ್ರಮಕೆ ಸಿಲುಕಿಸುತ್ತ,
ಆದರೂ ಜೊತೆಗೆ ರಕ್ಷಣೆಯ ಭದ್ರ ಕವಚದೊಲು ದೇವನಿರುವ,
ಬೆಳಕಿನೆಡೆ ಚಲಿಸೆ ಚುಕ್ಕಾಣಿಯಿರುವ ನಿತ್ಯ–ನಿರ್ವಚನ–ಭಾವ.

**(ಸಾವಿತ್ರಿ; 1–4–67)** **– ಶ್ರೀ ಅರವಿಂದರು**

## ಅಂತರಾತ್ಮದ ಸ್ವಯಂ ಸಾಕ್ಷಾತ್ಕಾರ

ಜೀವಾತ್ಮನೆಂದಿಗೂ ಜನಿಸುವದಿಲ್ಲ, ಎಂದಿಗೂ ವಿಕಾಸಗೊಳ್ಳುವದಿಲ್ಲ, ಆದರೆ ಪ್ರತಿಯೊಂದೂ ಪ್ರಕಟೀಕರಣದ ನಿಯಂತೃ (ಸಭಾಪತಿ) ಆಗಿದ್ದಾನೆ. ಈ ಚೈತ್ಯವು ಇಲ್ಲಿ ಪ್ರಕ್ಷೇಪಣೆಗೊಳ್ಳುವ – ಅಂದರೆ ಚೈತಾತ್ಮವು ಇಲ್ಲಿ ವಿಕಾಸಗೊಳ್ಳುವದರ ಸಲುವಾಗಿ ಮತ್ತು ತನ್ನೊಳಗೆ ತಾನು ಅವುಗಳ ಸಹಾಯವನ್ನು ಪಡೆದುಕೊಳ್ಳುವ ಮೂಲಕ ಸರ್ವಸ್ವವೂ ವಿಕಾಸಗೊಳ್ಳುತ್ತಿರುವ ಪ್ರಕ್ರಿಯೆಯೊಳಗೆ ಇರುತ್ತದೆ. ಇದು

ಸರ್ವಾನುಭವಗಳ ಸಾರವನ್ನೂ ಸ್ವೀಕರಿಸುತ್ತದೆ ಮತ್ತು ವ್ಯಕ್ತಿತ್ವವನ್ನು ದೈವತ್ವಕ್ಕೇರುವಂತೆ ಪ್ರಗತಿಗೊಳಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/60**

ಇಲ್ಲಿ ಪ್ರಪ್ರಥಮವಾಗಿ ಇರುವದು ಜೀವಾತ್ಮದ (ಈ ನಮ್ಮ ಆತ್ಮದ) ಶೋಧನೆ–ಯಾಗಿದೆಯೆ ವಿನಾ ಆತ್ಮದ ಸಂಪರ್ಕದಿಂದ ಬಾಹ್ಯದಲ್ಲಿರುವ ಚಿಂತನಗಳಿಂದ ಮತ್ತು ರಾಗಗಳಿಂದ ಹಾಗು ಬಯಕೆಗಳ ಶೋಧನೆ ಅಲ್ಲ, ಆದರೆ ಈ ಚೈತ್ಯದ ಅಸ್ತಿತ್ವದ ರಹಸ್ಯವು, ಅಂದರೆ ನಮ್ಮಲ್ಲಿ ಆ ದೈವೀ ಅಂಶವನ್ನು ಶೋಧೀಸುವದಾಗಿದೆ. ಇದು ಸ್ವಯಂ–ಸಾಕ್ಷಾತ್ಕಾರದ ಪ್ರಪ್ರಥಮ ಹೆಜ್ಜೆಯಾಗಿದ್ದು, ಈ ಅತ್ಮವನ್ನು ಅಹಂಭಾವದಿಂದ ದೂರ ಮಾಡಿ ಈ ದಿವ್ಯ ಚೈತ್ಯವನ್ನು ಪ್ರತಿಯೊಬ್ಬನನ್ನೂ ಆ ದಿವ್ಯತ್ವದ ಪೀಠದಲ್ಲಿ ಪ್ರತಿಷ್ಠಾಪಿಸುವದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21/653–54**

ಚೈತ್ಯಾತ್ಮನನ್ನು ಅರಿತುಕೊಳ್ಳುವದೆಂದರೆ, ಅದನ್ನು ಜಾಗ್ರತಗೊಳಿಸಿ ಮತ್ತು ಅದನ್ನು ಪ್ರತ್ಯಕ್ಷಗೊಳಿಸಿಕೊಂಡು, ಅದರಲ್ಲೂ **ವ್ಯಕ್ತಿಯೋರ್ವನ ವ್ಯಕ್ತಿತ್ವವನ್ನು ಆ ದೈವತ್ವದೊಡನೆ ಪ್ರಗತಿಗೊಳಿಸಿಕೊಳ್ಳುವ** ಸಲುವಾಗಿಯೇ ಮತ್ತು ಅದನ್ನೇ ಮುಖ್ಯವಾಗಿ ಆಧಾರ–ಗೊಳಿಸಿಕೊಳ್ಳುವದಾಗಿದೆ. ಅದು ಭಕ್ತಿ, ಪ್ರೇಮ, ವಿಶ್ವಾಸ, ಸವ್ಯ–ಸಮರ್ಪಣೆ ಮೂಲಕ ಇರುವ ಸಂಬಂಧವಾಗಿರಬಹುದು, ಶಾರೀರಿಕ, ಪ್ರಾಣಿಕ ಮತ್ತು ಮಾನಸಿಕ ಸ್ತರದಲ್ಲಿನ ಅಹಂಕಾರವನ್ನು ದೂರ ಮಾಡಿಕೊಳ್ಳುವ ಮೂಲಕ ಇದನ್ನು ಪಡೆದುಕೊಳ್ಳುವದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/360**

ಅಂತರಂಗಿಕವಾಗಿ ಏಕಾಗ್ರತೆಯ ಮೂಲಕ ಸಾಧನೆ ಮಾಡುವದು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ:

1) ಈ ಪ್ರಜ್ಞೆಯನ್ನು ಸಂಪೂರ್ಣವಾಗಿ ಹೃದಯದಲ್ಲಿ ನೆಲೆ ನಿಲಿಸಿ ಮತ್ತು ಆ ದಿವ್ಯ ಮಾತೆಯ ವಿಚಾರದ, ಆಕೃತಿಯ(ಪ್ರತೀಕದ) ಅಥವಾ ನಾಮದ ಮೇಲೆ ಕೇಂದ್ರೀಕರಿಸಿ ಏಕಾಗ್ರತೆಯನ್ನು ಸಾಧಿಸುವದು, ಇದು ನಿಮಗೆ ಅತ್ಯಂತ ಸುಲಭಾತಿ ಸುಲಭವಾಗಿಯೇ ಲಭ್ಯವಾಗುತ್ತದೆ.

2) ಹೃತ್ಕೇಂದ್ರದಲ್ಲಿ ಏಕಾಗ್ರತೆಯನ್ನು ಸಾಧಿಸಿಕೊಳ್ಳುವ ಮೂಲಕ ಹಂತ–ಹಂತವಾಗಿ ಮತ್ತು ಕ್ರಮಾನುಗತವಾಗಿ ಮನಸ್ಸನ್ನು ಪ್ರಶಾಂತಗೊಳಿಸಿಕೊಳ್ಳುತ್ತ ಸಾಗುವದು.

3) ಈ ಮಾತೆಯು ಹೃದಯದಲ್ಲಿಯೇ ನೆಲೆಸುವ ಸಲುವಾಗಿ ಮತ್ತು ಅವಳ ಮನೋಮಯ, ಜೀವನ ಮತ್ತು ಕ್ರಿಯೆಗಳ ನಿಯಂತ್ರಣದಲ್ಲಿ ಇರುವ ಅಭೀಪ್ಸೆಯನ್ನು ಹೊಂದಿರುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/225 – ಶ್ರೀ ಅರವಿಂದರು**

## ವೈಶ್ವಿಕ ಆತ್ಮದ ಸಾಕ್ಷಾತ್ಕಾರ

ನಮ್ಮ ಆದ್ಯತಾಪೂರ್ಣವಾಗಿರುವ ಮತ್ತು ವಿಧಿಬದ್ಧವಾಗಿರುವ ಪ್ರಪ್ರಥಮ ಗುರಿ ಎಂದರೆ, ನಮ್ಮನ್ನು ನಾವೇ ಮನಸ್ಸು, ಜೀವನ, ಶರೀರ ಮತ್ತು ಯಾವುದು ನಮ್ಮ ಶಾಶ್ವತವಾಗಿರುವ ಅಸ್ತಿತ್ವವಾಗಿಲ್ಲವೋ ಅವೆಲ್ಲವುಗಳಿಂದ ಮುಕ್ತಗೊಳಿಸಿಕೊಳ್ಳುವ–ದಾಗಿದೆ. ತಪ್ಪು ಅಭಿಪ್ರಾಯಗಳಿಂದ ನಮ್ಮಲ್ಲಿಯೆ ರೂಪಿತಗೊಂಡಿರುವ ನಮ್ಮ ನಿಮ್ಮ ಸ್ತರದ ಅಸ್ತಿತ್ವದ ಬಗೆಗೆ ನಾವು ಹೊಂದಿರುವ ಭಾವನೆಗಳಿಂದ ಹೊರಗೆ ಬರುವದಾಗಿದೆ. ಮತ್ತೆ ಈಗ ಪ್ರಚಲಿತದಲ್ಲಿ ಇದೆ ಎಂದುಕೊಳ್ಳುವ ಬಾಹ್ಯ ಅಸ್ತಿತ್ವವು ಕರಗಿ ಹೋಗುವದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/368–70 – ಶ್ರೀ ಅರವಿಂದರು**

## ಅತೀತವನ್ನು ಅರಿಯುವುದು

**– ಅನು: ಕಿಶೋರಕುಮಾರ ಕಾಸಾರ, ಕಲಬುರ್ಗಿ**

ಆತ್ಮ ಮತ್ತು ಬ್ರಹ್ಮಗಳು ತಮ್ಮ ಕಾರ್ಯವಿಧಾನ ಮತ್ತು ತಮ್ಮ ತ್ರಿವಿಧ ರೂಪದ ಗುಣಗಳಲ್ಲಿ ಸಚ್ಚಿದಾನಂದವನ್ನೇ ಸಂಕೇತಿಸುತ್ತವೆ ಎಂಬುದನ್ನು ನಾವು ಅರಿತಿರಬೇಕು. ಅವು ಕೇವಲ ಶುದ್ಧ ಅಸ್ತಿತ್ವವೊಂದರ ರೂಪಕವಲ್ಲ, ಬದಲಾಗಿ ಅವು ಶುದ್ಧ ಪ್ರಜ್ಞೆ ಮತ್ತು ಶುದ್ಧಾನಂದಗಳ ಪ್ರತಿಮೆಯಾಗಿವೆ. ಇದುವೇ ಆತ್ಮ ಮತ್ತು ಬ್ರಹ್ಮದ ಸಾರವಾಗಿದೆ.

ವ್ಯಕ್ತಿಗತವಾದ ಆತ್ಮ ಮತ್ತು ವೈಶ್ವಿಕವಾದ ಸಚ್ಚಿದಾನಂದದ ಪರಮಾತ್ಮದಲ್ಲಿ ಎರಡು ವಿಧವಾದ ದರ್ಶನೀಯ ಗುಣಗಳಿವೆ. ಮೊದಲನೆಯದು ವಾಕ್‌ರಹಿತವೂ–ಕ್ರಿಯಾರಹಿತವೂ ಆದ ಪ್ರಶಾಂತತೆ, ಸ್ವಯಂ–ಆಪೋಶಿತ, ಸ್ವಯಂಪೂರ್ಣ–ಸ್ವಾವಲಂಬಿ, ಆನಂದ–ಪ್ರಜ್ಞೆ, ನಿರ್ಗುಣ–ನಿರಾಕಾರ, ಬ್ರಹ್ಮಾಂಡದ ಅನಂತಾನಂತ ವಿದ್ಯಮಾನಗಳಿಂದ ದೂರವಾಗಿ–ಮುಕ್ತವಾಗಿ ಬದುಕುವ ಅಸ್ತಿತ್ವವಾದರೆ, ಇನ್ನೊಂದು ಮೊದಲನೆಯದರ ತದ್ರೂಪವಾದ ಅಸ್ತಿತ್ವ–ಪ್ರಜ್ಞೆ–ಆನಂದಗಳನ್ನು ಹೊಂದಿರುವ, ಹಾಗೂ ಅದಕ್ಕೂ ಮೇಲ್ಮಟ್ಟದಲ್ಲಿರುವ ಸಾರ್ವಭೌಮತೆ, ಸ್ವತಂತ್ರತೆ, ವೈಶ್ವಿಕವಾದ ಸರ್ವ ದ್ರವ್ಯಗಳ ಮೇಲಿನ ಅಧಿಪತ್ಯ, ಚ್ಯುತಿಯಿರದ ಪ್ರಶಾಂತ ವರ್ತನೆ, ಶಾಶ್ವತವಾದ ಸ್ವಯಂ ಏಕಾಗ್ರತೆಯ ಸಹಕಾರದಿಂದ ವಿಶ್ವದ ಅನಂತಕ್ರಿಯೆ ಮತ್ತು ಅಸಂಖ್ಯ ಗುಣಗಳ ನಿರ್ಮಿತಿಯಲ್ಲಿ ತನ್ನನ್ನು ತಾನೇ ತೊಡಗಿಸಿಕೊಳ್ಳುವ, ಬಿಡಿ–ಬಿಡಿಗಳನ್ನು ಇಡಿಯು ಹಿಡಿದಿಟ್ಟುಕೊಳ್ಳುವಂತೆ ವಿಶ್ವದ ಅನಂತವಾದ ವ್ಯಕ್ತಿಗತ ಆತ್ಮಗಳನ್ನು ತನ್ನ ವಿಶಾಲವೂ ನಿರ್ಗುಣ–ನಿರಾಕಾರವೂ ಆದ ಪರಮಾತ್ಮದಲ್ಲಿ ಹಿಡಿದಿಟ್ಟುಕೊಳ್ಳುವ, ಬಂಧ–ಅನುಬಂಧಗಳೆಲ್ಲವನ್ನೂ ಕಿತ್ತೆಸೆದು ವೈರಾಗ್ಯ ತತ್ಪರವಾಗುವ ಗುಣಕ್ಕೆ ವ್ಯತಿರಿಕ್ತವಾಗಿ ಸಕಲವನ್ನೂ ಸಮೀಕರಿಸುವ ದೃಷ್ಟಿಯಲ್ಲಿ ವಿಶ್ವದ ಅನಂತ ವಿದ್ಯಮಾನಗಳನ್ನು ನಡೆಸುವ, ತನ್ನ ದಿವ್ಯ ಜ್ಞಾನ ಮತ್ತು ಸ್ವಯಂ ಊರ್ಜಿತವಾದ ತನ್ನ ಚಿರಂತನ ಪ್ರಕಾಶದ ಸೀಮೆಯಲ್ಲಿ ಸರ್ವ ಸೃಷ್ಟಿಯನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದಾಗ್ಯೂ ಸಹ ಅದನ್ನು ಬಂಧನ ರೂಪದಲ್ಲಿ ಸೆರೆಹಿಡಿದು ಅದರ ಮೇಲೆ ಪ್ರಭುತ್ವ ಸಾಧಿಸದೇ ಅದನ್ನು ಅದರ ಪಾಡಿಗೆ ವಿಮುಕ್ತವಾಗಿ ವ್ಯಾಪಿಸಲು ಅನುಮತಿಸುವ ಗುಣಗಳುಳ್ಳ ಬ್ರಹ್ಮವಾಗಿದೆ. ಆದರೆ ಈ ಬ್ರಹ್ಮವು ಯಾವುದೊ ಒಂದು ಧರ್ಮವು ಪ್ರತಿಪಾದಿಸಿದ ಅಥವಾ ದಾರ್ಶನಿಕರು ಪ್ರಚುರಪಡಿಸಿದ ದೈವತ್ವವಲ್ಲ, ಬದಲಾಗಿ ಆಕಾರ–ನಿರಾಕಾರ, ಗುಣ–ನಿರ್ಗುಣಗಳೆರಡನ್ನೂ ಸಮಾನವಾಗಿ ಪ್ರತಿನಿಧಿಸುತ್ತ ಅವೆರಡನ್ನೂ ತನ್ನ ಅಭಿವ್ಯಕ್ತಿಯ ದರ್ಶನಕ್ಕೆ ವಿಧಾನಗಳಾಗಿ ಬಳಸಿಕೊಳ್ಳುವ ಅತೀಂದ್ರಿಯ ಶಕ್ತಿಯಾಗಿದೆ. ಹಾಗೂ ಇದುವೇ ಯೋಗ ಸಾಧನಕ್ಕೆ–ದರ್ಶನ ಸಾಕ್ಷಾತ್ಕಾರಕ್ಕೆ ಮೂಲವಸ್ತುವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/391 – ಶ್ರೀ ಅರವಿಂದರು**

## ಅಸ್ಮಿತೆಯ ತುರೀಯಾವಸ್ಥೆಯ ಸಾಧನೆ

ನಾವು ಮರ್ತ್ಯನೆಲೆಯಲ್ಲಿ ಸಂಪಾದಿಸುವ ತೀರಾ ಭೌತಿಕ ಮಟ್ಟದ ಜ್ಞಾನಾನುಭವಗಳೆಲ್ಲವೂ ಇಲ್ಲಿ ನಾವು ನಮ್ಮದೇ ಆದ ಅಸ್ಮಿತೆಯೊಂದನ್ನು ಸಾಧಿಸಲು ನಮಗಿರುವ ಸಾಧನಗಳಾಗಿವೆಯಷ್ಟೇ! ನಾವು ನಮ್ಮ ದೈನಂದಿನ ಜೀವನದಲ್ಲಿ ನೋಡುವ–ಪಡೆಯುವ ಲೌಕಿಕವಾದ ಕಾಣ್ಕೆಯ ಅನುಭವಗಳು ಅಲೌಕಿಕವಾದ ದರ್ಶನಾನುಭವಗಳಾಗಬೇಕಾದರೆ ನಮ್ಮ ಅಸ್ತಿತ್ವವು ಅಸ್ಮಿತೆಯನ್ನು ಸಾಧಿಸಬೇಕಾಗುತ್ತದೆ. ಎಲ್ಲಿಯವರೆಗೆ ನಾವು ಸರ್ವೋಚ್ಚವಾದ ವೇದಾಂತಿಕ (ಆಧ್ಯಾತ್ಮಿಕ) ಜ್ಞಾನದಲ್ಲಿ ಬದುಕಲಾರೆವೋ, ಎಲ್ಲಿಯವರೆಗೆ 'ತತ್–ತ್ವಂ (ಅವನೇ ನಾನು)!' ಎಂಬ 'ಅಹಂ ಬ್ರಹ್ಮಾಸ್ಮಿ'ಯ ವಾದವು ನಮ್ಮನ್ನಾವರಿಸುವದಿಲ್ಲವೋ, ಅಲ್ಲಿಯವರೆಗೂ ನಮ್ಮ ಅನುಭವಗಳು ಅಪೂರ್ಣಗಳಾಗಿಯೇ ಉಳಿಯುತ್ತವೆ. 'ಅಹಂ ಬ್ರಹ್ಮಾಸ್ಮಿ' ತತ್ತ್ವದಿಂದ ನಾವು ಬರಿ ದೈವವನ್ನು ನೋಡಿ, ಅದನ್ನು ಅಪ್ಪಿಕೊಳ್ಳುವುದಲ್ಲ, ಬದಲಾಗಿ ನಾವೇ ಆ ಅತೀತವಾದ ದೈವೀ ಚೈತನ್ಯದಲ್ಲಿ ಒಂದಾಗಬೇಕು. ಆಗ ನಾವು ನಮ್ಮೊಳಗೆ ಸುಪ್ತವಾಗಿ ಒರಗಿಕೊಂಡು ನಮ್ಮ ಪ್ರಜ್ಞಾರೋಹಣಕ್ಕೆ ತಡೆಯೊಡ್ಡುತ್ತಿರುವ ಸ್ವಯಂ ಸಂಕಲ್ಪ, ಅಹಮಿಕೆ ಮತ್ತು ಉತ್ಕೃಷ್ಟತೆಯ ಭಾವನೆಗಳಿಂದ ತಪ್ಪಿಸಿಕೊಂಡು, ನಮ್ಮನ್ನು ಅತಿಕ್ರಮಿಸಲು ಹೊಂಚು ಹಾಕುತ್ತಿರುವ ರೂಪ ಮತ್ತು ಅಭಿವ್ಯಕ್ತಿಗಳಿಂದ ಮುಕ್ತವಾಗಿ ಆ ಚೈತನ್ಯಯುತವಾದ ಆತ್ಮವನ್ನು ಪ್ರವೇಶಿಸುತ್ತೇವೆ. ಅಲ್ಲಿಯ ದೈವೀ ಅಸ್ತಿತ್ವದೊಂದಿಗೆ ಒಂದಾಗುತ್ತೇವೆ. ಆಗ ಆ ದೈವೀ ಚೈತನ್ಯದ ಅನಂತ ಅಸ್ತಿತ್ವ, ಅನಂತ ಪ್ರಜ್ಞೆ, ಅನಂತ ಶಾಂತಿ ಮತ್ತು ಅನಂತಾನಂದಗಳು ನಮ್ಮೊಳಗೆ ನೆಲೆಸುತ್ತವೆ. ಕೊನೆಗೆ ಆ ದೈವೀ ಚೈತನ್ಯವು ತನ್ನ ವೈಶ್ವಿಕವಾದ ಸೃಷ್ಟಿಕ್ರಿಯೆ, ದ್ರವ್ಯರಚನೆ ಮತ್ತು ಸ್ವಯಂ ಪರಿಕಲ್ಪನೆಯ ಲೀಲೆಯನ್ನು ನಮ್ಮೆದುರು ತೆರೆದುತೋರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/306 – ಶ್ರೀ ಅರವಿಂದರು**

## ಇದುವೇ ತತ್–ಕಾರ್ಯ.
## ಇದುವೇ ತತ್–ಅಸ್ತಿತ್ವಕ್ಕಿರುವ ಪರಮ ಗುರಿ

ಊರ್ಧ್ವನೆಲೆಯ ದಿವ್ಯತೆಯ ಮೂಲದಿಂದ ಭೋರ್ಗರೆಯುತ್ತ ಇಳಿದು ಬರುವ ಚೈತನ್ಯ ಪ್ರವಾಹವನ್ನು ಸಂಗ್ರಹಿಸುವ ಪ್ರಜ್ಞಾ ಪಾತ್ರೆಯಂತೆ ನಾವಾಗಬೇಕಿದೆ. ದಿವ್ಯ ಪುರುಷನ ಅಂಶಾವತಾರದಂತೆ ಅತಿಮಾನವನಾಗಿ ಪರಿವರ್ತನೆಯಾಗಬೇಕಿದೆ. ಇದುವೇ ನಮ್ಮ ಕಾರ್ಯ. ಇದುವೇ ನಮ್ಮ ಅಸ್ತಿತ್ವಕ್ಕಿರುವ ಪರಮ ಗುರಿ. ಅದನ್ನು ಸಾಧಿಸಲೆಂದೇ ಇಲ್ಲಿ ನಮ್ಮ ಅವಿರ್ಭಾವವಾಗಿದೆ. ಅದನ್ನು ಕಾರ್ಯಗತಗೊಳಿಸ–ಬೇಕಾದರೆ ಮೊದಲು ನಮ್ಮನ್ನು ನಾವು ಸಿದ್ಧಪಡಿಸಿಕೊಳ್ಳಬೇಕು. ಹಾಗೂ ನಮ್ಮ ಉದ್ದೇಶವನ್ನು ಲಕ್ಷಿಸದೇ ಕೇವಲ ನಮ್ಮ ಮಾರ್ಗದಲ್ಲಿ ಮುಂಬರಿಯುತ್ತ ಸಂತಸದಿಂದ ಸಾಗುತ್ತಿರಬೇಕು. ಆಗ ಮಾತ್ರ ಆ ಮಾರ್ಗವು ನಮ್ಮನ್ನು ನಮ್ಮ ಉದ್ದೇಶದೊಂದಿಗೆ, ನಮ್ಮನ್ನು ಪರಮ ಗುರಿಯೆಡೆಗೆ ತಲುಪಿಸುತ್ತದೆ. ಆ ಮಾರ್ಗದಲ್ಲಿ ನಮಗೆದುರಾಗುವ ಶಕ್ತಿಗಳು ಮತ್ತು ಮಾರ್ಗದಲ್ಲಿ ನಾವು ಅನುಭವಿಸುವ ಸಂತಸಕ್ಕಿಂತಲೂ, ನಾವು ನಮ್ಮ ಪರಮ ಗುರಿಯನ್ನು ತಲುಪಿದಾಗ ಸಂಭವಿಸುವ ಸಂತಸವು ಅಧಿಕತರವಾಗಿರುತ್ತದೆ. ಹಾಗೂ ಅಲ್ಲಿಯೇ ನಮ್ಮ ಅಸ್ತಿತ್ವಕ್ಕಿರುವ ಶ್ರೇಷ್ಠತೆಯ ಅನಾವರಣವಾಗುತ್ತದೆ. ಆ ಸಂತಸದ ಮಾರ್ಗವು ನಿಮ್ಮಲ್ಲಿ ಶಕ್ತಿಯನ್ನು ತುಂಬಿ, ನೀವು ನಿಮ್ಮ ಪ್ರಜ್ಞೆಯ ಗಿರಿಶಿಖರವನ್ನೇರಲು ಸಹಕರಿಸುತ್ತದೆ.

ನಿಮ್ಮ ಬದುಕಿಗಿರುವ ಬಹುಮುಖ್ಯ ಕರ್ತವ್ಯವೆಂದರೆ ಇದುವೇ ಆಗಿದೆ! ನಿಮ್ಮ ಜೀವನಕ್ಕಿರುವ ಪರಮ ಗುರಿಯೆಂದರೆ ಇದುವೇ! ಇಲ್ಲಿ ನೀವು ಸಂತಸವನ್ನು ಬಯಸಿದ್ದೇ ಆದಲ್ಲಿ, ಈ ನೆಲೆಯಲ್ಲಿ ನಿಮಗೆ ಅಧಿಕತರವಾದ ಸಂತಸವು ಲಭಿಸುವುದಿಲ್ಲ. ಏಕೆಂದರೆ ಈ ಸ್ತರದಲ್ಲಿ ಎಲ್ಲಾ ವಿಧವಾದ ಸಂತಸದ ದಾಸ್ತಾನು ಮುಗಿದುಹೋಗಿದೆ. ಅಳಿದುಳಿದ ಸಂತಸದ ಮೂಲಗಳೂ ಸಹ ಸೀಮಿತವಾಗಿದ್ದು, ಕನಸಿನಲ್ಲಿ ನಾವು ಅನುಭವಿಸುವ ಸಂತಸ; ನಿದ್ರಾ ಸಮಯದಲ್ಲಿ ದೇಹವು ಪಡೆಯುವ ಸಂತಸ; ಹಾಗೂ ಆ ಹಂತದಲ್ಲಿ ನಮ್ಮನ್ನು ನಾವೇ ಮರೆತು ಸ್ವಗತ ತೃಪ್ತಿಯಲ್ಲಿ ಕಾಣುವ ಸಂತಸಗಳಲ್ಲಿಯೇ ಅದರ ಬಹುಪಾಲು ಅಡಕವಾಗಿದೆ. ಇಷ್ಟರಲ್ಲೇ ನಮ್ಮ ಸಂಪೂರ್ಣ ಅಸ್ತಿತ್ವವು ಸಂತಸವನ್ನು ಅನುಭವಿಸುತ್ತದೆ. ಹಾಗೆಯೇ ಅಸ್ತಿತ್ವವೆಂಬುದೊಂದಿದ್ದರೆ ಅದು 'ನಾವು–ನೀವು' ಎಂಬ ಪರಿಮಿತ ವ್ಯಾಪ್ತಿಯ ಅಸ್ತಿತ್ವವಲ್ಲ. ಬದಲಾಗಿ ಅಸ್ತಿತ್ವವೆಂದರೆ ಅದು ದಿವ್ಯತೆಯ ಚೈತನ್ಯವೇ

ಆಗಿದೆ. ಮತ್ತು ಅದರ ಅಳಿದುಳಿದ ಭಾಗಗಳೇ ವಿಕೃತ ಅಸ್ತಿತ್ವಗಳಾಗಿ ಇಲ್ಲಿ ನಮ್ಮ ಸುತ್ತ ಸುತ್ತುತ್ತಿರುತ್ತವೆ. ಹಾಗಾಗಿ ನಾವು ಅದೆಲ್ಲವನ್ನು ಜಯಿಸಿ ಮುನ್ನುಗ್ಗಬೇಕು. ಋತಮೂಲವನ್ನು ಶೋಧಿಸಬೇಕು. ಒಂದೊಮ್ಮೆ ಆ ಋತಂಬರವನ್ನು ನಾವು ಅನುಭವಿಸಿದ್ದೇ ಆದಲ್ಲಿ, ನಾವೆಲ್ಲರೂ ಅದಕ್ಕೆ ನಿಷ್ಠರಾಗಿ ಬದುಕಬೇಕು.

ನಾವೆಲ್ಲರೂ ನಮ್ಮ ಸ್ವಂತ ಅಸ್ತಿತ್ವವನ್ನೂ ಸಹ ಸರಿಯಾಗಿ ದರ್ಶಿಸಿಲ್ಲ. ನಾವು ಪರದೆಯ ಮುಖಾಂತರ ನಮ್ಮದೇ ಆದ ಮುಖಾರವಿಂದವನ್ನು ನೋಡುವಾಗ, ಅದರ ಅಸ್ಪಷ್ಟ ಚಿತ್ರಣವನ್ನು ತೋರುವ ಪರದೆಯನ್ನೇ ನಿಜವಾದ ಮುಖವೆಂದು ನಂಬಿ ಮೋಸಹೋಗುತ್ತೇವೆ. ಹಾಗಾಗಿ 'ನಾವು ಸತ್ಯವನ್ನರಿಯಬೇಕಿದ್ದರೆ, ನಾವು ಮೊದಲು ನಮ್ಮ ಸ್ವಂತ ಅಸ್ತಿತ್ವವನ್ನೇ ಕಾಣಲು ಪ್ರಯತ್ನಿಸಬೇಕು' ಎಂಬ ನುಡಿಗಟ್ಟನ್ನು ಹೇಳಿದವರೇ ಇನ್ನೊಂದು ನುಡಿಗಟ್ಟನ್ನು ಹೇಳಿದ್ದಾರೆ. ಅದೇನೆಂದರೆ, 'ಮಾನವನು ತನ್ನ ಹಿಂದಣ–ಪ್ರಸ್ತುತ ಅಸ್ತಿತ್ವವನ್ನೂ ಮೀರಿ ಬೆಳೆಯಬೇಕೆಂಬುದೇ ಅವನ ಸ್ವಭಾವವಾಗಿರುತ್ತದೆ. ಅವನ ಈ ಸ್ವಭಾವವು ಸಹಜವೂ–ಸ್ವಾಭಾವಿಕವೂ ಆಗಿದ್ದು, ಅವನ ಈ ಸ್ವಯಂ–ಅತಿಕ್ರಮಣದ ಸ್ವಭಾವವೇ ಅವನನ್ನು ಮಾನವ ಹಂತದಿಂದ ಅತಿಮಾನವ ಹಂತಕ್ಕೂ, ಅತಿಮಾನವ ಹಂತದಿಂದ ದೈವೀ ಪುರುಷನ ಹಂತಕ್ಕೂ ಕರೆದೊಯ್ಯುತ್ತದೆ.'

ಹಾಗಾದರೆ ನೀವು ಅತಿಕ್ರಮಿಸಿ ಮುಂದೋಡಬೇಕಿರುವ ನಿಮ್ಮ ಪ್ರಸ್ತುತ ಹಂತವಾದರೂ ಯಾವುದು? ನೀವು ಆರೋಹಣ ಪಥದಲ್ಲಿ ಸಾಗಿ ತಲುಪಬೇಕಿರುವ ಆಗಮ್ಯ ನೆಲೆಯಾದರೂ ಯಾವುದು? ಎಂಬುದೇ ನಿಮ್ಮ ಮುಂದಿರುವ ಬಹುಮುಖ್ಯ ಪ್ರಶ್ನೆ. ಈ ಪ್ರಜ್ಞಾ ಪ್ರಗತಿಯನ್ನು ಸಾಧಿಸಬೇಕಾದರೆ ನೀವು ಯಾವುದೇ ವಿಧವಾದ ಲೋಪದೋಷಗಳನ್ನು ಮಾಡಕೂಡದು. ಏಕೆಂದರೆ ನಿಮ್ಮಿಂದ ಜರುಗುವ ಈ ಅಲ್ಪ ಪ್ರಮಾಣದ ದೋಷಗಳೇ ಮುಂದೊಮ್ಮೆ ನಿಮ್ಮ ಮಾರ್ಗ ಪ್ರತಿಬಂಧಕಗಳಾಗಿ, ನಿಮ್ಮ ಎಲ್ಲಾ ದುಃಖಗಳಿಗೆ ಮೂಲಕಾರಣಗಳಾಗಿ, ನಿಮ್ಮ ಎಲ್ಲಾ ವೈಫಲ್ಯಗಳಿಗೂ ಸಾಧಕಗಳಾಗಿ, ನಿಮ್ಮ ಪ್ರಜ್ಞಾರೋಹಣವನ್ನು ಸ್ಥಗಿತಗೊಳಿಸುತ್ತವೆ.

ನೀವು ಅತಿಕ್ರಮಿಸಿ ಮುಂದೋಡಬೇಕಿರುವ ನಿಮ್ಮ ಪ್ರಸ್ತುತ ಹಂತವು ನೀವು ತಿಳಿದಿರುವ ನಿಮ್ಮ ಸ್ವ–ಅಸ್ತಿತ್ವವೇ ಆಗಿದೆ. ಅದು ನಿಮ್ಮ ಮಾನವೀ ಹಂತವೇ ಆಗಿದೆ. ಈ ಮಾನವನೆಂದರೆಯಾರು? ಅವನು ಈ ಮೃಣ್ಮಯದ ಭೌತಿಕ ಜೀವನಕ್ಕೆ ದಾಸನಾದ ವೈಚಾರಿಕ ಜೀವಿಯಾಗಿದ್ದಾನೆ; ಹಾಗೂ ಈ ಹಂತಕ್ಕೂ ಊರ್ಧ್ವದ್ದಲಿರುವ ಚೇತನನು ಭೌತಿಕ–ಜೀವನಕ್ಕೆ ದಾಸನಾಗಿರುವದಿಲ್ಲ ಬದಲಾಗಿ ಮನೋಮಯದ

ದಾಸ್ಯಕ್ಕೊಳಪಟ್ಟಿರುತ್ತಾನೆ. ಈ ದಾಸ್ಯತನವು ಅನುಪಲಬ್ಧವೂ–ಅಮೋಘವೂ ಆಗಿದ್ದು, ಕೇವಲ ಸೀಮಿತ ಸಂಖ್ಯೆಯ ಜೀವಿಗಳು ಮಾತ್ರ ಈ ಮನೋಮಯದ ದಾಸ್ಯಕ್ಕೆ ಒಳಪಟ್ಟಿರುತ್ತವೆ.

ನೀವು ಪ್ರವರ್ತನಗೊಳ್ಳಬೇಕೆಂದು ಅಪೇಕ್ಷಿಸುತ್ತಿರುವ ಅತಿಮಾನವ ಹಂತವು, ನಿಮ್ಮ ವೈಚಾರಿಕ ನಿಲುವು ಮತ್ತು ನಿಮ್ಮ ಭೌತಿಕ ಜೀವನದ ತೆರೆಮರೆಯ ಹಿಂದೆ ಬೈತಿಟ್ಟುಕೊಂಡಿರುವ ನಿಮ್ಮ ಸ್ವಯಂ ಅಸ್ತಿತ್ವವೇ ಆಗಿರುತ್ತದೆ. ನೀವು ಪರದೆಯ ಮುಸುಕಿನಲ್ಲಿ ಅಸ್ಪಷ್ಟವಾಗಿ ಕಾಣುತ್ತಿರುವ ಆ ನಿಮ್ಮ ನೈಜ ಅಸ್ತಿತ್ವವನ್ನು ಮರಳಿ ಪಡೆಯಲೆಂದೇ ನೀವು ನಿಮ್ಮ ಜೀವಮಾನವಿಡೀ ಶ್ರಮಿಸುತ್ತಿರುವಿರಿ. ನೀವು ಪಡೆಯಬಯಸುತ್ತಿರುವ ನಿಮ್ಮದೇ ಆದ ಆ ಸತ್ಯ ಸ್ವರೂಪವು ಮರ್ತ್ಯದ ಜಡ–ಜಂಜಡಗಳಿಂದ ಮುಕ್ತವಾದ, ಆಧ್ಯಾತ್ಮಿಕ ನಿಲುವಿನ, ದಿವ್ಯ ಚೈತನ್ಯದ, ಅತಿಮಾನವ ಹಂತದ, ಋತ ಪುರುಷನಾಗಿದ್ದಾನೆ. ನಿಮ್ಮ ಅನ್ನ(ಸ್ಥೂಲ ದೇಹ)–ಪ್ರಾಣ(ಜೀವನ) –ಮನ(ಮನಸ್ಸು)ಕ್ಕೂ ಊರ್ಧ್ವದಲ್ಲಿದ್ದು, ಈ ತ್ರಿವಿಧ ರೂಪದ ಕೋಶಗಳನ್ನು ಆಳುತ್ತಿರುವ ಅತಿಮಾನವ ಹಂತದ ಜೀವಿಯಾಗಿದೆ; ಈ ಪ್ರಕೃತಿಯ ಮೇಲೆ ಪುರುಷತ್ವವನ್ನು ಸ್ಥಾಪಿಸಲು, ನಿಮ್ಮ ಅತಿಮಾನಸ ಅಸ್ತಿತ್ವಕ್ಕೆ ನಿಮ್ಮ ಭೌತಿಕತೆಯೇ ಸಾಧನ. ಅದರ ಮೂಲಕವೇ ಅದು ನಿಮಗೆ ಪ್ರಕೃತಿಯನ್ನಾಳುವ ದೊರೆತನವನ್ನು ಕರುಣಿಸುತ್ತದೆ. ಈ ಸಾಧನೆ ಮುಂದುವರಿದಂತೆ ನಿಮ್ಮ ಆರೋಹಣವು ನಿಮ್ಮನ್ನು, ಆ ಇಡೀ ದೇವ ಗಣವನ್ನೇ ತನ್ನ ಪಾದದಡಿಯಲ್ಲಿ ಹೊಂದಿರುವ ದಿವ್ಯ ಮಾತೆಯ ಮಂಡಲದವರೆಗೂ ಕರೆದೊಯ್ಯುತ್ತದೆ. ಆ ಸ್ತರದಲ್ಲಿ ನಾವು ದಾಸ್ಯರಹಿತ–ಸ್ವಾತಂತ್ರ್ಯ, ಏಕಮೇವ–ಸಮನ್ವಯತೆ, ಅಮರ–ಚಿರಂತನತ್ವ, ನಿಶೆಯಾಚೆಯ–ಪ್ರಜ್ಞಾ ಪ್ರಕಾಶ, ಖೇದರಹಿತ–ಖೇಖ, ಆನಂದಾಧಿಪತ್ಯದ–ಅನಂತ ಶಾಂತಿಯ ಅನುಭವವನ್ನು ಪಡೆಯುತ್ತೇವೆ. ಕೊನೆಗೆ ದಿವ್ಯತೆಯನ್ನು ಕಂಡು–ಮನಗಂಡು, ದಿವ್ಯತೆಯೇ ತಾನಾಗಿ, ಅದರೊಳಗೆ ಒಂದಾಗಿ, ಚೈತನ್ಯದ ಚತುಃಸಮುದ್ರದಲಿ ಪ್ರತ್ಯೇಕಿಸಲಾಗದ ಹನಿಯೊಂದಾಗಿ ಬೆರೆಯುತ್ತೇವೆ. (ಇದುವೇ 'ಅಹಂ ಬ್ರಹ್ಮಾಸ್ಮಿ'ಯ ತತ್ವ.)

ನೀವು ನಿಮ್ಮ ಸ್ಥೂಲದಲ್ಲಿ ಸ್ವತಂತ್ರತೆಯನ್ನು ಅನುಭವಿಸಿರಿ, ನೀವು ನಿಮ್ಮ ಜೀವನದಲ್ಲಿ ಸ್ವತಂತ್ರತೆಯನ್ನು ಅನುಭವಿಸಿರಿ, ನೀವು ನಿಮ್ಮ ಮನದಲ್ಲಿ ಸ್ವತಂತ್ರತೆಯನ್ನು ಅನುಭವಿಸಿರಿ, ನೀವು ನಿಮ್ಮ ಇಡೀ ಭೌತಿಕ ನೆಲೆಯಲ್ಲಿ ಸ್ವತಂತ್ರತೆಯನ್ನು ಅನುಭವಿಸಿರಿ, ಏಕೆಂದರೆ ಇವೆಲ್ಲವುಗಳ ಮೇಲೆ ಪ್ರಭುತ್ವವನ್ನು ಸಾಧಿಸಿದ ನಿಮ್ಮ ಆತ್ಮವು ಸದಾ ಸ್ವತಂತ್ರವಾಗಿರುತ್ತದೆ.

ನಿಮ್ಮ ಅಹಮಿಕೆಯ ಪರಿಧಿಯೊಳಗೆ ನೀವೇ ಕಟ್ಟಿಕೊಂಡ ಗೂಡಿನೊಳಗೆ ಒಬ್ಬಂಟಿಗನಾಗಿ ಬದುಕುವದಕ್ಕಿಂತ, ಆ ಅಹಮಿಕೆಯ ಸೀಮೋಲ್ಲಂಘನ ಗೈದು, ಸಂಘ ಜೀವಿಯಾಗಿ ಬದುಕಿರಿ, ಆ ದೇವನೊಡನೆ ಒಂದಾಗಿರಿ, ಏಕೆಂದರೆ ನಿಮ್ಮ ಆತ್ಮವು ಏಕಮೇವತೆಯ ಪ್ರತಿಮೆಯಾಗಿದೆ.

ದಿವ್ಯತೆಯ ಚೈತನ್ಯದಿಂದ ಬದುಕಿರಿ, ಬರುವ ಸಾವಿಗಾಗಿ ಹೆದರಿ ಅಳ್ಳೆದೆಯವರಾಗದೆ ಬದುಕಿ ಅಮರತ್ವವನ್ನು ಸಾಧಿಸಿರಿ, ಏಕೆಂದರೆ ಮರಣವೆಂಬುದು ನಿಮ್ಮ ಸ್ಥೂಲ ದೇಹಕ್ಕನೇ ಹೊರತು ನಿಮ್ಮ ಆತ್ಮಕ್ಕಲ್ಲ. ಆತ್ಮವೆಂಬುದು ನಿತ್ಯ–ನಿರಂತರ, ಅಮರ–ಚಿರಂತನ.

ಅಮರತ್ವವನ್ನು ಸಾಧಿಸುವುದೆಂದರೆ, ಚ್ಯುತಿಯಿರದ ಅಸ್ತಿತ್ವ, ಪ್ರಜ್ಞೆ ಮತ್ತು ಆನಂದದ ಅನಂತ ಜಲರಾಶಿಯಲ್ಲಿ ನಿರಂತರವಾಗಿ ತೇಲುವುದು ಎಂದರ್ಥ. ಏಕೆಂದರೆ ಆತ್ಮವು ಅನಂತವೂ–ಅಪರಿಮಿತವೂ ಆಗಿದ್ದು, ಆ ಅಪರಿಮಿತದ ಒಂದಂಶವು ಮಾತ್ರ ಇಲ್ಲಿ ಪರಿಮಿತವಾಗಿ ಬದುಕುತ್ತಿರುತ್ತದೆ. ಆದರೆ ಅದರ ಒಟ್ಟೂ ಪರಿಧಿಯು ಮೂಲದಲ್ಲಿ ಅನಂತತೆಯನ್ನೇ ಸಂಕೇತಿಸುತ್ತದೆ.

ಈ ಅನಂತಾತ್ಮ, ಅನಂತ ಪ್ರಜ್ಞೆ ಮತ್ತು ಅನಂತಾನಂದಗಳೇ ನಿಮ್ಮ ಸ್ವಯಂ ಅಸ್ತಿತ್ವಗಳಾಗಿವೆ. ಹಾಗಾಗಿ, ನೀವು ಬಯಸಿದರೆ ನೀವು ಇವೆಲ್ಲವುಗಳನ್ನು ಸಾಧಿಸಬಹುದು. ಒಂದು ವೇಳೆ ನಿಮ್ಮೊಳಗೆ ಇವು ಯಾವುವೂ ಇಲ್ಲವೆಂದಾದರೆ ನೀವು ಇವುಗಳನ್ನು ಸಾಧಿಸಲು ಸಾಧ್ಯವಿಲ್ಲ. ನಿಮ್ಮೊಳಗೆ ಸುಪ್ತವಾಗಿ ಒರಗಿಕೊಂಡಿರುವ ನಿಮ್ಮ ನೈಜ ಗುಣಗಳು ಮಾತ್ರ ನಿಮ್ಮ ಬಾಹ್ಯ ಅಸ್ತಿತ್ವದಲ್ಲಿ ಪ್ರಕಟಗೊಳ್ಳಲು ಸಾಧ್ಯ. ಆದರೆ ಇದಾವುದರ ಪರಿವೆಯೂ ಇಲ್ಲದ ನೀವು, ನಿಮ್ಮ ನೈಜತೆಗೆ ವ್ಯತಿರಿಕ್ತವಾದ ಬದುಕನ್ನೇ ನಡೆಸುತ್ತಿರುತ್ತೀರಿ. ಸದಾ ನೀವು ದಾಸ್ಯದಲ್ಲಿಯೇ ಇರುವಿರೆಂಬ ಬಾಹ್ಯ ಅನಿಸಿಕೆಯಲ್ಲಿಯೇ ಬದುಕನ್ನು ದೂಡುತ್ತಿರುತ್ತೀರಿ.

ಬಿದ್ದಲ್ಲೇ ಬಿದ್ದ ಮೆದ್ದ ಹಾವಿನಂತಾಗದೇ ಅದರಿಂದ ಕೊಡವಿಕೊಂಡೇಳಬೇಕು, ನಿಮ್ಮತನವನ್ನು ಮೀರಿ ಬೆಳೆಯಬೇಕು, ನಿಮ್ಮ ಸ್ವ–ಅಸ್ತಿತ್ವವನ್ನು ಮರಳಿ ಪಡೆಯಬೇಕು. ನೀವು ಅರಿತಿರುವ ನಿಮ್ಮತನವು ಮೂಲದಲ್ಲಿ ನಿಮ್ಮ ಗ್ರಹಿಕೆಗೂ ನಿಲುಕದ ಊರ್ಧ್ವ ನೆಲೆಯ ಸ್ವಾಮಿತ್ವದ ಸಂಕೇತವಾಗಿದೆ. ಆ ಅಧಿಕಾರವನ್ನು ನೀವು ಹಿಂಪಡೆಯಬೇಕು. ಪಶುವಿಗಿಂತ ಹೀನನಾದ ನರನು ಪಶುಪತಿ ನಾಥನಾಗಿ ಬೆಳೆಯಬೇಕು, ನರ–ವಾನರನಾಗಿದ್ದವನು ಅಧಿಮಾನವನಾಗಿ–ಅತಿಮಾನವನಾಗಿ

ಮೆರೆಯಬೇಕು. ನಾವೆಲ್ಲ ತಿಳಿದಿರುವಂತೆ ಮಾನವನು ಕೇವಲ ಒಬ್ಬ ನರ ಪ್ರಾಣಿಯಲ್ಲ. ಅವನೊಬ್ಬ ಚಿಂತಕ, ಕುಶಲಕರ್ಮಿ, ಸೌಂದರ್ಯ ಸಂಶೋಧಕ. ಆದರೆ ಅವನೀಗ ಚಿಂತಕನಿಂದ ಜ್ಞಾನದರ್ಶಕನಾಗಿ ಬೆಳೆಯಬೇಕು, ಕುಶಲಕರ್ಮಿಯಿಂದ ಸಕಲ ಸೃಷ್ಟಿಯ ಸೃಷ್ಟಿಕರ್ತನಾಗಿ ಮೆರೆಯಬೇಕು, ಸೌಂದರ್ಯ ಸಂಶೊಧಕನಿಂದ ಸೌಂದರ್ಯೋಪಾಸಕನಾಗಿ ಮುಂದೊಮ್ಮೆ ಸೌಂದರ್ಯಾರಾಧಕನಾಗಿ ಕೊನೆಗೊಮ್ಮೆ ಸೌಂದರ್ಯಾನುಭವಿಯಾಗಿ–ಆನಂದಾನುಭವಿಯಾಗಿ ನೆಲೆಸಬೇಕು. ಭೌತಿಕ ನೆಲೆಯ ಮಾನವನು ಅಮರತ್ವವನ್ನು ಕರುಣಿಸುವ ದ್ರವ್ಯಕ್ಕಾಗಿ ಹಪಹಪಿಸುತ್ತಿರುತ್ತಾನೆ, ವೈಚಾರಿಕ ಸ್ತರದ ಮಾನವನು ಅಮರತ್ವದ ಬದುಕು ಮತ್ತು ಅನಂತ ಶಕ್ತಿಯ ಮೂಲವು ತನ್ನದಾಗಬೇಕೆಂದು ಬಯಸುತ್ತಾನೆ, ಆದರೆ ಮನೋಮಯ ಹಂತದ ಜ್ಞಾನಾನುಭವಿ ಮಾನವನು ಚ್ಯುತಿಯಿರದ ಹಗಲಿನಲ್ಲಿ ನೆಲೆಸಿ ಪೂರ್ಣ ಯೋಗ ದರ್ಶನವನ್ನು ಸಾಕ್ಷಾತ್ಕರಿಸಿಕೊಳ್ಳಲೆಂದು ಅಪೇಕ್ಷಿಸುತ್ತಾನೆ.

ಮಾನಸ ನೆಲೆಯಲ್ಲಿ ನಿಂತು ಈ ಯೋಗ ದರ್ಶನವನ್ನು ಸಂಪಾದಿಸುವ ಮಾನವನು ಅತಿಮಾನವನಾಗಿ ಬೆಳೆಯುತ್ತಾನೆ. ಮನೋಮಯದಿಂದ ಮೇಲೆರುವ ಪ್ರಜ್ಞೆಯು ತನ್ನೊಳಗೆ ಜಾಗೃತವಾದ ಅಂತಸ್ಫುರಣದಿಂದ ವೇಗೋತ್ಕರ್ಷಿತವಾಗಿ ಮುನ್ನುಗ್ಗುತ್ತದೆ. ಅದು ಅಧಿಮಾನಸವನ್ನೂ ಹಿಂದಿಕ್ಕಿ ಕೊನೆಗೊಮ್ಮೆ ಅತಿಮಾನಸದ ಮಹಾಕಾರಣಮಯವನ್ನು ತಲುಪುತ್ತದೆ. ದಿವ್ಯ ಮಾತೆಯ ಸನ್ನಿಧಿಯಾದ ಈ ವಲಯವನ್ನು ಪ್ರಜ್ಞಾನ ಮಂಡಲವೆಂದೂ, ದಿವ್ಯ ಮಾನಸವೆಂದೂ, ಸುಪ್ರಮಾನಸ–ವೆಂದೂ ಕರೆಯುವರು. ಆ ಸ್ತರವನ್ನು ತಲುಪಿದ ಸಾಧಕನು, ಅಲ್ಲಿ ನಿರಂತರವಾಗಿ ನಾದ ಗೈಯುತ್ತಿರುವ ದೈವೀ ಚೈತನ್ಯ ಮತ್ತು ದೈವೀ ಪ್ರಜ್ಞೆಗಳನ್ನು ಜಾಗೃತವಾಗಿರಿಸುವ ದಿವ್ಯ ಶಕ್ತಿ ಮತ್ತು ದಿವ್ಯ ಪ್ರಕಾಶಗಳ ಸಾನಿಧ್ಯವನ್ನು ಅನುಭವಿಸುತ್ತಾನೆ. ಈ ಸಾಧನೆ ಮುಂಬರಿದಂತೆ ಪ್ರಜ್ಞೆಗೆ ತನ್ನ ಆತ್ಮವು ವಿಶ್ವಾತ್ಮದ ಸಂಕೇತವೇ ಆಗಿದೆ ಎಂಬುದರ ಅರಿವಾಗುತ್ತದೆ. ಹಾಗೂ ಆ ಇಡೀ ವಿಶ್ವಾತ್ಮವನ್ನು ಸೃಷ್ಟಿಯಾದಿಯ ಹಂತದಲ್ಲಿ ತಾನೇ ಸ್ವತಃ ಸೃಜಿಸಿರುವೆನೆಂಬ ಸತ್ಯವು ದೃಗ್ಗೋಚರವಾಗುತ್ತದೆ. ಹಾಗೂ ಆ ಮೂಲಕ ತಾನೇ ರಚಿಸಿದ ವಿಶ್ವ ರಂಗ ಮಂಟಪದಲ್ಲಿ, ತಾನೇ ಭಾಗವತವಾಡಿಸಿ, ತಾನೇ ನಟಿಸಿ–ನಾಟ್ಯವಾಡುತಿಹ ವಿಶ್ವ ಲೀಲೆಯ ದರ್ಶನವಾಗುತ್ತದೆ. ಇದು ಸ್ವತಃ ಸ್ವರಾಟ್ ಸಾಮ್ರಾಟನಾಗಿರುವ ವಿಶ್ವಾತ್ಮವು, ತನ್ನದೇ ಪ್ರಭುತ್ವವಿಹ ಸೃಷ್ಟಿಯಲ್ಲಿ, ತನ್ನದೇ ಸಾರ್ವಭೌಮತ್ವವಿಹ ಈ ಪ್ರ–ಪಂಚದಲ್ಲಿ, ಮಹಾಸಾಗರದ ಹನಿಯೊಂದರಂತೆ ವಿಚ್ಛಿನ್ನವಾದರೂ ಅವಿಚ್ಛಿನ್ನವೆಂಬಂತೆ ಬದುಕುತ್ತಿರುವದನ್ನು ಪ್ರಚುರಪಡಿಸುತ್ತದೆ.

ಅತಿಮಾನವತೆಯನ್ನು ಸಂಪಾದಿಸಬೇಕಾದರೆ ಪ್ರಜ್ಞೆಯು ಮಾನಸವನ್ನು ದಾಟಿ, ಅಧಿಮಾನಸವನ್ನೂ ಮೀಟಿ, ಎದುರಾಗುವ ಆತ್ಮಗಹ್ವರದ ಸುರುಳಿಸುರಂಗದಿಂದ ಚಿಮ್ಮಿ, ಕೊನೆಗೊಮ್ಮೆ ಅತಿಮಾನಸದ ದಿವ್ಯ ಮಂಡಲವನ್ನು ಪ್ರವೇಶಿಸಲೇಬೇಕು. ಏಕೆಂದರೆ ಮಾನವತೆಯು ಮಾನಸಕ್ಕೂ ಆಚೆಗಿರುವ ಮಹಾಕಾರಣಮಯವನ್ನು ಅನುಭವಿಸಿದಾಗಲೇ ಅದಕ್ಕೆ ಅತಿಮಾನವತೆಯು ಆವರಿಸಿಕೊಳ್ಳುವುದು.

ಅತಿಮಾನವನಾಗಿ ಬಾಳುವುದೆಂದರೆ, ಸುರ ಗಣದ ದಿವ್ಯ ಜೀವನವನ್ನು ಅನುಭವಿಸುವುದೇ ಆಗಿದೆ. ಇದಕ್ಕೆ ಸಾಕಾರವಾದ ಪರಮ ಪುರುಷನ ಪೂರ್ಣಾಂಕಗಳಾದ ಸುರ ಗಣವು ವೈಶ್ವಿಕ ಶಕ್ತಿಗಳ ರೂಪದಲ್ಲಿ ನೆಲೆಸಿ ಚಿರಂತನತ್ವವನ್ನು ಸಾಧಿಸಿರುತ್ತವೆ. ಅಂತಹ ದಿವ್ಯ ಬದುಕನ್ನು ನಡೆಸಬಯಸುವ ಪ್ರಜ್ಞೆಯು ತಾನು ದರ್ಶಿಸಿ–ಅನುಭವಿಸಿದ ಅತಿಮಾನಸವನ್ನು ಇಳೆಗಿಳಿಸಿ, ಪೃಥ್ವಿಯ ವಾತಾವರಣದಲ್ಲಿ ಅದನ್ನು ಸ್ಥಾಪಿಸಿ, ಮರ್ತ್ಯದಲ್ಲೇ ಅಮರ್ತ್ಯತೆಯ ದಿವ್ಯ ಜೀವನವನ್ನು ಸಂಸ್ಥಾಪಿಸಬೇಕಾಗುತ್ತದೆ. ಈ ಭವವನ್ನೇ ದಿವವನ್ನಾಗಿ ಮಾರ್ಪಡಿಸಬೇಕಾಗುತ್ತದೆ.

ಅತಿಮಾನವತೆಯನ್ನು ಸಾಧಿಸಿದ ಅಸ್ತಿತ್ವವು ಆ ದಿವ್ಯ ಜೀವನದಲ್ಲಿಯೇ ಖಾಯಂ ಪೌರತ್ವವನ್ನು ಸಾಧಿಸಬೇಕಾದರೆ, ಆ ಆತ್ಮವು ತನ್ನ ಪ್ರಜ್ಞೆಯನ್ನು ಅತಿಮಾನಸವಕ್ಕೂ ಮೀರಿದ ಆನಂದಮಯದೆಡೆಗೆ ಆರೋಹಿಸಬೇಕು. ಆಗ ಮಾತ್ರ ಆತ್ಮದ ಜ್ಞಾನ–ಸಂಕಲ್ಪಗಳು ದಿವ್ಯತೆಯೊಂದಿಗೆ ಆಡುತ್ತವೆ. ಅದರೊಂದಿಗೆ ಒಡನಾಡುತ್ತವೆ. ಕೊನೆಗೆ ಅದರೊಳಗೆ ಒಂದಾಗುತ್ತವೆ. ಇದುವೇ ದಿವ್ಯ ಜೀವನದ ಪ್ರಕ್ರಿಯೆ.

ಒಂದೊಮ್ಮೆ ತನ್ನ ಪ್ರಜ್ಞೆಯ ಗಿರಿ ಶಿಖರವನ್ನೇರಿದ ಆತ್ಮವು, ಅಲ್ಲಿ ತನ್ನ ಅನ್ನಮಯವನ್ನು ಆನಂದಮಯವಾಗಿ ಪರಿವರ್ತಿಸಿಕೊಂಡಲ್ಲಿ, ಅದು ಪರಮ ಪುರುಷನನ್ನು ದರ್ಶಿಸುತ್ತದೆ. ಪರಮಾತ್ಮನೇ ತಾನಾಗುತ್ತದೆ. ವಿರಾಟ್ ಪುರುಷನ ದಿವ್ಯ ಜ್ಯೋತಿ–ದಿವ್ಯ ಜ್ಞಾನ–ದಿವ್ಯ ಶಕ್ತಿ ಮತ್ತು ದಿವ್ಯಾನಂದಗಳಲ್ಲಿ ಒಂದಾಗುತ್ತದೆ. ಆತ್ಮವೊಂದು ಪ್ರಖರ ಜ್ವಾಲಾಗ್ನಿಯಲ್ಲಿ ಪುಟವಿಕ್ಕಿ ಸ್ವಯಂಸೂರ್ಯನಾಗುವ, ಆ ಸೋಮ ಮಂಡಲದ ಅನಂತ ಜಲರಾಶಿಯ ಜಲ ಬಿಂದುವಾಗುವ ಅದ್ಭುತ ಕ್ಷಣವದು! ಇಡಿಯಿಂದ ಸಿಡಿದು ಬಿಡಿಯಾಗಿ ಹೋದ ಜಂಗಮ ಜಿಷ್ಣುವು ಪುನಃ ಸ್ಥಾಣು ವಿಷ್ಣುವಿನಲ್ಲಿ ಐಕ್ಯವಾಗುವ ಅಮೋಘ ಘಳಿಗೆಯದು! ಆ ಪುನರ್ ಮಿಲನವನ್ನು, ಪರಮ ಸೌಂದರ್ಯವನ್ನು, ಪರಮಾದ್ಭುತವನ್ನು ವಿಶ್ವದ ಸಕಲಾತ್ಮಗಳೂ ಸಂಪಾದಿಸಬೇಕೆಂಬುದೇ ಋತಂಬರದ ನಿಯಮ.

ಪ್ರಜ್ಞಾರೋಹಣದ ಈ ಸಪ್ತ ಪಾತಳಿಗಳನ್ನು ಆರೋಹಿಸಿ ದಿವ್ಯ ಜೀವನವನ್ನು ಅನುಭವಿಸುತ್ತಿರುವ ಆತ್ಮವು, ಋತದ ಅತಿಮಾನವತೆಯ ಮೊದಲ ಮೆಟ್ಟಿಲನ್ನು ಮಾತ್ರ ಏರಿದಂತಾಗುತ್ತದೆ. ಏಕೆಂದರೆ ಸಾಧನೆಯ ಶಿಖರವೆಂಬುದು ಅನಂತವೂ–ಸುವಿಶಾಲವೂ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/150–152 – ಶ್ರೀ ಅರವಿಂದರು**

## ಅಜ್ಞಾನದ ಸುಳಿಯಿಂದ ಪಾರಾಗುವ ಕ್ರಮಗಳು

ಪ್ರಕೃತಿದತ್ತವಾದ ಅಹಮಿಕೆಯು ಮರ್ತ್ಯದ ಜಡ ಭೌತಿಕ ಸ್ತರದಲ್ಲಿ ತನ್ನದೇ ಆದ ಪ್ರಭುತ್ವವನ್ನು ಸ್ಥಾಪಿಸಿದ್ದು, ಅದು ವ್ಯಕ್ತಿಗತವಾದ ಚೇತನಗಳನ್ನು ಉಪ ಪ್ರಜ್ಞೆ ಮತ್ತು ಅಪ್ರಜ್ಞೆಗಳಿಂದ ದೂರವಾಗಿಸಿ, ಆತ್ಮಗಳು ಸಂಘ ಜೀವನವನ್ನು ತೊರೆದು ಏಕಾಂಗಿ ಬದುಕನ್ನು ನಡೆಸುವಂತೆಯೂ, ಸುತ್ತಣ ಪ್ರಪಂಚದೊಂದಿಗಿನ ಸಂಪರ್ಕಗಳನ್ನು ಕಳೆದುಕೊಳ್ಳುವಂತೆಯೂ ಪ್ರಚೋದಿಸುತ್ತಿರುತ್ತದೆ. ಆದರೆ, ಸ್ಥೂಲ ಚೇತನಗಳು ಅಷ್ಟು ಸುಲಭವಾಗಿ ಅಹಮಿಕೆಯ ಸುಳಿಯಲ್ಲಿ ಸಿಲುಕಿ, ಪ್ರತ್ಯೇಕ ಜೀವನವನ್ನು ನಡೆಸುವದಿಲ್ಲ. ಏಕೆಂದರೆ ಜಗದ ಪ್ರತಿಯೋರ್ವ ಆತ್ಮಗಳೂ ಆ ಚಿರಂತನವಾದ ವಿಶ್ವಾತ್ಮದ ಅವಿಭಾಜ್ಯ ಅಂಗಗಳೇ ಆಗಿರುತ್ತವೆ. ಅವು ಎಂದಿಗೂ ತಮ್ಮ ಬಂಧವನ್ನು ಸಡಿಲಿಸಿಕೊಳ್ಳುವದಿಲ್ಲ. ಪರಬ್ರಹ್ಮದಿಂದ ಬಂದ ಪರಮಾತ್ಮದ ಭಾಗಗಳು ಅಹಮಿಕೆಯ ಪ್ರಲೋಭನೆಗೆ ಒಳಗಾಗಿ ಏಕಾತ್ಮವಾಗಿ ಪರಿವರ್ತನೆಯಾಗದಿದ್ದರೂ ಸಹ ಆ ಅಹಮಿಕೆಯ ಅಲ್ಪ ಪ್ರಮಾಣದ ಪ್ರಭಾವಕ್ಕೆ ಒಳಗಾಗಿರುವುದರಿಂದ ಅವುಗಳಿಗೆ ಮೃಣ್ಮಯದಲಿ ತಮ್ಮ ಮೂಲ ಸ್ವರೂಪವನ್ನು ಪ್ರಕಟಪಡಿಸಲು ಸಾಧ್ಯವಾಗುವದಿಲ್ಲ. ಅಪ್ರಜ್ಞೆಯ ಮೂಲಕ್ಕೆ ಹತ್ತಿರವಾಗಿಯೂ, ಅತಿ ಪ್ರಜ್ಞೆಯ ಮೂಲಕ್ಕೆ ದೂರವಾಗಿಯೂ ನೆಲೆಸಿರುವ ಆತ್ಮಗಳಲ್ಲಿ ಈ ರೀತಿಯ ಸಂದಿಗ್ಧಗಳಾಗುವುದು ಸಹಜ. ಆದರೆ ಅತೀತವನ್ನು ಅರಿತ ಕೆಲವಾರು ಆತ್ಮಗಳು ಮಾತ್ರ ತಮ್ಮನ್ನು ತನ್ನ ಸುಪರ್ದಿಗೆ ಎಳೆದುಕೊಳ್ಳಬೇಕೆಂದು ಪ್ರಯತ್ನಿಸುತ್ತಿರುವ ಅಪ್ರಜ್ಞೆಯ ಸುಳಿಯಿಂದ ಪಾರಾಗಿ, ಸದಾ ಜ್ಯೋತಿ ಸ್ವರೂಪವಾಗಿರುವ ಅತಿ ಪ್ರಜ್ಞೆಯ ಮಂಡಲಕ್ಕೆ ನೆಗೆದು ಅತಿಮಾನವತೆಯನ್ನು ಸಾಧಿಸಿಕೊಳ್ಳುತ್ತವೆ. **ಹೀಗೆ ವಿಜ್ಞಾನಮಯದ ಆತ್ಮ ಮಂಡಲದೆಡೆಗೆ ಆರೋಹಿಸಬೇಕಿರುವ ಪ್ರಜ್ಞೆಯು ಮೊದಲು ತನ್ನ ವೈಚಾರಿಕ ಮತ್ತು ಬೌದ್ಧಿಕ ಸ್ಥಿತಿಗಳನ್ನು ಅರಿತುಕೊಳ್ಳಬೇಕಾಗುತ್ತದೆ.**

ಪ್ರತಿಯೋರ್ವರಲ್ಲೂ ಸುಪ್ತವಾಗಿರುವ ಅಹಮಿಕೆಯ ವ್ಯಕ್ತಿತ್ವಗಳೇ ಅವರ ಪೂರ್ಣ ಸ್ವರೂಪಗಳಾಗಿರುವುದಿಲ್ಲ. ಆತ್ಮದ ಮೂಲ ಸ್ವರೂಪವಾದ ಅತೀಂದ್ರಿಯತೆಯನ್ನು ಕೇವಲ ಅದರ ಅನ್ನ–ಪ್ರಾಣ–ಮನದ ಅಹಮಿಕೆಯ ಸ್ವರೂಪದಿಂದ ಅಳೆಯಲು ಸಾಧ್ಯವಾಗುವದಿಲ್ಲ. ಅಹಮಿಕೆಯ ಸೀಮೆಯಿಂದ ಪಾರಾಗಬಯಸುವ ಆತ್ಮಗಳು ಮೊದಲು ತನ್ನದೇ ಆದ ಇಚ್ಛೆ, ಶಕ್ತಿ ಮತ್ತು ಸ್ವಯಂಕೃತ ಅಹಂಕಾರಗಳ ವಿರುದ್ಧ ಹೋರಾಡಬೇಕಾಗುತ್ತದೆ. ಆಗಮಾತ್ರ ಆತ್ಮವು ಜ್ಞಾನವೆಂಬ ಎರಡನೆಯ ಹಂತವನ್ನು ಏರಲು ಸಾಧ್ಯವಾಗುತ್ತದೆ. ಒಂದೊಮ್ಮೆ ಮಾನವನು ತನ್ನ ಅಹಮಿಕೆಯ ಅಸ್ಪಷ್ಟ ಕಾಣ್ಕೆಯ ಮಟ್ಟದಿಂದ ಕೆಳಗಿಳಿದು ಸುಸ್ಪಷ್ಟವಾದ ಜಗತ್ತನ್ನು ನೋಡಲು ಶಕ್ಯನಾದಲ್ಲಿ ಆತ ಮೊದಲು ತನ್ನನ್ನು ತಾನು ಕಂಡುಕೊಳ್ಳಬೇಕು. ಆನಂತರ ಪರಮ ಪುರುಷನನ್ನು ಹುಡುಕಹೊರಡಬೇಕು. ಇಲ್ಲವಾದರೆ ಆತನು ಜಡ ಸ್ತರದಲ್ಲಿ ಪ್ರಕೃತಿ ಕಲಿಸಿದ ಪ್ರಾಥಮಿಕ ಹಂತದ ಬೋಧನೆಯಲ್ಲಿಯೇ ಸಿಲುಕಿಕೊಳ್ಳುತ್ತಾನೆಯೇ ಹೊರತು ಅವಳ ಸುಭಿಕ್ಷವೂ–ಸುವಿಶಾಲವೂ ಆದ ಜ್ಞಾನ ಪರಿಧಿಯೊಳಗೆ ಪ್ರವೇಶಿಸಲಾರ. ಇಷ್ಟಾಗಿಯೂ ಸಹ ಮಾನವನು ತನ್ನ ಅಭಿಪ್ಸೆಯ ಉತ್ತುಂಗದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಪೂರೈಸಿದಾಗ್ಯೂ ಸಹ ವಿಕಾಸವಾದದ ನೆಲೆಯಲ್ಲಿ ಆತ ಮೃಗೀಯತನದ ಹಂತದಿಂದ ಒಂದು ಹೆಜ್ಜೆ ಮಾತ್ರ ಮುಂದಿದ್ದಾನೆಯೇ ಹೊರತು ಪ್ರಾಣಿಕ ಸ್ತರದಿಂದ ಅಷ್ಟೇನೂ ಎತ್ತರವನ್ನು ಏರಿಲ್ಲ. ಹಾಗಾಗಿ ಮಾನವನು ಮಾಡಬೇಕಿರುವ ಅತಿಮುಖ್ಯವಾದ ಕಾರ್ಯವೆಂದರೆ ಆತ ತನ್ನ ದೃಷ್ಟಿಯನ್ನು ತನ್ನದೇ ಆದ ಮನೋವಿಜ್ಞಾನದ ಮೇಲೆ ಕೇಂದ್ರೀಕರಿಸಬೇಕು. ಹಾಗೂ ಅಲ್ಲಿಗೆ ಗೋಜಲುಗೋಜಲಾಗಿ ಹಬ್ಬಿ ತನ್ನ ಆತ್ಮವನ್ನು ಆವರಿಸಿದ ದೇಹ, ಜೀವ, ಮನ, ಅಹಂಕಾರಗಳೆಂಬ ರಾಶಿಗಳನ್ನು ಪ್ರತ್ಯೇಕಿಸಬೇಕು. ಎಲ್ಲಿಯವರೆಗೆ ಅವನಿಗೆ ತನ್ನ ಇಡೀ ಅಸ್ತಿತ್ವಕ್ಕೆ ತಾನು ಪ್ರಕೃತಿ ದ್ರವ್ಯಗಳೊಂದಿಗೆ ನಿರ್ವಹಿಸುತ್ತಿರುವ ಕಾರ್ಯಕ್ಕೂ ಅಧಿತರವಾದ ವಿವರಣೆಯ ಅಗತ್ಯವಿದೆ ಎಂಬುದರ ಅರಿವಾಗುವದಿಲ್ಲವೋ, ಎಲ್ಲಿಯವರೆಗೆ ಅವನಿಗೆ ತನ್ನ ಕಾರ್ಯದಿಂದ ತಾನು ಗಳಿಸುವ ಫಲ ಮತ್ತು ಸ್ವಗತ ತೃಪ್ತತೆಗೂ ಮೀರಿದ ಗಮ್ಯತೆಯ ಅಗತ್ಯವಿದೆ ಎಂಬುದರ ಅರಿವಾಗುವದಿಲ್ಲವೋ, ಅಲ್ಲಿಯವರೆಗೂ ಅವನ ಈ ಸಮೀಕರಣದ ಕಾರ್ಯವು ಮುಂದುವರಿಯಲೇಬೇಕು. ಈ ಸಾಧನಾ ಮಾರ್ಗವು ಅವನನ್ನು ಪ್ರಕೃತಿ ಮತ್ತು ಮಾನವೀಯತೆಯ ಪ್ರಪಂಚದಲ್ಲಿ ಅವನಿಗಿರುವ ಗುರಿಯೆಡೆಗೆ ಕರೆದೊಯ್ಯುತ್ತದೆ. ಸುತ್ತಣ ಜಗತ್ತಿನೊಡನೆ ಅವನಿಗಿರುವ ಅನಿನಾಭಾವವೂ–

ಏಕಮೇವತೆಯೂ ಆದ ಸುಸಂಬಂಧಗಳ ಅರಿವನ್ನು ನೀಡುತ್ತದೆ. ಈ ಸಾಧನೆಯು ಇನ್ನೂ ಒಂದು ಹಂತ ಮೇಲೆರಿದಂತೆ ಅಲ್ಲಿ ಅವನಿಗೆ ದಿವ್ಯ ಮಂಡಲ ಮತ್ತು ಪರಮ ಪುರುಷನ ಜೊತೆಗಿರುವ ತನ್ನ ಸಮನ್ವಯತೆಯ ದರ್ಶನವಾಗುತ್ತದೆ. ಹೀಗೆ ಅತಿಮಾನವತೆಯನ್ನು ಸಾಧಿಸಲಿರುವ ಮಾನವನು ಭುವಿ–ಭುವನ, ಮರ್ತ್ಯ–ಅಮರ್ತ್ಯಗಳೆರಡರಲ್ಲೂ ತನ್ನ ಅಸ್ತಿತ್ವಕ್ಕಿರುವ ಪರಮ ಗುರಿಯನ್ನು ಕಂಡುಕೊಳ್ಳುತ್ತಾನೆ.

ಭುವಿಯಲ್ಲಿ ತನ್ನ ಅವತರಣಕ್ಕಿರುವ ಪರಮ ಗುರಿಯನ್ನು ಅರಿತ ಆತ್ಮವು, ಪರಿಪಕ್ವ–ಪರಿಪೂರ್ಣತೆಯ ಸಾಕಾರವಾದ ತನ್ನದೇ ಆದ ವಿಶ್ವಾತ್ಮ ಮೂಲದೆಡೆಗೆ ಆರೋಹಿಸಿ, ಅಲ್ಲಿ ತನ್ನ ಮೂಲ ಸ್ವರೂಪವನ್ನು ದರ್ಶಿಸಲು ಪ್ರಕೃತಿದತ್ತವಾದ–ಪುರುಷದತ್ತವಾದ ಜ್ಞಾನ ಧಾರೆಗಳು ಅದಕ್ಕೆ ಸಹಾಯಕ ಅಂಶಗಳಾಗಿ ನಿಲ್ಲುತ್ತವೆ. ಹಾಗೂ ಅಲ್ಲಿ ಪರಬ್ರಹ್ಮ ಸ್ವರೂಪಿಯಾದ ತನ್ನ ಪರಮಾತ್ಮವನ್ನು ಸೇರಿಕೊಳ್ಳುತ್ತದೆ.

ವಿಶ್ವಾತ್ಮ ಸ್ವರೂಪಿಯಾದ ಜಡ ಚೇತನಗಳೆಲ್ಲವೂ ತಮ್ಮ ಅನಂತ ವ್ಯಾಪ್ತಿಯನ್ನು ಕಂಡುಕೊಳ್ಳಲೇಬೇಕು. ದಿವ್ಯ ಪ್ರಜ್ಞೆಯೆಡೆಗೆ ವ್ಯಕ್ತಿಗತವಾಗಿ ತೋರುವ ಸ್ವ–ಅರ್ಪಣೆ, ಸಮರ್ಪಣೆಯ ಮನೋಭಾವನೆಗಳೇ ಅವರನ್ನು ಒಂದೊಮ್ಮೆ ಅವರ ಸ್ವಯಂ–ಶೋಧನೆಯ ಕಾರ್ಯದಲ್ಲಿ ತೊಡಗಿಸುತ್ತದೆ. ಈ ಸ್ವ–ರೂಪ ಸಂಶೋಧನೆಯಲ್ಲಿ ನಿರತವಾದ ಪ್ರಜ್ಞೆಯು ತನ್ನೊಳಗಿನ ಭೌತಿಕ–ವೈಚಾರಿಕ–ಮಾನಸಿಕ ಮತ್ತು ಅದಕ್ಕೂ ಉನ್ನತತರವಾದ ಅತೀಂದ್ರಿಯ ಅಹಮಿಕೆಯನ್ನು ತೊಡೆದು ಹಾಕಿ ದಿವ್ಯತೆಯೊಡನೆ ಸಮರ್ಪಣಾ ಭಾವನೆಯೊಂದಿಗೆ ಅನುಸಂಧಾನಗೊಂಡಾಗಲೇ ಅದಕ್ಕೆ ಶಾಂತಿ–ಆನಂದಗಳ ಅನಂತ ವಾರಿಧಿಯ ಚಿರಂತನ ಪಯಣಿಗನಾಗಲು ಸಾಧ್ಯ! ಅಲ್ಲಿಯವರೆಗೆ ತಾನು ಯಾರೆಂಬುದರ ಅರಿವಿಲ್ಲದೆ, ಈ ಅಪರಿಮಿತ ಬ್ರಹ್ಮಾಂಡದಲ್ಲಿ ತಾನೊಬ್ಬ ಏಕಾಕಿ–ಅಲೆಮಾರಿಯೆಂಬ ಭ್ರಮೆಯಲ್ಲಿದ್ದ ಪ್ರಜ್ಞೆಗೆ ತಾನು ಈ ಪರಬ್ರಹ್ಮದ ಅವಿಭಾಜ್ಯ ಅಂಗವೆಂಬ ಸತ್ಯದ ಅರಿವಾಗುತ್ತದೆ. ಸಕಲ ಸೃಷ್ಟಿಯ ಕಾರ್ಯಕರ್ತ ಆತ್ಮಗಳಲ್ಲಿ ತಾನೂ ಒಬ್ಬನೆಂಬ ಋತದ ದರ್ಶನವಾಗುತ್ತದೆ. 'ಸರ್ವಂ ಖಲಿದ್ವಂ ಬ್ರಹ್ಮ' ಎಂಬ ವಿಶ್ವವಾಣಿಯ ಸಾಕ್ಷಾತ್ಕಾರವಾಗುತ್ತದೆ. ಯೋಗ ಮಾರ್ಗದ ಅಂತಿಮ ಘಟ್ಟವೆಂಬಂತೆ ಪರಬ್ರಹ್ಮದಿಂದ ಬೇರಾಗಿ ಬಂದು ಅಪರಿಮಿತದಲ್ಲಿ ಪರಿಮಿತವಾಗಿ ಬದುಕಿದ್ದ ಚೇತನಗಳು ಮರಳಿ ತಮ್ಮ ಮೂಲ ನೆಲೆಯೆಡೆಗೆ ಸಾಗಿ, ತಮ್ಮ ಮೂಲ ಸ್ವರೂಪದೊಳಗೆ ಒಂದಾಗುವ ಆ ಅದ್ಭುತ ದೃಶ್ಯಕ್ಕೆ ಸಾಕ್ಷಿಯಾಗುತ್ತವೆ. ಈ ಪರಮ ದರ್ಶವನ್ನು ಸಾಧಿಸುವುದು ಅಷ್ಟು ಸುಲಭವಲ್ಲ. ಬ್ರಹ್ಮನೇ ತಾನಾಗುವ,

ಅದರೊಳಗೊಂದಾಗುವ ಅದೃಷ್ಟವು ಸರ್ವ ಆತ್ಮಗಳಿಗೆ ಸಾಧ್ಯವಿಲ್ಲ. ಯಾವ ಆತ್ಮಗಳು ತಮ್ಮ ಅಸ್ತಿತ್ವದ ಮೇಲೆ ಪ್ರಭುತ್ವವನ್ನು ಸ್ಥಾಪಿಸಿ ತಮ್ಮನ್ನು ತನ್ನ ಕೈಗೊಂಬೆಯಂತೆ ನಡೆಸಲು ಪ್ರಯತ್ನಿಸುತ್ತಿರುವ ಅಹಂನ್ನು ಮೆಟ್ಟಿ ಮುನ್ನುಗ್ಗುವವೋ, ಯಾವ ಆತ್ಮಗಳು ತಮ್ಮ ಸಾಧನೆಗೆದುರಾಗಿ ಸವಾಲೊಡ್ಡುವ ಮಾರ್ಗ ಪ್ರತಿಬಂಧಕಗಳನ್ನು ತೊಡೆದು ಮೇಲೇರುವವೋ, ಅಂತಹ ಸಮರ್ಥಾತ್ಮಗಳು ಮಾತ್ರ ಆ ಜಗದಾತ್ಮದೊಡನೆ ಸಮನ್ವಯತೆಯನ್ನು ಸಾಧಿಸುತ್ತವೆ. ಅಲ್ಲಿ 'ನಾನು–ನೀನು–ಆನು–ತಾನು'ಗಳೆಂಬ ಪ್ರತ್ಯೇಕತಾ ವಿರೋಧಾಭಾಸಗಳು ಮರೆಯಾಗಿ ಸರ್ವವೂ ಒಂದೇ ಎಂಬ ದಿವ್ಯ ವಾಸ್ತವತೆಯ ಅನಾವರಣವಾಗುತ್ತದೆ.

ವಿಜ್ಞಾನಮಯದ ಕೋಶದ ಹಿಂದೆ ತೆರೆಮರೆಯಲ್ಲಿದ್ದುಕೊಂಡು ಮನ–ಪ್ರಾಣ–ದೇಹಗಳನ್ನು ಪಾಲಿಸುತ್ತಿರುವ ಪ್ರಕೃತಿ–ಪುರುಷರ ದಿವ್ಯ ಸಂಬಂಧವನ್ನು ಅರಿತುಕೊಳ್ಳುವುದರ ಜೊತೆಜೊತೆಗೆ ಮಾನವ ಹಂತದ ಉನ್ನತ ಆತ್ಮಜ್ಞಾನದ ಆರೋಹಣವೂ ಪ್ರಾರಂಭವಾಗುತ್ತದೆ. ಈ ಪ್ರಜ್ಞಾರೋಹಣದ **ಪ್ರಥಮ ಹಂತ**ದಲ್ಲಿ ಮಾನವನು, 'ಈ ಜಡ ಭೌತಿಕವಾದ ಮೃಣ್ಮಯವೇ ವಿಕಸನದ ಅಂತಿಮ ಹಂತವಲ್ಲವೆಂದೂ, ಈ ಸ್ಥೂಲ ಜೀವನಕ್ಕೂ ಊರ್ಧ್ವದಲ್ಲಿ ಚ್ಯುತಿಯಿರದ ಆನಂದದ ನೆಲೆಯೊಂದು ಚಿರಂತನವಾಗಿ ನೆಲೆಸಿದ್ದು, ಅದು ಸದಾ ಮರ್ತ್ಯವನ್ನು ಅಮರ್ತ್ಯವನ್ನಾಗಿಸಿ ಬೆಳಗಿಸಬೇಕೆಂಬ ಮಹೋನ್ನತ ಕಾರ್ಯದಲ್ಲಿ ನಿರತವಾಗಿ ಭುವಿಯ ಆತ್ಮಗಳನ್ನು ಆ ದಿವ್ಯ ಜೀವನಕ್ಕಾಗಿ ಸಿದ್ಧಗೊಳಿಸಲು ಪ್ರಯತ್ನಿಸುತ್ತಿದ್ದು, ಅದು ತನ್ನ ಅಸ್ತಿತ್ವಕ್ಕೆ ಪೂರ್ವದಲ್ಲಿಯೂ, ತನ್ನ ಅಸ್ತಿತ್ವದ ಅನಂತರವೂ ಚಲನಶೀಲವಾಗಿ ಕಾರ್ಯಪ್ರವೃತ್ತವಾಗಿದ್ದು, ಅದರ ಕ್ಷಮತೆಯು ಅಗಣಿತವೂ–ಅನಂತವೂ ಆಗಿದ್ದು, ಮಾನವತೆಯ ಪರಿಮಿತವಾದ ಪರಿಧಿಯನ್ನು ಅತಿಮಾನವತೆಯ ಅಪರಿಮಿತವಾದ ವೈಶಾಲ್ಯಕ್ಕೆ ಹಿಗ್ಗಿಸಬೇಕೆಂದು ಸೃಷ್ಟಿಯಾದಿಯಿಂದಲೂ ಪ್ರಯತ್ನಿಸುತ್ತಿದ್ದು, ಅದರ ಈ ಕಾರ್ಯವೂ ಸೃಷ್ಟಿಯಾಂತ್ಯದವರೆಗೂ ಬಿಡುವಿರದೆ ಸಾಗುತ್ತಿರುತ್ತದೆ' ಎಂಬ ಸತ್ಯವನ್ನು ಅರಿತುಕೊಳ್ಳುತ್ತಾನೆ. ಇನ್ನು ಪ್ರಜ್ಞಾರೋಹಣದ **ಎರಡನೆಯ ಹಂತ**ದಲ್ಲಿ ತನ್ನ ಸಾಧನೆಗೆ ಬೇಕಾಗಿರುವ ಆರಂಭಿಕ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾನೆ. ತಾನು ನೆಲೆಸಿರುವ ಪ್ರಸ್ತುತ ಸ್ತರವಾವುದು? ತಾನು ಏರಿಹೋಗಬೇಕಿರುವ ಆ ದಿವ್ಯ ನೆಲೆ ಯಾವುದು? ಈ ಮಂಡಲವನ್ನು ಪ್ರವೇಶಿಸಲು ತನಗೆ ಬೇಕಿರುವ ಅವಶ್ಯಕ ಅಂತರ್ದ್ರವ್ಯಗಳಾವುವು? ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುತ್ತಾ, ತನ್ನ ಸೀಮಿತ ಪರಿಧಿಯನ್ನು

ಹಿಗ್ಗಿಸಿಕೊಳ್ಳಲೋಸುಗ ತನ್ನೊಳಗಿನ ಅಜ್ಞಾನದ ಬೇರುಗಳನ್ನು ಬುಡಸಮೇತ ಕಿತ್ತಸೆದು, ತನ್ನ ಆರೋಹಣ–ಅವರೋಹಣದ ಪಾತಳಿಗಳನ್ನು ಅಳೆಯುವ ಆಂತರಿಕ ಸಾಧನವೊಂದನ್ನು ಕಂಡುಕೊಳ್ಳುತ್ತಾನೆ. ಅದರ ಸಹಾಯದೊಂದಿಗೆ ತನ್ನ ಉಪ ಪ್ರಜ್ಞೆ–ಅಪ್ರಜ್ಞೆಗಳಾಳದ ಕತ್ತಲ ಕೂಪಗಳೆಡೆ ಜಾರಿಹೋಗುವ ಕಂದಕ ಮಾರ್ಗಗಳನ್ನು ತೊರೆದು ಅತಿ ಪ್ರಜ್ಞೆಯ ಊರ್ಧ್ವ ಮೂಲದೆಡೆಗೆ ಏರಿಹೋಗಲಿರುವ ವಿಕಸನದ ನಿಃಶ್ರೇಣಿಯ ಒಂದೊಂದೇ ಮೆಟ್ಟಿಲುಗಳನ್ನು ಏರಲು ಪ್ರಯತ್ನಿಸುತ್ತಾನೆ. ಇಲ್ಲಿಗೇ ಅವನ ಆತ್ಮದ ಆರೋಹಣ ಪ್ರಕ್ರಿಯೆಯು ಆರಂಭಗೊಳ್ಳುತ್ತದೆ. ಕೊನೆಗೆ **ಮೂರನೆಯ ಹಂತ**ದಲ್ಲಿ ಪ್ರಜ್ಞೆಯು ತನ್ನ ಭೌತಿಕದ ಅನ್ನಮಯ, ಜೀವನ ಸಂಗ್ರಾಮದ ಪ್ರಾಣಮಯ, ಸ್ಮೃತಿ–ಬುದ್ಧಿ–ಕಲ್ಪಕತೆಗಳನ್ನು ಹೆಣೆಯುವ ಮನೋಮಯಕ್ಕೂ ಆಚೆಗಿರುವ ಉನ್ನತ ಸ್ತರಗಳ ಶೋಧನೆಯಲ್ಲಿ ತೊಡಗುತ್ತದೆ; ತನ್ನ ಔನ್ನತ್ಯದೆಡೆಗೆ ಏರಿಹೋಗಲೆಂದು ಹೆಣಗುತ್ತಿರುವ ವ್ಯಕ್ತಿಗತ ಆತ್ಮವೂ, ಪ್ರಜ್ಞೆಯ ಗಿರಿ ಶಿಖರದಲ್ಲಿ ನಿಂತು ತನ್ನ ಮರ್ತ್ಯ ಪಯಣಿಗ ಆತ್ಮವನ್ನು ಭುವಿಯಿಂದ ಹಿಡಿದೆತ್ತಲೆಂದು ಕೈಚಾಚಿರುವ ಪರಮಾತ್ಮವೂ ಪರಸ್ಪರದಲ್ಲಿ ಒಂದು ಮತ್ತೊಂದರ ಪ್ರತಿರೂಪವೇ ಆಗಿದ್ದು; ತಾನೇ ತನ್ನಿಂದ ದೂರವಾಗುವ, ಕೊನೆಗೆ ತಾನೆ ತನ್ನೊಳಗೆ ಒಂದಾಗುವ ಪ್ರಕ್ರಿಯೆಯನ್ನು ಅರಿತು, ಈ ಜೀವ–ದೇವಗಳ ಮಧ್ಯದಲ್ಲಿ ನಿರಂತರವಾಗಿ ಜರುಗುತ್ತಿರುವ ಏರಿಳಿತಗಳ ಲೀಲೆಯನ್ನು ಕಂಡುಕೊಳ್ಳುತ್ತದೆ. ಹೀಗೆ ಇಲ್ಲಿಯವರೆಗೂ ನೆಲದ ಪ್ರಾಪಂಚಿಕವಾದ ಅಜ್ಞಾನದಲ್ಲಿಯೇ ನೆಲೆನಿಂತಿದ್ದ ಆತ್ಮವು ಈಗ ತನ್ನ ಸಚ್ಚಿದಾನಂದ ಸ್ವರೂಪವನ್ನು ದರ್ಶಿಸಲು ಸಾಗುತ್ತದೆ; ಪರಿಮಿತ ವ್ಯಾಪ್ತಿಯಲ್ಲಿ ತಾತ್ಕಾಲಿಕ ಬದುಕನ್ನು ಸವೆಸುತ್ತಿರುವ ಜಡ ಪ್ರಪಂಚದ ಹಿಂಬಾಗದಲ್ಲಿ, ನಿರಂತವಾದ ದೈವೀ ಚಟುವಟಿಕೆಯುಳ್ಳ ವೈಶ್ವಿಕ ನೆಲೆಯಲ್ಲಿ ಸ್ಥಾನ ಪಡೆದ ಆತ್ಮ ಮಂಡಲದ ದರ್ಶನಕ್ಕೆಂದು ಹಾತೊರೆಯುತ್ತದೆ. ಆಗ ಮನ–ಪ್ರಾಣ–ದೇಹಗಳು ತಾನೇ ತಾನಾಗಿ ತಮ್ಮ ಸೀಮಿತ ವಲಯದ ಪಕಳೆಗಳಿಂದ ಹೊರಬಂದು, ತಮ್ಮ ಅಹಮಿಕೆ ಮತ್ತು ಅಜ್ಞಾನಗಳೆಂಬ ಪೊರೆಯನ್ನು ಕಳಚಿಕೊಂಡು ಜ್ಞಾನ–ಪ್ರಜ್ಞೆಗಳೆಂಬ ರೆಕ್ಕೆಗಳ ಕಟ್ಟಿಕೊಂಡು ಬಾನಾಡಿಯಾಗುವ ಚಿಟ್ಟೆಯಂತೆ **ಪತಂಗೀಕರಣಕ್ಕೊಳಗಾಗುತ್ತವೆ.** ಇದುವೇ ಆತ್ಮದ ಪೂರ್ಣ ಯೋಗದ ಪರಮಸಿದ್ಧಿ!

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21/722–25 – ಶ್ರೀ ಅರವಿಂದರು**

## ದರ್ಶನದ ಮೂಲತತ್ತ್ವ

ಭುವಿಯು ಇಲ್ಲಿಯವರೆಗೂ ಕಂಡುಕೊಂಡ, ಬ್ರಹ್ಮಾಂಡದ ರಚನೆಗೆ ಭದ್ರ ಬುನಾದಿಯಾಗಿರುವ ಅತ್ಯಂತ ಸುರಕ್ಷಿತ ಮತ್ತು ಸರ್ವ ಸಮನ್ವಯಿತ ಸತ್ಯವೆಂದರೆ, ಈ ಜೀವನವು ಇನ್ನೂ ಸೃಷ್ಟಿಯಾಗದೇ ಇರುವ ಆತ್ಮ ಮತ್ತು ಚೇತನದ ಅಭಿವ್ಯಕ್ತಿಯಾಗಿದೆ. ಹಾಗೂ ಜೀವನದ ಅತಿ ಗೌಪ್ಯವಾದ ರಹಸ್ಯವೊಂದನ್ನು ನಿರಂತರವಾಗಿ ರಕ್ಷಿಸುತ್ತಿರುವ ಬೀಗವಾಗಿದ್ದು, ಈ ದಿವ್ಯ ಚೇತನವು ಈಗಾಗಲೇ ಸೃಷ್ಟಿಯಾದ ತನ್ನದೇ ಆದ ನೈಜ ಅಸ್ತಿತ್ವದೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿರುತ್ತದೆ. ವಿಶ್ವದೆಲ್ಲೆಡೆ ಹಂಚಿಹೋದ ಅನಂತ ಆತ್ಮಗಳ ವ್ಯಕ್ತಿಗತ ಜೀವನದ ಹಿಂಬಾಗದಲ್ಲಿ ಪರಮ ಚಿರಂತನವಾದ ದಿವ್ಯ ಅಸ್ತಿತ್ವವೊಂದು ಸದಾ ಕಾರ್ಯಪ್ರವೃತ್ತವಾಗಿದ್ದು, ತನ್ನ ಊರ್ಧ್ವ ನೆಲೆಯಿಂದಲೇ ಸರ್ವವನ್ನೂ ನಿಯಂತ್ರಿಸುವ–ಸಮನ್ವಯಿಸುವ ಕಾರ್ಯದಲ್ಲಿ ನಿರತವಾಗಿರುತ್ತದೆ; ವಿಶ್ವವನ್ನು ಸುತ್ತುವರಿದು ರಕ್ಷಿಸುತ್ತಿರುವ, ಅದರ ಉನ್ನತಿಯಲ್ಲಿ ಸಹಕರಿಸುತ್ತಿರುವ ಆ ದಿವ್ಯ ಅಸ್ತಿತ್ವವು, ತನ್ನದೇ ಆತೀತವೂ–ಕಾಲಾತೀತವಾದ ಚಿರಂತನ ನೆಲೆಯಿಂದಲೇ ಈ ದೇಶ–ಕಾಲಗಳ ಪರಿಧಿಯನ್ನು ನಿಯಂತ್ರಿಸುತ್ತಿರುತ್ತದೆ. ಈ ದಿವ್ಯ ಕಾರ್ಯವು ಅನಂತ ಕಾಲದವರೆಗೂ ಚ್ಯುತಿಯಿರದೆ ನಡೆಯುತ್ತಲೇ ಇರುತ್ತದೆ.

ಆದರೆ ಈ ಜ್ಞಾನವು ಕೇವಲ ಬೌದ್ಧಿಕ ಮತ್ತು ಆಧ್ಯಾತ್ಮಿಕ ಹಂತದ ಕಾಲ್ಪನಿಕ ಮತ್ತು ನಿರರ್ಥಕ ಪರಿಣಾಮಗಳನ್ನೇ ಬೀರುವಂತಿದ್ದರೇ. ಈ ರೀತಿಯ ಜ್ಞಾನವು ಯೋಗಿಕ ಸಿದ್ಧಾಂತದಲ್ಲಿ ನಿಷ್ಪ್ರಯೋಜಕವಾದದ್ದು. ದಿವ್ಯ ಜೀವನದ ಅಭೀಪ್ಸೆಯುಳ್ಳ ಸಾಧಕನಿಗೆ ಕೇವಲ ಮನೋಮಯದ ದರ್ಶನಾನುಭವಗಳು ಸಾಕಾಗುವದಿಲ್ಲ. ಯೋಗಕ್ಕೆ ಬೇಕಿರುವುದು ಮರ್ತ್ಯದ ವೈಚಾರಿಕ–ಮಾನಸಿಕ ಸತ್ಯವಲ್ಲ. ಬದಲಾಗಿ ಅದಕ್ಕೆ ಬೇಕಿರುವುದು ಸದಾ ಕ್ರಿಯಾಶೀಲವಾಗಿರುವ ನಿತ್ಯ ನಿರಂತರವೂ–ಅಮರ ಚಿರಂತನವೂ ಆದ ಋತದ ಋತಂಬರ ಪ್ರಜ್ಞೆ!

ವಿಶ್ವದ ಅನಂತ ಆತ್ಮಗಳು ಆ ಪರಮಾತ್ಮದ ಅವಿಭಾಜ್ಯ ಅಂಗಗಳೇ ಆಗಿರುವದರಿಂದ ಇಲ್ಲಿ ನಾನು–ನೀನುಗಳೆಂಬ ಭೇದಗಳಿಲ್ಲ. ಹಾಗೂ ಇಲ್ಲಿ ಎಲ್ಲ ಅಸ್ತಿತ್ವಗಳೂ ಆ ವಿಶ್ವಾತ್ಮದ ಅನಂತ ರೂಪಗಳೇ ಆಗಿವೆ. ಹಾಗಾಗಿ ನಮ್ಮೊಳಗೆ ಮನೆಮಾಡಿರುವ ಭೇದನೀತಿಗಳನ್ನು ಸುರುಳಿ ಸುತ್ತಿ, ಸಹಭಾಗಿತ್ವ, ಸಮನ್ವಯಿತ್ವ ಹಾಗೂ ಸಾರ್ವಜನಿತ್ವವಾದ ಭಾವನೆಯೊಂದು ಮೊಳೆಯಬೇಕು. ನಮ್ಮಿಂದ

ಹೊರಹೊಮ್ಮಿ ಸುತ್ತೆಲ್ಲ ಬೆಳೆಯಬೇಕು. ಚತುಃಸಮುದ್ರದಲ್ಲಿನ ಜಲ ಬಿಂದುಗಳಂತೆ ಏಕಮೇವತೆಯನ್ನು ಸಾಧಿಸಿದ ನಮ್ಮೊಳಗೆ ಆ ಪರಮ ಪುರುಷನ ದಿವ್ಯ ಜ್ಯೋತಿಯೇ ಸಮಾನವಾಗಿ ಬೆಳಗುತ್ತಿದ್ದು, ನಾವು ಸದಾ ಒಂದಾಗಿಯೇ ನೋಡುತ್ತಿರುತ್ತೇವೆ, ಒಂದಾಗಿಯೇ ಉಸಿರಾಡುತ್ತಿರುತ್ತೇವೆ, ಒಂದಾಗಿಯೇ ಜೀವಿಸುತ್ತಿರುತ್ತೇವೆ. ಈ ಪರಮೋಚ್ಚ ಸತ್ಯದ ಅನಾವರಣವಾಗಬೇಕಿದೆ. ಅದರ ಅವತರಣಕ್ಕಾಗಿಯೇ ನಾವೆಲ್ಲರೂ ಶ್ರಮಿಸಬೇಕಿದೆ.

ಈ ಭೌತಿಕ ಮಟ್ಟದಲ್ಲಿ ನಾವು ನೋಡುವ, ಕೇಳುವ, ಸ್ಪರ್ಶಿಸುವ, ಗ್ರಹಿಸುವ ಅನುಭವಗಳೆಲ್ಲವೂ ವಿಶ್ವದ ಸಕಲಾತ್ಮಗಳು ಪಡೆಯುವ ಏಕರೂಪದ ಅನುಭವವೇ ಆಗಿರುತ್ತದೆ. ಏಕೆಂದರೆ ನಮ್ಮ ಮೂಲ ಸ್ವರೂಪಗಳಲ್ಲೂ ಸಹ ಯಾವುದೇ ವಿಧವಾದ ವ್ಯತ್ಯಯಗಳಿಲ್ಲದ ಕಾರಣ ನಮ್ಮ ಪಡೆವ ಇಂದ್ರಿಯಾನುಭವಗಳೆಲ್ಲವೂ ಏಕರೂಪದ್ದೇ ಆಗಿರುತ್ತದೆ. ಹಾಗಾಗಿ ಸರ್ವ ಸವ್ಯಕ್ತಿಗತರಲ್ಲೂ ತಮ್ಮ ಇರುವನ್ನೇ ಕಂಡುಕೊಂಡು ಬದುಕಬೇಕಿದೆ. ಎಲ್ಲರೊಳಗೊಂದಾಗಬೇಕಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/115 – ಶ್ರೀ ಅರವಿಂದರು**

## ಭಾಗ 2
## ಶ್ರೀಮಾತೆಯವರ ಅಭಿವ್ಯಕ್ತಿಗಳು
## ಗುರುತಿಸುವಿಕೆ

**– ಅನು: ನಾಗಜ್ಯೋತಿ ಮಾನ್ವಿ**

ನಾನು ಖಂಡಿತವಾಗಿಯೂ ಪರಮಾತ್ಮನನ್ನು ಹುಡುಕಿದ್ದೇನೆ. ಮತ್ತು ಆ 'ಐಕ್ಯತೆಯು' ಸತತವಾಗಿದೆ ಎಂದು ಪರಮಾತ್ಮನನ್ನು ಅತ್ಯಂತ ಪ್ರಾಮಾಣಿಕತೆಯಿಂದ ಹುಡುಕುತ್ತಿರುವ ಆ ಆಂಗ್ಲ ಯುವಕನಿಗೆ ನಿನ್ನೆ ಹೇಳಿದೆ. ನಾವು ನಿಜವಾಗಿಯೂ ಅಂತಹ ಸ್ಥಿತಿಯ ಅರಿವಿನಲ್ಲಿದ್ದೇನೆ. ನನ್ನ ಎಲ್ಲಾ ವಿಚಾರಗಳೂ 'ಅವನೆಡೆಗೆ' ಹೋಗುತ್ತವೆ. ನನ್ನ ಎಲ್ಲಾ ಕ್ರಿಯೆಗಳೂ ಅವನಿಗಾಗಿ ಅರ್ಪಿಸಲ್ಪಟ್ಟಿವೆ; ಅವನ 'ಸಾನಿಧ್ಯ'ವು ಕೇವಲ, ಅಚಲ, ಮಾರ್ಪಡಲಾರದ ನಿಜಾಂಶವಾಗಿದೆ. ಮತ್ತು ನನ್ನ ಹೃದಯದಲ್ಲಿ ಆತನ ಶಾಂತಿಯು ಸತತವಾಗಿ ನೆಲೆಸಿದೆ. ಆದಾಗ್ಯೂ ನಾಳೆ ನಾನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾದ ಸ್ಥಿತಿಗೆ ಹೋಲಿಸಿದರೆ ಇಂದಿನ ಐಕ್ಯತೆಯು ಕನಿಷ್ಠ

ಮತ್ತು ಅನಿಶ್ಚಿತವೆಂದೆನಿಸುತ್ತದೆ. ಮತ್ತು ಆ ನಿಜವಾದ ಐಕ್ಯತೆಯಿಂದ ನಾನು ಬಹಳ ದೂರವೇ ಇದ್ದೇನೆ ಅಲ್ಲಿ 'ನಾನು' ಎಂಬ ಅಂಶವನ್ನು ಸಂಪೂರ್ಣವಾಗಿ ಕಳೆದುಕೊಂಡಿರುತ್ತೇನೆ, ಆದಾಗ್ಯೂ ನನ್ನನ್ನು ನಾನು ವ್ಯಕ್ತಪಡಿಸಲು 'ನಾನು' ಎಂಬ ಶಬ್ದವನ್ನು ಉಪಯೋಗಿಸುತ್ತಿದ್ದೇನೆ. ಆದರೆ ಯಾವ ಸ್ಥಿತಿಯನ್ನು ವ್ಯಕ್ತಪಡಿಸಲು ನಾನು ಪ್ರಯತ್ನಿಸುತ್ತಿದ್ದೇನೋ ಇಲ್ಲಿ ಆ 'ನಾನು' ಎಂಬ ಶಬ್ದದ ಉಪಯೋಗವು ಅಯೋಗ್ಯ ಮತ್ತು ಮತ್ತು ಅಡೆತಡೆಯಂತೆ ಕಾಣಿಸುತ್ತಿದೆ. ಮಾನವನು ಮಾತಿನ ಮೂಲಕ ಸಂಪರ್ಕಿಸಲು ಇದು ಅನಿವಾರ್ಯವೆಂದು ತೋರುತ್ತದೆ. ಆದರೆ ಆ 'ನಾನು' ಏನನ್ನು ಪ್ರಕಟಪಡಿಸುತ್ತಿದೆ. ಎಂಬುದರ ಮೇಲೆ ಎಲ್ಲವೂ ಅವಲಂಬನೆಯಾಗಿದೆ 'ನಾನು' ಭಿನ್ನತೆಯ ಭಾವವನ್ನು ಕಳೆದುಕೊಂಡಿದ್ದೇನೆ ಮತ್ತು ಈಗಾಗಲೇ ಎಷ್ಟು ಬಾರಿ ನಾನು ಎಂದು ಉಚ್ಚರಿಸಿದಾಗ ನನ್ನ ಮೂಲಕ 'ನೀನೇ' ಮಾತನಾಡಿರುವೆ.

ಆದರೆ ಇದೆಲ್ಲವೂ ಇನ್ನೂ ಭ್ರೂಣದಂತಿದೆ ಮತ್ತು ಇದು ಪರಿಪೂರ್ಣದೆಡೆಗೆ ಸತತವಾಗಿ ಬೆಳೆಯುತ್ತದೆ ನಿನ್ನ ಸರ್ವಶಕ್ತತೆಯಲ್ಲಿರುವ ಪ್ರಸನ್ನತೆಯಿಂದ ಕೂಡಿದ ಆತ್ಮವಿಶ್ವಾಸವು ಅದೆಂತಹ ಸಮಾಧಾನಕರ ಭರವಸೆಯನ್ನು ಕೊಡುತ್ತಿದೆ!

ಎಲ್ಲವೂ, ಎಲ್ಲಾ ಕಡೆಯೂ, ಎಲ್ಲದರಲ್ಲಿಯೂ ನೀನೇ ಮತ್ತು ಯಾವ ರೀತಿಯಾಗಿ ವ್ಯಕ್ತ ಜಗತ್ತು ತನ್ನ ಸಂಪೂರ್ಣತೆಯಲ್ಲಿ ನೀನೇ ಆಗಿರುವೆಯೋ, ಕ್ರಿಯೆಯಿಂದ ಕೂಡಿದ ಈ ದೇಹವೂ ಸಹ ನಿನ್ನ ದೇಹವೇ ಆಗಿದೆ; ಈ ವಸ್ತುವಿನ ಮೂಲಕ ಉಸಿರಾಡುತ್ತಿರುವವನು, ವಿಚಾರ ಮಾಡುತ್ತಿರುವವನು ಮತ್ತು ಪ್ರೀತಿಸುತ್ತಿರುವವನು ನೀನೇ ಆಗಿರುವೆ, ಆ ವಸ್ತುವೂ ಸಹ ನೀನೇ ಆಗಿರುವುದರಿಂದ, ಇನ್ನೂ ಇಚ್ಛಾ ಪೂರ್ವಕ ಸೇವಕನಾಗಲು ಬಯಸುತ್ತಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/4** **– ಶ್ರೀಮಾತೆ**

## ಶ್ರೀಮಾತೆಯವರ ಅಭಿವ್ಯಕ್ತಿಗಳ ಮೌಕ್ತಿಕಗಳು

ನಾನು ಎಂದು ಏನನ್ನು ಕರೆದುಕೊಳ್ಳುತ್ತೇನೋ ಅದು ಕೇವಲ ಅಹಂಕಾರ – ನಮ್ಮ ನಿಜವಾದ ಅಸ್ತಿತ್ವವು ದೈವವೇ ಆಗಿದೆ.

**23.3.1958** **ಬಿಳಿ ಗುಲಾಬಿಗಳು, ಪು. 198**

ನನ್ನ ಅಸ್ತಿತ್ವವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು, ನನ್ನ ಅಸ್ತಿತ್ವದ ಪರಮ ಸತ್ಯದೊಂದಿಗೆ ಪ್ರಜ್ಞಾಪೂರ್ವಕ ಸಂಬಂಧದಿಂದ ಪ್ರವೇಶಿಸುವದು, ಯಾವುದೇ ದಾರಿಯ ಮೂಲಕ – ಅದೇನೂ ಮಹತ್ವದಲ್ಲ – ಆದರೆ ಇದೊಂದೇ ಮಾರ್ಗವಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ತನ್ನೊಳಗೆ ಈ ಸತ್ಯವನ್ನು ಹೊಂದಿರುತ್ತಾನೆ, ಈ ಸತ್ಯದೊಂದಿಗೆ ಅವನು ಐಕ್ಯನಾಗಬೇಕು, ಈ ಸತ್ಯವನ್ನೇ ಅವನು ಬದುಕಬೇಕು; ಯಾವ ಮಾರ್ಗವು ಈ ಸತ್ಯವನ್ನು ತಲುಪಲು ಮತ್ತು ಸಾಕ್ಷಾತ್ಕರಿಸಿಕೊಳ್ಳಲು ಸಹಾಯ ಮಾಡುತ್ತದೆಯೋ ಅದು ಪರಮ ಜ್ಞಾನದ ಹತ್ತಿರ ಕೊಂಡೊಯ್ಯುವ ಮಾರ್ಗವಾಗಿದೆ. ಹೀಗೆಂದರೆ, ವೈಯಕ್ತಿಕ ಸಾಕ್ಷಾತ್ಕಾರ ಮತ್ತು ಜ್ಞಾನದ ಸಾಕ್ಷಾತ್ಕಾರ ಒಂದೇ ಆಗಿವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/138**

ದೈವತ್ವವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು ಯಾರೊಬ್ಬರಿಗೂ ಅಸಾಧ್ಯವಾದುದೇನಲ್ಲ: ಆದರೆ, ಕೆಲವರಿಗೆ ಇದು ಬಹಳ ಜನ್ಮಗಳು ಬೇಕಾಗಬಹುದು, ಮತ್ತು ಕೆಲವರಿಗೆ ಇದೇ ಜನ್ಮದಲ್ಲಿ ಸಾಧ್ಯವಾಗಬಹುದು. ಇದೆಲ್ಲವೂ ಸಂಕಲ್ಪದ ಪ್ರಶ್ನೆಯಾಗಿದೆ. ಇದನ್ನು ನೀವೇ ಆಯ್ಕೆ ಮಾಡಿಕೊಳ್ಳಬೇಕು.

ಆದರೆ ನಾನು ಏನನ್ನು ಹೇಳಬಯಸುತ್ತೇನೆಂದರೆ ಈಗಿನ ಪರಿಸ್ಥಿತಿಯು ಬಹಳವೇ ಅನುಕೂಲಕರವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/409**

*ಪ್ರಶ್ನೆ: ಪ್ರೀತಿಯ ಮಾತೆಯವರೇ, ನಿಜವಾಗಿಯೂ 'ದೈವವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೆಂದರೇನು?'*

ನನ್ನೊಳಗಿರುವ ಅಥವಾ ಆಧ್ಯಾತ್ಮದ ಉನ್ನತ ಸ್ಥರದಲ್ಲಿರುವ ದೈವೀ ಸನ್ನಿಧಾನದ ಬಗ್ಗೆ ಪ್ರಜ್ಞಾಯುತವಾಗುವುದಾಗಿದೆ. ಮತ್ತು ಒಮ್ಮೆ ಆತನ ಸಾನಿಧ್ಯದ ಬಗ್ಗೆ, ಪ್ರಜ್ಞಾಯುತವಾದ ಅವನಿಗೆ ಸಂಪೂರ್ಣ ಶರಣಾಗತವಾಗುವುದು, ಆಗ ಅವನ ಇಚ್ಛೆಯೊಂದನ್ನು ಬಿಟ್ಟು ಬೇರಾವುದೂ ನನ್ನಲ್ಲಿರುವುದಿಲ್ಲ, ಕೊನೆಗೆ ಆತನೊಂದಿಗೆ ನಮ್ಮ ಪ್ರಜ್ಞೆಯು ಐಕ್ಯವಾಗುವುದು. ಇದನ್ನು 'ದೈವವನ್ನು ಸಾಕ್ಷಾತ್ಕರಿಸಿ'ಕೊಳ್ಳುವುದು ಎನ್ನುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/407–08 – ಶ್ರೀಮಾತೆ**

## ದಿವ್ಯತ್ವದೊಳಗೆ ಸಂಯೋಗಗೊಳ್ಳಲು ಪ್ರಥಮ ಹೆಜ್ಜೆ

ನಿನ್ನ ಅಹಂಕಾರವನ್ನು ದೈವದೊಂದಿಗೆ ಸಂಯೋಗಗೊಳಿಸು! ಆದರೆ ಮೊದಲು ಸಂಪೂರ್ಣವಾಗಿ ವೈಯಕ್ತೀಕರಣಗೊಳ್ಳದೇ ನಮ್ಮ ಅಹಂಕಾರವನ್ನು ದೈವದೊಂದಿಗೆ ಸಂಯೋಗಗೊಳಿಸಲು ಸಾಧ್ಯವಿಲ್ಲ. ಸಂಪೂರ್ಣವಾಗಿ ವೈಯಕ್ತೀಕರಣಗೊಳ್ಳುವುದು ಎಂದರೆ ಏನು ಗೊತ್ತೇ? ಎಲ್ಲಾ ಬಹಿರಂಗದ ಪ್ರಭಾವಗಳನ್ನು ಪ್ರತಿರೋಧಿಸುವ ಯೋಗ್ಯತೆ ಪಡಿಸುವುದು ಸಾಧ್ಯವೇ?

ಕೆಲವು ದಿನಗಳ ಹಿಂದೆ ಯಾರೋ ನನಗೆ ಪತ್ರ ಬರೆದಿದ್ದರು ಆತನು ಸಾಮಾನ್ಯ ಪುಸ್ತಕಗಳನ್ನು ಓದಲು ಹಿಂಜರಿಯುತ್ತಿದ್ದನು. ಉದಾಹರಣಗೆ ಕಾದಂಬರಿಗಳು ಅಥವಾ ನಾಟಕಗಳು. ಏಕೆಂದರೆ ಅವುಗಳಲ್ಲಿನ ಪಾತ್ರಗಳ ಭಾವನೆಗಳು ಮತ್ತು ವಿಚಾರಗಳ ಆಳವಾದ ಪ್ರಭಾವ ಬೀರಿ ಅದರಂತೆಯೇ ಜೀವಿಸುತ್ತಿದ್ದ. ಈ ತರಹದ ವ್ಯಕ್ತಿಗಳು ನಾವು ಅಂದುಕೊಂಡಿದ್ದಕ್ಕಿಂತಲೂ ಹೆಚ್ಚಾಗಿಯೇ ಇದ್ದಾರೆ. ಅವರು ಒಂದು ಪುಸ್ತಕವನ್ನು ಓದುತ್ತಾರೆ. ಮತ್ತು ಓದುವಾಗಲೇ ಎಲ್ಲಾ ರೀತಿಯ ಭಾವನೆಗಳು, ವಿಚಾರಗಳು, ಆಸೆಗಳು, ಉದ್ದೇಶಗಳು, ಯೋಜನೆಗಳು ಹಾಗೂ ಆದರ್ಶಗಳನ್ನು ತಮ್ಮೊಳಗೆ ಭಾವಿಸುತ್ತಾರೆ. ಅವರು ಪುಸ್ತಕವನ್ನು ಓದುವುದರಲ್ಲಿಯೇ ಸಂಪೂರ್ಣವಾಗಿ ಮಗ್ನರಾಗಿರುತ್ತಾರೆ. ಅದರ ಬಗ್ಗೆ ಅವರಿಗೆ ಅರಿವೂ ಸಹ ಇರುವುದಿಲ್ಲ, ಏಕೆಂದರೆ ನೂರಕ್ಕೆ ತೊಂಭತ್ತೊಂಭತ್ತರಷ್ಟು ವ್ಯಕ್ತಿಯ ನಡವಳಿಕೆಗಳು ಒಂದು ಮೃದುವಾದ ಬೆಣ್ಣೆಯಂತೆ ಇರುತ್ತದೆ. ಆದರೆ ಯಾರಾದರೂ ತಮ್ಮ ಹೆಬ್ಬೆರಳನ್ನು ಒತ್ತಿದರೆ, ಬೆರಳಚ್ಚು ಮೂಡುತ್ತದೆ.

ಈಗ, ಎಲ್ಲವೂ ಒಂದು 'ಹೆಬ್ಬೆರಳಿನ' ತರಹ: ವ್ಯಕ್ತಪಡಿಸಿದ ವಿಚಾರ, ಓದಿದ ವಾಕ್ಯ, ಒಂದು ವಸ್ತುವಿನ ನೋಟ, ಬೇರೆಯವರು ಏನು ಮಾಡುತ್ತಿದ್ದಾರೆ ಎಂಬ ಅವಲೋಕನ ಮತ್ತು ನಮ್ಮ ನೆರೆಹೊರೆಯವರ ಸಂಕಲ್ಪ ಇವೆಲ್ಲಾ ಸಂಕಲ್ಪಗಳು... ನಿಮಗೆ ಗೊತ್ತಿರುವಂತೆ, ಇವೆಲ್ಲವನ್ನು ನೋಡಿದಾಗ ಅವು ಒಂದರಲ್ಲೊಂದು ಹೆಣೆದುಕೊಂಡಿರುತ್ತವೆ. (ಶ್ರೀಮಾತೆಯವರು ಎರಡು ಕೈಗಳ ಬೆರಳುಗಳನ್ನು ಒಂದರೊಳಗೊಂದು ಸೇರಿಸಿ ತೋರಿಸುತ್ತಾರೆ.) ಪ್ರತಿಬಾರಿಯೂ ತಾನೇ ಮುಂದಿರಬೇಕೆಂಬ ಸತತ ಗೊಂದಲವನ್ನು ಅಂತರಂಗದಲ್ಲಿ, ಬಹಿರಂಗದಲ್ಲಿ ಸೃಷ್ಟಿ ಮಾಡುತ್ತಿರುತ್ತೇವೆ. ಈ ಸಂಕಲ್ಪಗಳು ವಿದ್ಯುಚ್ಛಕ್ತಿಯ ಅಲೆಗಳಂತೆ ಒಳಗೆ ಮತ್ತು ಹೊರಗೆ ಹಾದು ಹೋಗುತ್ತಿರುತ್ತದೆ, ಆದರೆ ಯಾರಿಗೂ ಇದರ ಅರಿವಿರುವುದಿಲ್ಲ

ಮತ್ತು ಇದರಲ್ಲಿ ಈ ಎಲ್ಲಾ ಸಂಕಲ್ಪಗಳು ತಮ್ಮನ್ನು ತಾವು ವ್ಯಕ್ತಪಡಿಸಿಕೊಳ್ಳಲು ಸತತವಾದ ಹೋರಾಟದಲ್ಲಿರುತ್ತವೆ, ಮತ್ತು ಯಾವುದು ಬಲಶಾಲಿಯಾಗಿರುತ್ತದೆಯೋ ಅದು ಯಶಸ್ವಿಯಾಗುತ್ತದೆ. ಆದರೆ ಇಂತಹ ಅನೇಕ ಸಂಕಲ್ಪಗಳು ಇರುವುದರಿಂದ ಒಬ್ಬನೇ ಇವೆಲ್ಲವುಗಳ ಜೊತೆಗೆ ಹೋರಾಡಬೇಕಾಗುತ್ತದೆ. ಇದು ಸುಲಭವಲ್ಲ.

ಹಾಗಾಗಿ ಸಮುದ್ರದ ಅಲೆಯ ಮೇಲೆ ತೇಲುವ ಕಟ್ಟಿಗೆಯ ತುಂಡಿನಂತಾಗುತ್ತಾರೆ. ಒಂದು ದಿನ ನನಗೆ ಇದು ಬೇಕೆನಿಸುತ್ತದೆ. ಇನ್ನೊಂದು ದಿನ ಅದು ಬೇಕೆನಿಸುತ್ತದೆ, ಒಂದು ಕ್ಷಣ ಆ ಕಡೆಯಿಂದ, ಇನ್ನೊಂದು ಕ್ಷಣ ಈ ಕಡೆಯಿಂದ ತಳ್ಳಲ್ಪಡುತ್ತಾನೆ. ಆಗ ಮುಖವನ್ನು ಆಕಾಶದೆಡೆಗೆ ಮಾಡಿ (ಶ್ರೀಮಾತೆಯವರು ಚಲನವಲನಗಳನ್ನು ತೋರಿಸುತ್ತಾ) ಈಗ ಇವನು ಒಂದು ಆಳವಾದ ತಗ್ಗಿನಲ್ಲಿ ಮುಳುಗಿದ್ದಾನೆ ಮತ್ತು ಅವನ ಅಸ್ತಿತ್ವವು ಇದೇ ಆಗಿದೆ!

ಮೊದಲು ನೀವು ಸುಜ್ಞಾನಯುತವಾಗಬೇಕು, ಸರಿಯಾಗಿ ಹೆಣೆದ, ವೈಯಕ್ತೀಕರಣಗೊಂಡ, ತನ್ನೊಳಗೆ, ತನ್ನಿಂದ ಅಸ್ತಿತ್ವ ಪಡೆದ ತನ್ನ ಪರಿಸರದಿಂದ ನಿರಾವಲಂಬಿಯಾದ, ಏನೂ ಬದಲಾಗದೇ ಏನನ್ನಾದರೂ ಕೇಳುವ, ಓದುವ, ನೋಡುವಂತಾಗಬೇಕು ಅವನು ತನಗೆ ಬೇಕಾದುದನ್ನು ಮಾತ್ರ ಬಹಿರಂಗದಿಂದ ಸ್ವೀಕರಿಸುತ್ತಾನೆ; ತನ್ನ ಯೋಜನೆಗೆ ಸಲ್ಲದಿರುವುದನ್ನು ತಾನಾಗಿಯೇ ತಿರಸ್ಕರಿಸುತ್ತಾನೆ ಮತ್ತು ತನ್ನ ಒಪ್ಪಿಗೆಯಿಲ್ಲದೆ ಬಾಹ್ಯ ಪ್ರಭಾವದ ಮುದ್ರೆ ತನ್ನ ಮೇಲೆ ಉಳಿಯುವದಿಲ್ಲ. ಆಗ ಅವನು ವೈಯಕ್ತೀಕರಣಗೊಳ್ಳಲು ಪ್ರಾರಂಭಿಸುತ್ತಾನೆ! ಯಾವಾಗ ಅವನು ವೈಯಕ್ತೀಕರಣಗೊಂಡಿರುತ್ತಾನೋ ಆಗ ಮಾತ್ರ ಅವನು ಅರ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ.

ಏನನ್ನಾದರೂ ಅಧೀನಪಡಿಸಿಕೊಳ್ಳದೇ, ನೀನು ಅದು ಏನನ್ನೂ ಕೊಡಲಾಗುವದಿಲ್ಲ. ಮೊದಲು ಅದು ನಾವಾಗಬೇಕು ಮತ್ತು ಆಗ ಮಾತ್ರ ನಮ್ಮನ್ನು ನಾವು ಕೊಟ್ಟುಕೊಳ್ಳಬಹುದು.

ಎಲ್ಲಿಯವರೆಗೆ ಅವನದೇ ಆದ ಅಸ್ತಿತ್ವವಿರುವದಿಲ್ಲವೋ ಅಲ್ಲಿಯವರೆಗೆ ಏನನ್ನೂ ಕೊಟ್ಟುಕೊಳ್ಳಲು ಸಾಧ್ಯವಿಲ್ಲ. ಈ ಅಹಂಕಾರ ಭಾವದಿಂದ ಮುಕ್ತರಾಗಲು ಯಾವುದೇ ನಿರ್ಬಂಧನೆ ಹಾಕದೇ ನಮ್ಮನ್ನು ನಾವು ಸಂಪೂರ್ಣವಾಗಿ ಕೊಟ್ಟುಕೊಳ್ಳಲು ನಮ್ಮದೇ ಆದ ಅಸ್ತಿತ್ವ ಹೊಂದಿರಬೇಕು. ನಮ್ಮದೇ ಆದ ಅಸ್ತಿತ್ವವಿರಬೇಕೆಂದರೆ ವೈಯಕ್ತೀಕರಣಗೊಳ್ಳಬೇಕು.

ನಮ್ಮ ದೇಹವು ಒಂದು ಗಡುಸಾದ ರೂಪದಲ್ಲಿ ಮಾಡಲ್ಪಟ್ಟಿರದಿದ್ದರೆ, – ಅದು ನಿಜವಾಗಿಯೂ ಬಹಳ ಗಡುಸಾಗಿಯೇ ಇದೆ, ಹೌದಲ್ಲವೇ? – ಸರಿ, ದೇಹವು ಈ ರೀತಿ ಸ್ಥಿರವಾಗಿರದಿದ್ದರೆ, – ನಮಗೆ ಚರ್ಮವೇ ಇರದಿದ್ದರೆ ಈ ತರಹದ ಘನವಾಗಿದ್ದರೆ, ಪ್ರಾಣ ಮತ್ತು ಮಾನಸಿಕ ಕ್ಷೇತ್ರದಲ್ಲಿ ನೀವು ಏನಿದ್ದಿರೋ ಅದನ್ನೇ ಬಹಿರಂಗದಲ್ಲಿ ನೀವು ಪ್ರತಿಫಲಿಸುವಂತಿದ್ದರೆ, ಒಂದು ಜೆಲ್ಲಿ ಮೀನಿನ ಸ್ಥಿತಿಗಿಂತಲೂ ಶೋಚನೀಯವಾಗಿರುತ್ತಿತ್ತು! ಎಲ್ಲವೂ ಎಲ್ಲದುದರೊಂದಿಗೆ ಕೂಡಿ ಬಿಡುತ್ತಿತ್ತು, ಹೋ ಅದೆಂತಹ ಅವ್ಯವಸ್ಥೆಯ ಸ್ಥಿತಿ! ಆದ್ದರಿಂದ ಪ್ರಾಥಮಿಕ ಸ್ಥಿತಿಯಲ್ಲಿ ಗಡುಸಾದ ರೂಪದ ಅವಶ್ಯಕವಿದೆ. ತದನಂತರ ಅದರ ಬಗ್ಗೆಯೇ ದೂರುತ್ತೇವೆ. 'ಭೌತಿಕವು ಸ್ಥಿರವಾಗಿದೆ, ಅದು ತೊಂದರೆ ಕೊಡುವಂತದು, ಇದರಲ್ಲಿ ನಮ್ಯತೆ ಮತ್ತು ಮೃದುತ್ವವಿಲ್ಲ, ಇದರಲ್ಲಿ ದ್ರವ್ಯತೆಯ ಗುಣ ಹೊಂದಿರದ ಕಾರಣ ದೈವನೊಂದಿಗೆ ವಿಲೀನಗೊಳ್ಳಲು ಸಾಧ್ಯವಾಗುತ್ತಿಲ್ಲ' ಆದರೆ ಇದು ಅತ್ಯವಶ್ಯಕವಾಗಿದೆ; ಹೀಗಿರದಿದ್ದರೆ... ನೀವು ದೇಹದಿಂದ ಸುಮ್ಮನೆ ಹೊರಗೆ ಬಂದರೆ, (ಎಲ್ಲರಿಗೂ ಈ ರೀತಿ ಮಾಡಲಾಗುವದಿಲ್ಲ. ಏಕೆಂದರೆ ಭೌತಿಕದಂತೆ ಪ್ರಾಣಿಕ ಸತ್ತೆಯೂ ಸಹ ವೈಯಕ್ತೀಕರಣಗೊಂಡಿರುವುದಿಲ್ಲ.) ನೀವು ದೇಹದಿಂದ ಹೊರಗೆ ಬಂದು ಪ್ರಾಣ ಲೋಕದಲ್ಲಿ ಪ್ರವೇಶಿಸಿದರೆ, ಅಲ್ಲಿ ಎಲ್ಲಾ ವಸ್ತುಗಳು ಒಂದರೊಳಗೊಂದು ಸೇರಿಕೊಂಡಿರುತ್ತವೆ, ಅವು ಮಿಶ್ರಣಗೊಂಡಿರುತ್ತವೆ, ಅವು ವಿಂಗಡಿಸಿಹೋಗಿರುತ್ತವೆ; ಎಲ್ಲಾ ರೀತಿಯ ಕಂಪನಗಳು, ಅಲ್ಲಿ ಶಕ್ತಿಗಳ ಅಲೆಗಳು ಬಂದು ಹೋಗುತ್ತಿರುತ್ತವೆ, ಹೋರಾಟ, ಒಂದು ಇನ್ನೊಂದನ್ನು ನಾಶ ಮಾಡುವ ಪ್ರಯತ್ನ, ಒಂದನ್ನು ಇನ್ನೊಂದು ಅಧೀನದಲ್ಲಿಟ್ಟುಕೊಳ್ಳುವ ಪ್ರಯತ್ನ, ಒಂದನ್ನೊಂದು ಹೀರಿಕೊಳ್ಳುತ್ತವೆ, ಒಂದನ್ನೊಂದು ಹೊರಹಾಕುತ್ತವೆ ಮತ್ತು ಇದೇ ರೀತಿಯಲ್ಲಿ ಅದು ನಡೆದಿರುತ್ತದೆ! ಆದರೆ ಇಂತಹ ಪರಿಸ್ಥಿತಿಯಲ್ಲಿ ಒಂದು ನಿಜವಾದ ವ್ಯಕ್ತಿತ್ವವಿರುವುದು ಬಹಳ ಕಷ್ಟವಾಗಿದೆ. ಇಲ್ಲಿ ಇವೆಲ್ಲವೂ ಶಕ್ತಿಗಳು, ಚಲನೆಗಳು, ಆಸೆಗಳು, ಕಂಪನಗಳಾಗಿರುತ್ತವೆ.

ಅಲ್ಲಿ ವೈಯಕ್ತೀಕರಣಗೊಂಡ ಅಂಶಗಳು, ವ್ಯಕ್ತಿತ್ವವನ್ನು ಹೊಂದಿದ ಅಂಶಗಳು ಇರುತ್ತವೆ! ಆದರೆ ಇವುಗಳೆಲ್ಲ ಶಕ್ತಿಗಳು ಪ್ರಾಣ ಲೋಕದಲ್ಲಿ ವೈಯಕ್ತೀಕರಣಗೊಂಡ ವ್ಯಕ್ತಿಗಳಿದ್ದಾರೆ. ಅವರು ವೀರರೋ ಅಥವಾ ರಾಕ್ಷಸರೋ ಆಗಿರುತ್ತಾರೆ!

ಮತ್ತು ಈಗ, ಮನದಲ್ಲಿ (ನಿಶ್ಚಲ ನೀರವತೆ) ನಿಮ್ಮ ಭೌತಿಕ ಮನದ ಅರಿವು ನಿಮಗಾದರೆ... ಕೆಲವರು ಇದನ್ನು ಸಾರ್ವಜನಿಕ ವೃತ್ತವೆಂದು ಕರೆದಿದ್ದಾರೆ, ಏಕೆಂದರೆ ಅಲ್ಲಿ ಎಲ್ಲವೂ ಬರುತ್ತವೆ, ಎಲ್ಲವೂ ಹೋಗುತ್ತವೆ, ಎಲ್ಲಾ ವಿಚಾರಗಳು

ಅಲ್ಲಿ ಹೋಗುತ್ತವೆ, ಒಂದು ಸ್ಥಳದಿಂದ ಪ್ರವೇಶಿಸಿ ಇನ್ನೊಂದು ಸ್ಥಳದಿಂದ ಹೊರಗೆ ಹೋಗಿ, ಕೆಲವು ಇಲ್ಲಿ, ಕೆಲವು ಅಲ್ಲಿ! ಸಾರ್ವಜನಿಕ ವೃತ್ತದ ಹಾಗೆಯೇ ಏನೂ ಸಹ ಸಂಘಟಿತವಾಗಿರುವುದಿಲ್ಲ, ಸಾಮಾನ್ಯವಾಗಿ ವಿಚಾರಗಳು ಒಂದನ್ನೊಂದು ಭೇಟಿಯಾಗುತ್ತವೆ, ಮತ್ತು ಒಂದನ್ನೊಂದು ವಿರೋಧಿಸುತ್ತವೆ, ಅಲ್ಲಿ ಎಲ್ಲಾತರಹದ ಅಘಘಾತಗಳು ನಡೆಯುತ್ತವೆ. ಆದರೆ ನಾವು ಜಾಗೃತರಾದಾಗ: 'ನನ್ನ ಮನವನ್ನು ಏನೆಂದು ಕರೆಯಲಿ?' ಅಥವಾ 'ನನ್ನ ಮನ ಎಂದರೇನು?'

ಇಷ್ಟು ಸರಳ ಯಶಸ್ಸನ್ನು ಪಡೆಯಲು, ಕೇವಲ 'ತಾವೇ ಸ್ವತಃ ವಿಚಾರ ಮಾಡಲು' ದೀರ್ಘ ವರ್ಷಗಳ ಗಮನ, ಬಹಳ ಎಚ್ಚರಿಕೆಯಿಂದ, ಬಹಳ ತರ್ಕಬದ್ಧವಾಗಿ ಮತ್ತು ಸುಸಂಬದ್ಧವಾದ ಕೆಲಸ, ಸಂಘಟನೆ, ಆಯ್ಕೆ ಮತ್ತು ನಿರ್ಮಾಣದ ಅವಶ್ಯಕತೆಯಿದೆ.

ತನ್ನದೇ ಆದ ಸ್ವಂತ ರೀತಿಯ ವಿಚಾರ ಮಾಡುವ ಮಾರ್ಗವಿರುತ್ತದೆಯೆಂದು ನಾವು ನಂಬಿರುತ್ತೇವೆ. ಆದರೆ ಅದು ಹಾಗಿಲ್ಲ. ನಮ್ಮ ವಿಚಾರ ಮಾಡುವ ರೀತಿಯು ಯಾರ ಜೊತೆಗೆ ಮಾತನಾಡುತ್ತಿದ್ದೇನೆ, ಅಥವಾ ಯಾವ ಪುಸ್ತಕಗಳನ್ನು ನಾನು ಓದಿದ್ದೇನೆ ಅಥವಾ ನಾನು ಯಾವ ಮನಃಸ್ಥಿತಿಯಲ್ಲಿದ್ದೇನೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಇದು ನಿಮ್ಮಲ್ಲಿ ಸರಿಯಾಗಿ ಆಹಾರ ಜೀರ್ಣವಾಗಿದೆಯೋ ಇಲ್ಲವೋ, ನೀವು ಗಾಳಿ ಬೆಳಕಿಲ್ಲದ ಕೋಣೆಯೊಳಗೆ ಕುಳಿತಿರುವಿರೋ ಅಥವಾ ನೀವು ಬಯಲಲ್ಲಿದ್ದೀರೋ; ನಿಮ್ಮ ಎದುರಿಗೆ ಒಂದು ಸುಂದರವಾದ ಪ್ರಕೃತಿಯ ದೃಶ್ಯವಿದೆಯೋ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಇವೆಲ್ಲವುದರ ಅರಿವು ನಿಮಗಿರುವುದಿಲ್ಲ, ಆದರೆ ನೀವು ಅನೇಕ ವಸ್ತುಗಳ ಬಗ್ಗೆ ವಿಚಾರ ಮಾಡುತ್ತೀರಿ, ನಿಮಗೆ ಸಂಬಂಧವಿಲ್ಲದ ರಾಶಿ ವಸ್ತುಗಳ ಪ್ರಕಾರ ಸಂಪೂರ್ಣವಾಗಿ ಬೇರೆಯೇ ಯೋಚಿಸುತ್ತೀರಿ!

ಮತ್ತು ಈ ಸ್ವಂತ ವಿಚಾರ ಮಾಡುವ ಪ್ರಕ್ರಿಯೆಯು ಸಹಕಾರಭರಿತವಾಗಿ ಸುಸಜ್ಜಿತವಾಗಿ, ತರ್ಕಬದ್ಧವಾದ ವಿಚಾರವಾಗಬೇಕಾದರೆ, ಬಹು ದಿನಗಳ ಆಳವಾದ ಅಭ್ಯಾಸದ ಅವಶ್ಯಕತೆಯಿದೆ. ಮತ್ತು ಆಗ, ಈ ಪ್ರಕ್ರಿಯೆಯ ಒಳ್ಳೆಯ ಭಾಗವೇನೆಂದರೆ, ಯಾವಾಗ ನೀವು ಸುಂದರವಾಗಿ, ಒಳ್ಳೆಯ ರೀತಿಯಲ್ಲಿ ಬಹಳ ಶಕ್ತಿಶಾಲಿ, ಮತ್ತು ಸಾಮರ್ಥ್ಯಯುತ ಮಾನಸಿಕತೆಯನ್ನು ನಿರ್ಮಾಣ ಮಾಡಿದ ನಂತರ, ನಾನು ನಿಮಗೆ ಹೇಳಲ್ಪಡುವ ಮೊದಲ ವಿಷಯವೇನೆಂದರೆ,

“ದೈವನೊಂದಿಗೆ ಐಕ್ಯರಾಗಲು ಈಗಾಗಲೇ ನಿರ್ಮಾಣ ಮಾಡಿದ್ದನ್ನು ನೀನು ನಾಶಪಡಿಸಲೇಬೇಕು.” ಆದರೆ ಎಲ್ಲಿಯವರೆಗೆ ನೀನು ಈ ನಿರ್ಮಾಣವನ್ನು ಮಾಡಿರುವುದಿಲ್ಲವೋ, ದೈವನೊಂದಿಗೆ ನೀನು ಐಕ್ಯವಾಗಲು ಸಾಧ್ಯವಿಲ್ಲ, ಏಕೆಂದರೆ ಕೇವಲ ನಿನಗೆ ಸಂಬಂಧಿಸಿದ ವಸ್ತುಗಳನ್ನು ಬಿಟ್ಟು ಬೇರೇನೂ ಅಲ್ಲಿರುವುದಿಲ್ಲ! “ನಮ್ಮನ್ನು ನಾವು ಕೊಟ್ಟುಕೊಳ್ಳಲು ಮೊದಲು ನಮ್ಮದೇ ಆದ ಅಸ್ತಿತ್ವವನ್ನು ಸ್ಥಾಪಿಸಬೇಕು.” ಈಗಾಗಲೇ ಹೇಳಿರುವುದನ್ನು ಪುನಃ ಹೇಳುತ್ತಿದ್ದೇನೆ.

ನಿಜವಾಗಿಯೂ, ಸದ್ಯದ ಜಗತ್ತಿನ ವಾಸ್ತವ ಸ್ಥಿತಿಯಲ್ಲಿ ದೈವನಿಗೆ ಕೊಟ್ಟುಕೊಳ್ಳುವ ಒಂದೇ ಒಂದು ಅಂಶವೇನೆಂದರೆ, ತನ್ನ ದೇಹ ಮಾತ್ರ. ಆದರೆ ಅದನ್ನೇ ನೀನು ದೈವನಿಗೆ ಕೊಡುವುದಿಲ್ಲ. ಹೌದು ನೀವು ನಿಮ್ಮ ಕಾರ್ಯವನ್ನು ಅರ್ಪಣೆ ಮಾಡುವ ಮೊದಲು ಪ್ರಯತ್ನಿಸಬಹುದು! ಆದರೆ ಇನ್ನೂ, ಇಲ್ಲಿ ಬಹಳ ಅಂಶಗಳಿವೆ ಅವೆಲ್ಲವೂ ನಿಮ್ಮ ನಿಜವಾದವುಗಳಲ್ಲ!

ನೀನು ನಿನ್ನ ದೇಹವನ್ನು ದೈವನಲ್ಲಿ ವಿಲೀನಗೊಳಿಸಲು ಬಯಸುವೆಯಾ? ಪ್ರಯತ್ನಿಸಿ ನೋಡು! ಇದನ್ನು ನೀನು ಹೇಗೆ ಮಾಡುವೆ? ನೀನು ನಿನ್ನ ಮನವನ್ನು ವಿಲೀನಗೊಳಿಸಬಹುದು, ನಿನ್ನ ಪ್ರಾಣವನ್ನು ವಿಲೀನಗೊಳಿಸಬಹುದು, ನಿನ್ನೆಲ್ಲಾ ಭಾವನೆಗಳನ್ನು ವಿಲೀನಗೊಳಿಸಬಹುದು, ನಿನ್ನ ಅಭೀಪ್ಸೆಗಳನ್ನು ವಿಲೀನಗೊಳಿಸ–ಬಹುದು, ಇವೆಲ್ಲವುಗಳನ್ನು ಕೂಡಿಸಿ ವಿಲೀನಗೊಳಿಸಬಹುದು. ಆದರೆ ನಿಮ್ಮ ದೇಹ ಅದನ್ನು ಹೇಗೆ ಮಾಡುತ್ತೀರಿ? ನೀವು ಅದನ್ನು ಕುದಿಯುವ ಮಡಿಕೆಯಲ್ಲಿ ಕರಗಿಸಲಾರಿರಿ! (ನಗುತ್ತಾ) ಆದಾಗ್ಯೂ ಒಂದೇ ಒಂದು ವಸ್ತುವಿನ ಬಗ್ಗೆ ಖಚಿತವಾಗಿ ‘ಇದೇ ನಾನು’ ಮತ್ತು ಅದಕ್ಕೊಂದು ಹೆಸರನ್ನು ಕೊಟ್ಟು ಹೇಳಲು ಸಾಧ್ಯ; ಆದರೂ ನಿನ್ನ ಹೆಸರು, ಸಂಕೇತವಷ್ಟೇ... ಆದರೆ ಇನ್ನೂ ನೀನು ನಿನ್ನನ್ನು “ಇದೇ ನಾನು” ಎಂದು ಕರೆದುಕೊಳ್ಳುವ ರೂಢೀಗತ ಪದ್ಧತಿಯನ್ನು ಹಾಕಿಕೊಂಡಿರುವೆ. ನಿನ್ನನ್ನು ನೀನು ಕನ್ನಡಿಯಲ್ಲಿ ನೋಡಿಕೊಂಡಾಗ, ಮತ್ತು ಇಪ್ಪತ್ತು ವರ್ಷಗಳ ಹಿಂದೆ ನೀನು ಹೇಗಿದ್ದೀಯೋ ಈಗಿರುವದಕ್ಕಿಂತ ಬೇರೆಯೇ ಆಗಿರುವೆ... ಅದನ್ನು ಗುರುತಿಸಲು ಸಹ ಅಸಾಧ್ಯ... ಆದಾಗ್ಯೂ “ಹೌದು, ಇದೇ ನಾನು” ಎಂದು ಹೇಳುವಂತೆ ಮಾಡುತ್ತದೆ, ಹೌದಲ್ಲವೇ ? “ನನ್ನ ಹೆಸರು ಇದು, ಅದು” – ಪೀಟರ್, ಲೂಸಿಯ, ಜಾಕ್, ಆ್ಯಂಡ್ರೆ ಯಾರಾದರೂ ಆಗಿರಬಹುದು...

(ಮೌನದ ನಂತರ) ಮತ್ತು ಇದೂ ಸಹ, ನಮ್ಮನ್ನು ನಾವು ನೋಡಿಕೊಂಡಾಗ, ಪ್ರತಿ ಏಳು ವರ್ಷದಲ್ಲಿ ನಮ್ಮ ಎಲ್ಲಾ ಜೀವಕೋಶಗಳು ಬದಲಾಗಿವೆ ಮತ್ತು ಒಂದು

ರೀತಿಯ ರೂಢಿಗತವಾಗಿ ಅದೇ ರೂಪವನ್ನು ಉಳಿಸಿಕೊಂಡಿವೆ. ಆದರೆ ಅದು ಹಾಗೆಯೇ ಇದೆಯೇ? ನೀವು ಬಹಳ ಚಿಕ್ಕವರಿದ್ದಾಗ ತೆಗೆದ ಭಾವಚಿತ್ರಗಳು ನಿಮ್ಮವಲ್ಲವೇ? ಮತ್ತು ಹತ್ತು, ಇಪ್ಪತ್ತು, ಮೂವತ್ತು ವರ್ಷದವರಿದ್ದಾಗ ಇರುವ ಭಾವಚಿತ್ರಗಳು – ಆದರೆ ನಿಮ್ಮ ಸ್ವ–ಇಚ್ಛೆಯಿಂದ ಇವುಗಳೆಲ್ಲವೂ ನೀವೇ ಎಂದು ಗುರುತಿಸಿಕೊಳ್ಳುತ್ತೀರಿ; ಇಲ್ಲದಿದ್ದರೆ, ನಿಜವಾಗಿಯೂ ನೀವು ಅದೇ ರೀತಿಯಾಗಿ ಇಲ್ಲ... ಆಗ ಇರುವ ಎತ್ತರ, ಈಗ ಇರುವ ಎತ್ತರಕ್ಕೆ ಹೋಲಿಸಿದರೆ ಬಹಳಷ್ಟು ವ್ಯತ್ಯಾಸವಾಗಿದೆ! ಹಾಗಾಗಿ ವಿಷಯ ಹೀಗಿದೆ...

ಈ ಎಲ್ಲವೂ... ನಿಮ್ಮನ್ನು ಒಂದು ಕೆಸರಿನಲ್ಲಿ ದೂಡಲು ಈ ಎಲ್ಲವನ್ನೂ ಹೇಳುತ್ತಿಲ್ಲ. ಇದೆಲ್ಲವನ್ನು ಹೇಳುವ ಉದ್ದೇಶವೆಂದರೆ, ನಮ್ಮ ಅಹಂಕಾರವನ್ನು ದೈವನಲ್ಲಿ ವಿಲೀನಗೊಳಿಸುವ ಮೊದಲು ನಾನು ಏನು ಇದ್ದೇನೆ ಎಂಬುದನ್ನು ಸ್ವಲ್ಪವಾದರೂ ತಿಳಿಯುವುದು ಅವಶ್ಯಕವಾಗಿದೆ. ಅಲ್ಲಿ ಅಹಂಕಾರವಿದೆ. ಅಹಂಕಾರದ ಅವಶ್ಯಕತೆಯೇನೆಂದರೆ ನೀವು ಪ್ರಜ್ಞಾಯುತರಾಗುವುದು, ಸ್ವತಂತ್ರ ಸತ್ತೆಯುಳ್ಳವ–ರಾಗುವುದು, ವೈಯಕ್ತೀಕರಣಗೊಳ್ಳುವುದು – ಇದರ ಅರ್ಥವೆಂದರೆ – ಎಲ್ಲವೂ ಬಂದು ಹೋಗುವ ಸಾರ್ವಜನಿಕ ವೃತ್ತದಂತೆ ನೀವಾಗಬಾರದು! ನೀವು ನಿಮ್ಮೊಳಗಿನ ಅಸ್ತಿತ್ವದಲ್ಲಿರಬೇಕು. ಈ ಕಾರಣಕ್ಕಾಗಿ ಅಹಂಕಾರವಿದೆ. ಇದೇ ರೀತಿಯೇ; ಇದಕ್ಕಾಗಿಯೇ ಚರ್ಮವಿದೆ... ಆದಾಗ್ಯೂ ಕೆಲವೊಂದು ಭೌತಿಕ ಶಕ್ತಿಗಳು ಚರ್ಮದ ಮೂಲಕ ಹಾದುಹೋಗುತ್ತವೆ, ಕೆಲವೊಂದು ಕಂಪನಗಳು ಸ್ವಲ್ಪ ದೂರದವರೆಗೆ ಸಾಗುತ್ತವೆ. ಆದರೆ, ಚರ್ಮವಿರುವ ಕಾರಣ ಒಂದರಲ್ಲಿ ಇನ್ನೊಂದು ವಿಲೀನವಾಗುವದನ್ನು ತಡೆಯುತ್ತಿದೆ.

(ಮೌನದ ನಂತರ) ಮತ್ತು ಆಗ, ನೀವು ಈ ಎಲ್ಲವನ್ನೂ ದೈವನಿಗೆ ಅರ್ಪಿಸುತ್ತೀರಿ. ಇದಕ್ಕಾಗಿ ಬಹು ವರ್ಷಗಳ ಅಭ್ಯಾಸದ ಅವಶ್ಯಕತೆಯಿದೆ. ನೀವು ನಿಮ್ಮ ಬಗ್ಗೆ... (ಮೌನ)... ಪ್ರಜ್ಞಾತಯುತರಾಗುವುದಷ್ಟೇ ಅಲ್ಲ, ಎಲ್ಲದರ ಬಗ್ಗೆ ವಿವರವಾಗಿ ಅರಿವು ಪಡೆಯಬೇಕು, ಆದರೆ ನಿಮ್ಮ ಸತ್ತೆಯ ದೈವೀ ಕೇಂದ್ರವಾದ ಚೈತ್ಯ ಕೇಂದ್ರದ ಸುತ್ತಲೂ "ನನ್ನದು" ಎಂದು ಯಾವುದನ್ನು ಕರೆಯುತ್ತೀರೋ ಅದನ್ನು ಸಂಘಟಿಸಬೇಕು, ಹಾಗಾಗಿ ಅದು ಒಂದೇ ಸುಸಂಬದ್ಧ, ಪೂರ್ಣ ಪ್ರಜ್ಞಾಯುತವಾದ ಸತ್ತೆಯಾಗುತ್ತದೆ. ಈ ದೈವೀ ಕೇಂದ್ರವು ದೈವನಿಗೆ ತನ್ನನ್ನು ತಾನು ಈಗಾಗಲೇ ಸಮರ್ಪಿಸಿಕೊಂಡಿರುತ್ತದೆ. (ಶ್ರೀಮಾತೆಯವರು ಅರ್ಪಣೆಯ ಹಾವಭಾವವನ್ನು ಮಾಡುತ್ತಾ), ಎಲ್ಲವನ್ನೂ ಸಾಮರಸ್ಯದಿಂದ ಇದರ ಸುತ್ತಲೂ

ಸಂಘಟಿಸಿದರೆ, ಎಲ್ಲವೂ ದೈವಕ್ಕೆ ಅರ್ಪಿತವಾಗುತ್ತದೆ. ಮತ್ತು ಹಾಗಾಗಿ ಯಾವಾಗ ವೈಯಕ್ತೀಕರಣದ ಕೆಲಸ ಮುಗಿದಿರುತ್ತದೆಯೋ, ಯಾವಾಗ ಸರಿಯಾದ ಕಾಲ ಬಂದಿರುತ್ತದೆಯೋ, ಯಾವಾಗ ದೈವನಿಗೆ ಎಲ್ಲವೂ ಸರಿಯೆನಿಸುತ್ತದೆಯೋ ಆಗ ದೈವನು ನಿನ್ನ ಅಹಂಕಾರವನ್ನು ತನ್ನೊಳಗೆ ವಿಲೀನಗೊಳ್ಳಲು ಅನುಮತಿ ಕೊಡುತ್ತಾನೆ. ಅಂದಿನಿಂದ ದೈವನಿಗಾಗಿ ಬದುಕುತ್ತೀರಿ.

ಆದರೆ ಈ ನಿರ್ಧಾರವನ್ನು ತೆಗೆದುಕೊಳ್ಳುವವನು ದೈವನೇ ಆಗಿರುತ್ತಾನೆ. ಮೊದಲು ನೀನು ಈ ಎಲ್ಲಾ ಕೆಲಸವನ್ನು ಮಾಡಿರಬೇಕು, ಪ್ರಜ್ಞಾಯುತ ಸತ್ತೆಯಾಗಿರಬೇಕು, ದೈವನ ಸುತ್ತಲೂ ಕೇವಲ ಮತ್ತು ಪ್ರತ್ಯೇಕವಾಗಿ ಕೇಂದ್ರೀಕರಣಗೊಂಡಿರಬೇಕು ಮತ್ತು ಅವನಿಂದಲೇ ಆಳಲ್ಪಟ್ಟಿರಬೇಕು. ಇದೆಲ್ಲದರ ನಂತರವೂ ಸಹ ಇಲ್ಲಿ ಇನ್ನೂ ಅಹಂಕಾರವಿರುತ್ತದೆ. ಏಕೆಂದರೆ ನಿನ್ನ ವೈಯಕ್ತೀಕರಣಕ್ಕೆ ಸಹಾಯ ಮಾಡುವುದು ಅಹಂಕಾರವೇ ಆಗಿದೆ. – ಆದರೆ ಒಮ್ಮೆ ಈ ಕೆಲಸ ಪರಿಪೂರ್ಣ, ಸಂಪೂರ್ಣವಾದ ಮೇಲೆ, ಆಗ, ಆ ಕ್ಷಣದಲ್ಲಿ "ನಾನು ಇಲ್ಲಿ, ನಾನು ಸಿದ್ಧನಾಗಿದ್ದೇನೆ. ನಿನಗೆ ನಾನು ಬೇಕೇ?" ಎಂದು ನೀನು ದೈವನಿಗೆ ಹೇಳಬಹುದು. ಮತ್ತು ದೈವನು ಸಾಮಾನ್ಯವಾಗಿ "ಆಗಲಿ" ಎನ್ನುತ್ತಾನೆ. ಎಲ್ಲವೂ ಮುಗಿಯುತ್ತದೆ. ಎಲ್ಲವೂ ಸಾಧಿಸಲ್ಪಡುತ್ತದೆ. ಮತ್ತು ಆಗ ನೀನು ದೈವೀ ಕೆಲಸದ ನಿಜವಾದ ಉಪಕರಣವಾಗುತ್ತೀಯ, ಆದರೆ ಮೊದಲು ಉಪಕರಣವನ್ನು ಸರಿಯಾಗಿ ನಿರ್ಮಾಣ ಮಾಡಬೇಕಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/256–61 – ಶ್ರೀಮಾತೆ**

## ಧನಾತ್ಮಕ ಮತ್ತು ತ್ವರಿತ ಮಾರ್ಗ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

(ಶ್ರೀಮಾತೆಯವರು ತರಗತಿಯಲ್ಲಿ, ಈ ಕೆಳಗಿನ ಸಾಲುಗಳೊಂದಿಗೆ ಕೊನೆಗೊಳ್ಳುವ, ಬೌದ್ಧ ಬೋಧನೆಗಳಾದ ಧಮ್ಮಪಾದದ ಅಧ್ಯಾಯವನ್ನು ಓದುತ್ತಾರೆ. ನಂತರ ಅವರು ಅದನ್ನು ವಿವರಿಸುತ್ತಾರೆ:)

"ನಾವು ನಿಜವಾದ ಆನಂದವನ್ನು ಪಡೆದುಕೊಳ್ಳುವುದು ನೈತಿಕ ನಿಯಮಗಳಿಂದ ಮತ್ತು ಆಚರಣೆಗಳಿಂದಲ್ಲ ಅಥವಾ ವಿಶಾಲವಾದ ಜ್ಞಾನದಿಂದಲ್ಲ ಅಥವಾ ಧ್ಯಾನದ

ಅಭ್ಯಾಸದಿಂದಲ್ಲ ಅಥವಾ ಏಕಾಂತ ಜೀವನದಿಂದಲ್ಲ ಅಥವಾ ಆಲೋಚನೆಯಿಂದಲ್ಲ; ಅದನ್ನು ಪಡೆದುಕೊಳ್ಳುವುದು ನಮ್ಮೆಲ್ಲ ಆಸೆಗಳನ್ನು ತೊಡೆದು ಹಾಕುವ ಮೂಲಕ." ನಿಸ್ಸಂಶಯವಾಗಿ ಎಲ್ಲ ಆಸೆಗಳನ್ನು ತೊಡೆದು ಹಾಕುವುದು ಸುಲಭವಲ್ಲ, ಕೆಲವೊಮ್ಮೆ ಇಡೀ ಜೀವಿತಾವಧಿಯೆ ಬೇಕಾಗುತ್ತದೆ. ನಿಜ ಹೇಳಬೇಕೆಂದರೆ, ಇದೊಂದು ತುಂಬಾ ನಕಾರಾತ್ಮಕವಾದ ಮಾರ್ಗವೆಂದು ತೋರುತ್ತದೆ, ಆದಾಗ್ಯೂ, ಅಭ್ಯಸಿಸಲು ಅನಿವಾರ್ಯವಿದ್ದರೂ, ನಮ್ಮನ್ನು ನಾವು ಮೋಸಗೊಳಿಸಿಕೊಳ್ಳಲು ಬಯಸದಿದ್ದರೂ, ಬೆಳವಣಿಗೆಯ ಒಂದು ನಿರ್ದಿಷ್ಟ ಹಂತದಲ್ಲಿ, ಇದೊಂದು ಉಪಯುಕ್ತವಾದ ನಿಯಮವಾಗಿದೆ. ಏಕೆಂದರೆ ಮೊದಲಿಗೆ ನೀವು ಅತ್ಯಂತ ಸ್ಪಷ್ಟವಾದ ಮತ್ತು ನಿಮಗೆ ಅವುಗಳ ಬಗ್ಗೆ ಕಲ್ಪನೆಯೂ ಇರದಷ್ಟು ತೊಂದರೆ ಕೊಡುವ ಗಂಭೀರವಾದ ಆಸೆಗಳನ್ನು ತೊಡೆದು ಹಾಕುವುದರಿಂದ ಪ್ರಾರಂಭಿಸುತ್ತೀರಿ; ನಾವು ಮಾಡಬೇಕಾದ ಸಂಗತಿಗಳ ರೂಪವನ್ನು ತೆಗೆದುಕೊಳ್ಳುವ, ಆಂತರಿಕ ಆದೇಶಗಳ ಸಮಯದಲ್ಲೂ ಅನಿವಾರ್ಯವಾದ ಸೂಕ್ಷ್ಮ ಆಸೆಗಳು ಬರುತ್ತವೆ, ಮತ್ತು ಅವುಗಳನ್ನು ಪತ್ತೆ ಹಚ್ಚಲು ಮತ್ತು ಜಯಿಸಲು ಸಮಯ ಮತ್ತು ಹೆಚ್ಚಿನ ಪ್ರಾಮಾಣಿಕತೆಯ ಅಗತ್ಯವಿರುತ್ತದೆ; ಅಂತಿಮವಾಗಿ ಭೌತಿಕ ಜಗತ್ತಿನಲ್ಲಿ, ಬಾಹ್ಯ ವಿಷಯಗಳಲ್ಲಿ, ಭಾವನೆಗಳ ಜಗತ್ತಿನಲ್ಲಿ, ಆಲೋಚನೆಗಳಿಗೆ ಸಂಬಂಧಿಸಿದಂತೆ ಮಾನಸಿಕ ಜಗತ್ತಿನಲ್ಲಿ ಈ ನಿಕೃಷ್ಟ ಆಸೆಗಳನ್ನು ನೀವು ತೊಡೆದು ಹಾಕಿದ್ದೀರಿ ಎಂದು ತೋರುತ್ತದೆ, ನಂತರ ನೀವು ಅವುಗಳನ್ನು ಆಧ್ಯಾತ್ಮಿಕ ಜಗತ್ತಿನಲ್ಲಿ ಮತ್ತೆ ಕಂಡುಕೊಳ್ಳುತ್ತೀರಿ, ಅಲ್ಲಿ ಅವುಗಳು ಹೆಚ್ಚು ಅಪಾಯಕಾರಿ, ಹೆಚ್ಚು ಸೂಕ್ಷ್ಮ, ಹೆಚ್ಚು ಭೇದಿಸಿಕೊಂಡು ಹೋಗುವ, ಹೆಚ್ಚು ಅಗೋಚರವಾಗಿರುತ್ತವೆ ಮತ್ತು ಅವುಗಳನ್ನು ಆಸೆಗಳೆಂದು ಕರೆಯಲು ಧೈರ್ಯ ಮಾಡದ ವೇಷ ಧರಿಸಿದ ಸಂತನ ತೋರಿಕೆಯಂತಿರುತ್ತವೆ.

ಅದೆಲ್ಲವನ್ನೂ ಕಳೆದುಕೊಳ್ಳುವಲ್ಲಿ, ಮನಗಾಣುವಲ್ಲಿ, ಹೊರಹಾಕುವಲ್ಲಿ ಮತ್ತು ತೊಡೆದು ಹಾಕುವಲ್ಲಿ ನಾವು ಯಶಸ್ವಿಯಾದಾಗ ಕೂಡ ನಾವು ಕಾಯಕದ ನಕಾರಾತ್ಮಕ ಭಾಗವನ್ನು ಮಾತ್ರ ಮಾಡಿದಂತಾಗುತ್ತದೆ.

ನಾವು ಎಲ್ಲ ಆಸೆಗಳಿಂದ ಮುಕ್ತವಾದಾಗ, ನಾವು ಅಗತ್ಯವಾಗಿ ಅನಂತ ಆನಂದವನ್ನು ಪ್ರವೇಶಿಸುತ್ತೇವೆ ಎಂದು ಬುದ್ಧನು ಹೇಳಿದ್ದಾನೆ ಅಥವಾ ಹೇಳುವಂತೆ ಮಾಡಲಾಗಿದೆ. ಈ ಆನಂದವು ಸ್ವಲ್ಪ ಶುಷ್ಕವಾಗಿರಬಹುದು ಮತ್ತು ಯಾವುದೇ ರೀತಿಯಲ್ಲಿ ಇದು ತ್ವರಿತ ಮಾರ್ಗವೆಂದು ನನಗೆ ತೋರುತ್ತಿಲ್ಲ.

ಪ್ರಾರಂಭದಲ್ಲಿ ನಾವು ಸಮಸ್ಯೆಯನ್ನು ಒಟ್ಟಾರೆ ಎದುರಿಸುವದಾದರೆ, ಧೈರ್ಯ ಮತ್ತು ದೃಢ ಸಂಕಲ್ಪದಿಂದ ಅದರೊಳಗೆ ಧುಮುಕುವುದಾದರೆ, ಮತ್ತು ಬಯಕೆಗಳ ಹಿಂದೆ ದೀರ್ಘ, ಪ್ರಯಾಸಕರ, ನೋವಿನ, ನಿರಾಶಾದಾಯಕ ಬೇಟೆಯನ್ನು ಕೈಗೊಳ್ಳುವ ಬದಲು, ಇಡೀ ಪುರುಷನ ಉತ್ಥಾನದಲ್ಲಿ ಮತ್ತು ಎಲ್ಲ ಅಂಶಗಳಲ್ಲಿ, ಯಾವುದೇ ಲೆಕ್ಕಾಚಾರವಿಲ್ಲದೆಯೆ ನಮ್ಮನ್ನು ನಾವು ಸರಳವಾಗಿ, ಪೂರ್ಣವಾಗಿ, ಬೇಷರತ್ತಾಗಿ ಅತ್ಯುನ್ನತ ಸತ್ಯಕ್ಕೆ, ಪರಮ ಸಂಕಲ್ಪಕ್ಕೆ, ಪರಮಾತ್ಮನಿಗೆ, ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದಾದರೆ, ಅವನ ತೋಳುಗಳಲ್ಲಿ ನಮ್ಮನ್ನು ನಾವು ಹಾಕಿ–ಕೊಳ್ಳುವುದಾದರೆ, ಅಹಂಕಾರವನ್ನು ತೊಡೆದುಹಾಕಲು ಇದು ಅತ್ಯಂತ ವೇಗವಾದ ಮತ್ತು ಮೂಲಸ್ವರೂಪದ ಮಾರ್ಗವಾಗಿದೆ. ಇದನ್ನು ಮಾಡುವುದು ಕಷ್ಟ ಎಂದು ಜನರು ಹೇಳುತ್ತಾರೆ, ಆದರೆ ಅಲ್ಲೊಂದು ಭಾವುಕತೆ ಇದೆ, ಲವಲವಿಕೆ ಇದೆ, ಉತ್ಸಾಹವಿದೆ, ಬೆಳಕಿದೆ, ಸೌಂದರ್ಯವಿದೆ, ಉತ್ಸುಕ ಮತ್ತು ಸೃಜನಶೀಲ ಜೀವನವಿದೆ.

ಅಪೇಕ್ಷೆಯಿಲ್ಲದೆ ಅಹಂಕಾರವನ್ನು ಪೋಷಿಸಲು ಮತ್ತೇನೂ ಉಳಿಯುವುದಿಲ್ಲ–ವೆನ್ನುವುದು ಸತ್ಯವಾಗಿದೆ ಮತ್ತು ಪ್ರಜ್ಞೆಯು ಗಟ್ಟಿಯಾಗುವ ಅನಿಸಿಕೆ ನಮಗೆ ಉಂಟಾಗುತ್ತದೆ, ಅಹಂಕಾರವು ಚೂರು–ಚೂರಾದರೆ, ಆಗ ನಮ್ಮ ಚೇತನವೂ ಕೂಡ ಮಣ್ಣಾಗುತ್ತದೆ (ಚೂರು–ಚೂರಾಗುತ್ತದೆ) ಮತ್ತು ನಾವು ಶುದ್ಧ ಹಾಗೂ ಸರಳ ಶೂನ್ಯೀಕರಣ ನಿರ್ವಾಣದಲ್ಲಿ ಪ್ರವೇಶಿಸಲು ಸಿದ್ಧರಾಗುತ್ತೇವೆ.

ಆದರೆ ನಾವು ಇಲ್ಲಿ ನಿಜವಾದ ನಿರ್ವಾಣವೆಂದು ಪರಿಗಣಿಸುವುದು ಪರಮಾತ್ಮನ ತೇಜಸ್ಸಿನಲ್ಲಿ ಅಹಂಕಾರವು ಕಣ್ಮರೆಯಾಗುವುದು ಎನ್ನುವದನ್ನು ಅರಿತಿರಬೇಕು. ಈ ಮಾರ್ಗವನ್ನು ನಾನು ಸಕಾರಾತ್ಮಕ ಮಾರ್ಗವೆಂದು, ಸಮಗ್ರವಾದ, ಸಂಪೂರ್ಣವಾದ, ಪರಿಪೂರ್ಣವಾದ, ಮೀಸಲಿಡದ, ಚೌಕಾಶಿ ಇಲ್ಲದ ಸಮರ್ಪಣೆ ಎಂದು ಕರೆಯುತ್ತೇನೆ.

ತನ್ನ ಬಗ್ಗೆ ಯೋಚಿಸದಿರುವುದು, ತನಗಾಗಿ ಬದುಕದೆ ಇರುವುದು, ತನ್ನೊಂದಿಗೆ ಏನನ್ನೂ ಉಲ್ಲೇಖಿಸದಿರುವುದು, ಅತ್ಯಂತ ಸುಂದರ, ಪ್ರಕಾಶಮಾನ, ಆನಂದದಾಯಕ, ಶಕ್ತಿಯುತ, ಕರುಣಾಮಯಿ ಮತ್ತು ಅನಂತವಾದದ್ದನ್ನು ಮಾತ್ರ ಯೋಚಿಸುವುದು, ಯಾವುದಕ್ಕೂ ಹೋಲಿಸಲಾಗದಷ್ಟು ಅಗಾಧವಾದ ಆನಂದವು ಅಲ್ಲಿದೆ.

ಪ್ರಯತ್ನಕ್ಕೆ ಅರ್ಹವಾದ (ಪರಮಾತ್ಮನ ಕುರಿತು ಚಿಂತನೆ) ಸಂಗತಿ ಮಾತ್ರ ಇದೊಂದೇ ಅಗಿದೆ... ಉಳಿದೆಲ್ಲವೂ ಕೇವಲ ಸಮಯವನ್ನು ಸೂಚಿಸುವ ಸಂಗತಿಗಳಾಗಿವೆ.

ವ್ಯತ್ಯಾಸವಿರುವುದು, ಪರ್ವತವನ್ನು ನೂರಾರು ವರ್ಷಗಳ ಕಾಲ ನಿಧಾನವಾಗಿ, ಪ್ರಯಾಸದಿಂದ, ಹಂತ ಹಂತವಾಗಿ ಸುತ್ತುತ್ತಾ, ಸುತ್ತುತ್ತಾ ಏರುವುದರ ಮತ್ತು ಅದೇ ಪರ್ವತವನ್ನು ಕಣ್ಣಿಗೆ ಕಾಣದ ರೆಕ್ಕೆಗಳನ್ನು ಹರಡಿಕೊಂಡು ನೇರವಾಗಿ ಶಿಖರಕ್ಕೆ ಏರುವುದರ ಮಧ್ಯದಲ್ಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/267–69 – ಶ್ರೀಮಾತೆ**

## ಅಲ್ಲಿರುವುದೊಂದೇ ಮಾರ್ಗ

... ಅಲ್ಲಿರುವುದೊಂದೇ ಮಾರ್ಗ, ಅಹಂ ಹೋಗಬೇಕು, ಅಷ್ಟೇ. ಇದು ಅದಾಗಿದೆ. "ನಾನು" ಎನ್ನುವುದು ಅಳಿದು ಶೂನ್ಯ ಉಳಿದಾಗ ಮಾತ್ರ: ಅದು ಸಂಪೂರ್ಣವಾಗಿ ಈ ರೀತಿ (ಅಗಾಧವಾದ, ನಯವಾದ, ಸುಕ್ಕುಗಳಿಲ್ಲದ ಏನೋ ಒಂದನ್ನು ಸೂಚಿಸುವ ಸನ್ನೆ) ರಿಕ್ತವಾಗಿದೆ ಎನ್ನುವುದು ನಿಮಗೆ ಗೊತ್ತೆ, ಒಂದು ವಿಧವನ್ನು... ಪಡೆದುಕೊಳ್ಳುವುದು, ಇದನ್ನು ಪದಗಳ ಮೂಲಕವೂ ಸಹ ವ್ಯಕ್ತಪಡಿಸಲಾಗದು, ಆದರೆ ಒಂದು ಬಹಳ ಸ್ಥಿರವಾದ ಸಂವೇದನೆ: "ನೀವು ಏನನ್ನು ಬಯಸಿದ್ದೀರಿ, ನೀವು ಬಯಸಿದಂತೆ" (ಪದಗಳು ತುಂಬಾ ಚಿಕ್ಕದಾಗುತ್ತವೆ). ವಾಸ್ತವವಾಗಿ, ಈ ದೇಹವು ಅಸ್ತಿತ್ವದಲ್ಲಿಲ್ಲ, ಇದನ್ನು ಬಳಸಲಾಗುತ್ತದೆ ಎಂಬ ವಾಸ್ತವಿಕ ಸಂವೇದನೆಯನ್ನು ಹೊಂದಲು – ಅದು ಮಾತ್ರ ಅಲ್ಲಿದೆ (ಸಂವೇದನೆ). ಈ ರೀತಿ ಮಾಡುವುದು ಇದಾಗಿದೆ (ಒತ್ತಡದ ಸನ್ನೆ). ಅದರ ಈ ಭಾವನೆ, ಈ ಜಾಗೃತ ವೈಶಾಲ್ಯ (ಶ್ರೀಮಾತೆಯವರು ತಮ್ಮ ತೋಳುಗಳನ್ನು ಚಾಚುತ್ತಾರೆ) .... ಕೊನೆಯಲ್ಲಿ ನೀವು ಇದನ್ನು ನೋಡುವಿರಿ ("ನೋಡುವುದು", ಇದು ಆಕೃತಿಗಳೊಂದಿಗಿನ ನೋಟವಲ್ಲ, ಆದರೆ ಇದೊಂದು ಆಕೃತಿಯಾಗಿದೆ... ಯಾವುದರೊಂದಿಗೆ, ನನಗೆ ಗೊತ್ತಿಲ್ಲ! ಆದರೆ ಇದು ಸ್ಪಷ್ಟವಾಗಿದೆ, ಆಕೃತಿಗಳಿಗಿಂತ ಸ್ಪಷ್ಟವಾಗಿದೆ), ಈ ಅಗಾಧ ಶಕ್ತಿಯ ಒಂದು ನೋಟ, ಈ ಅಗಾಧ ಕಂಪನವು ಅದುಮುತ್ತದೆ, ಅದುಮುತ್ತದೆ,.... ನಂತರ ಇದರಡಿಯಲ್ಲಿ ಜಗತ್ತು ಒದ್ದಾಡುತ್ತದೆ ಮತ್ತು ವಿಷಯವು ತೆರೆದುಕೊಳ್ಳುತ್ತದೆ, ಇದು ತೆರೆದುಕೊಂಡಾಗ, ಅದು ಪ್ರವೇಶಿಸುತ್ತದೆ ಮತ್ತು ಪಸರಿಸುತ್ತದೆ.

ಇದು ನಿಜಕ್ಕೂ ಕುತೂಹಲಕಾರಿಯಾಗಿದೆ.

ಇರುವುದು ಇದೊಂದೇ ಪರಿಹಾರ. ಬೇರೆ ಯಾವ ಪರಿಹಾರವೂ ಇಲ್ಲ. ಉಳಿದೆಲ್ಲವೂ, ಆಕಾಂಕ್ಷೆಗಳು, ಪರಿಕಲ್ಪನೆಗಳು, ನಿರೀಕ್ಷೆಗಳಾಗಿವೆ... ಇದು ಇನ್ನೂ

ಅತಿಮಾನವನಾಗಿದೆ, ಇದು ಅತಿಮಾನಸವಲ್ಲ. ಇದು ತನ್ನ ಸಂಪೂರ್ಣ ಮಾನವ ಕುಲವನ್ನು ಮೇಲಕ್ಕೆ ಸೆಳೆಯಲು ಪ್ರಯತ್ನಿಸುವ ಉನ್ನತ ಮಾನವ ಕುಲವಾಗಿದೆ, ಆದರೆ... ಯಾವುದೇ ಪ್ರಯೋಜನವಿಲ್ಲ, ಯಾವುದೇ ಪ್ರಯೋಜನವಿಲ್ಲ.

ಏರಬೇಕೆಂದು ಅಂಟಿಕೊಳ್ಳುವ, ಹಾಗೆ ಹಿಡಿಯಲು ಪ್ರಯತ್ನಿಸುವ, ಆದರೆ ತನ್ನನ್ನು ತಾನು ಅರ್ಪಿಸಿಕೊಳ್ಳದ ಈ ಇಡೀ ಮಾನವ ಕುಲದ ಚಿತ್ರವು ತುಂಬಾ ಸ್ಪಷ್ಟವಾಗಿದೆ, – ಇದು ಪಡೆಯಲು ಬಯಸುತ್ತದೆ! ಅದು ಹಾಗೆ ಮಾಡುವುದಿಲ್ಲ. ಅದು ತನ್ನಿಂದ ತಾನೇ ದೂರವಾಗಬೇಕು. ಆಗ ಆ ಸಂಗತಿಯು ಬಂದು ಅದರ ಸ್ಥಾನವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

ಸಂಪೂರ್ಣ ರಹಸ್ಯವು ಅಲ್ಲಿದೆ.

ಉದಾಹರಣೆಗೆ, ಬಲವಂತದಿಂದ ಈ ಎಲ್ಲ ಬದಿಯ ಸಂಗತಿಗಳನ್ನು ತೆಗೆದುಕೊಳ್ಳಲು ಬಯಸುವ ಮತ್ತು ಅವುಗಳನ್ನು ಅಲ್ಲಿಗೆ ಮೇಲೆಳೆಯುವ ಮಾನವೀಯತೆಯು (ಹಣೆಯಷ್ಟು ಎತ್ತರವನ್ನು ಸೂಚಿಸುವ ಸನ್ನೆ) ... ಆಸಕ್ತಿದಾಯಕವಾಗಿದೆ: ಇದು ಆಸಕ್ತಿದಾಯಕವಾಗಿದೆ, ಆದರೆ ಇದು ಅದಲ್ಲ! ಇದು ಅದಲ್ಲ; ಈ ಎಲ್ಲಾ ಸಾಧ್ಯತೆಗಳು ಮುಗಿದುಹೋಗಬೇಕು, ಇದರಿಂದ ಅದು ಮಾತ್ರ ಅಲ್ಲಿದೆ ಎನ್ನುವುದನ್ನು ಮಾನವತೆಯಲ್ಲಿಯ ಏನೋ ಒಂದು ಭಾಗ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ... (ಶ್ರೀಮಾತೆಯವರು ತಮ್ಮ ಕೈಗಳನ್ನು ಸ್ವಯಂ–ನಿರ್ನಾನಮದ ಸನ್ನೆಯಲ್ಲಿ ತೆರೆಯುತ್ತಾರೆ), ಮತ್ತು ನಂತರ ತಾವು ಕಣ್ಮರೆಯಾಗುವವರೆಗೂ ತನ್ನನ್ನು ತಾನು ಸಾಷ್ಟಾಂಗವಾಗಿ ಮಲಗಲು ಬಿಡುವುದು.

ವಾಸ್ತವವಾಗಿ, ಕಣ್ಮರೆಯಾಗುವುದನ್ನು ಕಲಿಯುವುದು ಅತ್ಯಂತ ಕಷ್ಟಕರವಾದ ವಿಷಯವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/215–16**

(ಸೂಚನೆ: ಮೇಲೆ ಬಳಸಲಾದ ಶಬ್ದ "ಅದು, ಅದರ, ಇದು" ಎನ್ನುವುದು "ಅಹಂ" ಎನ್ನುವುದನ್ನು ಸೂಚಿಸುತ್ತದೆ.)

*

*ಪ್ರ: ಶ್ರೀಮಾತೆಯವರೆ, ನಾವೊಂದು ಪ್ರಯತ್ನವನ್ನು ಮಾಡಿದಾಗ, ಅದರಿಂದ (ಈ ಪ್ರಯತ್ನದಿಂದ) ನಮ್ಮಲ್ಲಿಯ ಏನೋ ಒಂದು ತನ್ನಷ್ಟಕ್ಕೆ ತಾನು*

*ತೃಪ್ತವಾಗುತ್ತದೆ, ಜಂಬಪಡುತ್ತದೆ ಮತ್ತು ಸಂತೃಪ್ತವಾಗುತ್ತದೆ, ಅದು ಎಲ್ಲವನ್ನೂ ಹಾಳುಮಾಡುತ್ತದೆ. ಹಾಗಾದರೆ ನಾವು ಇದರಿಂದ ಮುಕ್ತಿಯನ್ನು ಹೊಂದುವುದು ಯಾವಾಗ?*

ಆಹ್, ಅದು ಏನು ಮಾಡುತ್ತಿದೆ ಎಂದು ನೋಡುತ್ತದೆ! ನಾವು ಏನನ್ನಾದರೂ ಮಾಡುವಾಗ ಗಮನಿಸುವವರು ಯಾವಾಗಲೂ ಇರುತ್ತಾರೆ. ಕೆಲವೊಮ್ಮೆ, ಅವನು ಹೆಮ್ಮೆಪಡುತ್ತಾನೆ. ನಿಸ್ಸಂಶಯವಾಗಿ, ಇದು ಪ್ರಯತ್ನದಿಂದ ಹೆಚ್ಚಿನ ಶಕ್ತಿಯನ್ನು ಸೆಳೆದುಕೊಳ್ಳುತ್ತದೆ. ನನ್ನ ಪ್ರಕಾರ, ಇದು ಅದಾಗಿದೆ: ಇದು ತನ್ನನ್ನು ತಾನು ಕೆಲಸದ ಕಡೆಗೆ ನೋಡುವ, ತನ್ನನ್ನು ತಾನು ಬದುಕುವ ಕಡೆಗೆ ನೋಡುವ ಅಭ್ಯಾಸವಾಗಿದೆ. ನಮ್ಮನ್ನು ನಾವು ಗಮನಿಸುವುದು ಅವಶ್ಯಕ, ಆದರೆ ಅದಕ್ಕಿಂತ ಹೆಚ್ಚು ಅವಶ್ಯವಾಗಿ ಬೇಕಾಗಿದ್ದು ಸಂಪೂರ್ಣವಾಗಿ ಪ್ರಾಮಾಣಿಕನಾಗಿರುವುದು ಹಾಗೂ ಸಹಜವಾಗಿರುವುದು, ನಾವೇನು ಮಾಡುತ್ತಿದ್ದೇವೊ ಅದನ್ನು ಸಹಜವಾಗಿ ಮಾಡುವುದು: ನಮ್ಮನ್ನು ನಾವು ಯಾವಾಗೂ ಗಮನಿಸುತ್ತ, ನಾವೇನು ಮಾಡುತ್ತಿದ್ದೇವೆ ಎನ್ನುವುದರ ಕಡೆಗೆ ನೋಡುತ್ತ, ನಮ್ಮನ್ನು ನಾವು ಮೌಲ್ಯಮಾಪನ ಮಾಡಿಕೊಳ್ಳುತ್ತ ಇರಬಾರದು – ಕೆಲವೊಮ್ಮೆ ತೀವ್ರವಾಗಿ. ಇದು ತೃಪ್ತಿಯಿಂದ ನಮ್ಮ ಬೆನ್ನನ್ನು ನಾವೇ ತಟ್ಟಿಕೊಂಡಂತೆ, ಎರಡೂ ಸಂಗತಿಗಳು ಅಷ್ಟೇ ಅಪಾಯಕಾರಿ. ನಾವು ನಮ್ಮ ಹಂಬಲದಲ್ಲಿ ಎಷ್ಟು ಪ್ರಾಮಾಣಿಕರಾಗಿರಬೇಕೆಂದರೆ, ನಾವು ಹಂಬಲಿಸುತ್ತಿದ್ದೇವೆ, ತಾನು ಹಂಬಲವೇ ಆಗುತ್ತೇನೆ ಎನ್ನುವುದೂ ಸಹ ತಿಳಿಯಬಾರದು. ಇದನ್ನು ನಿಜವಾಗಿಯೂ ಅರಿತುಕೊಂಡಾಗ, ನಾವು ನಿಜವಾಗಿಯೂ ಅಸಾಧಾರಣ ಶಕ್ತಿಯನ್ನು ಪಡೆಯಬಹುದು.

ಒಂದು ನಿಮಿಷ, ಇದರ ಒಂದು ನಿಮಿಷ, ಮತ್ತು ನೀವು ವರ್ಷಗಳ ಸಾಕ್ಷಾತ್ಕಾರವನ್ನು ಸಿದ್ಧಪಡಿಸಬಹುದು. ನಾವು ಇನ್ನು ಮುಂದೆ ಸ್ವ–ಗೌರವವಿಲ್ಲದ ಜೀವಿಯಾದಾಗ, ತನ್ನನ್ನು ತಾನು ನೋಡುತ್ತಿರುವ ಅಹಂಕಾರವು ಕಾರ್ಯನಿರ್ವಹಿಸುತ್ತಿದ್ದಾಗ, ನಾವು ಸ್ವತಃ ಒಂದು ಕ್ರಿಯೆಯಾದಾಗ, ಎಲ್ಲಕ್ಕಿಂತ ಹೆಚ್ಚಾಗಿ ಹಂಬಲದಲ್ಲಿ, ಇದು ನಿಜವಾಗಿಯೂ ಒಳ್ಳೆಯದಾಗಿದೆ. ಹಂಬಲಿಸುವ ವ್ಯಕ್ತಿ ಇನ್ನು ಮುಂದೆ ಇಲ್ಲದಿದ್ದಾಗ, ಅದು ಸಂಪೂರ್ಣ ಕೇಂದ್ರೀಕೃತ ಪ್ರಚೋದನೆಯೊಂದಿಗೆ ಚಿಮ್ಮುವ ಆಕಾಂಕ್ಷೆಯಾಗಿದ್ದಾಗ, ಅದು ನಿಜವಾಗಿಯೂ ಬಹಳ ದೂರ ಹೋಗುತ್ತದೆ. ಇಲ್ಲದಿದ್ದರೆ ಅದರಲ್ಲಿ ಯಾವಾಗಲೂ ಸ್ವಲ್ಪ

ಒಣಹೆಮ್ಮೆ, ಸ್ವಲ್ಪ ಆತ್ಮತೃಪ್ತಿ, ಸ್ವಲ್ಪ ಸ್ವಾನುಕಂಪ, ಎಲ್ಲ ರೀತಿಯ ಸಣ್ಣ ಸಂಗತಿಗಳು ಬರುತ್ತವೆ ಮತ್ತು ಎಲ್ಲವನ್ನೂ ಹಾಳುಮಾಡುತ್ತವೆ. ಆದರೆ ಇದು ಕಷ್ಟ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/402**

*

*ನಾವು ಅಸ್ತಿತ್ವದಲ್ಲಿಲ್ಲ, ದೇವರ ಅಸ್ತಿತ್ವವಿದೆ ಎಂದು ನಾವು ಭಾವಿಸಲು ಪ್ರಯತ್ನಿಸಿದರೆ, ಅದು ಅಹಂಕಾರದಿಂದ ಮುಕ್ತಿಹೊಂದುವ ಮಾರ್ಗವೆ?*

ನಾವು ಅಸ್ತಿತ್ವದಲ್ಲಿಲ್ಲ? ಯಾವುದರಲ್ಲಾದರು ನಾವು ಮಾನಸಿಕವಾಗಿ ಪ್ರಯತ್ನಿಸಿ ಯಶಸ್ವಿಯಾದರೆ... ನನಗೆ ಗೊತ್ತಿಲ್ಲ, ಯಾಕೆಂದರೆ ಇದೊಂದು ರೀತಿಯ ಮನಸ್ಸಿನ ಪ್ರಯತ್ನ. ಆದ್ದರಿಂದ ನಾವು ಮಾನಸಿಕ ರಚನೆಗಳನ್ನು ಮಾಡುತ್ತೇವೆ ಮತ್ತು ಏನನ್ನೂ ಸಾಧಿಸುವುದಿಲ್ಲ. ಇಲ್ಲಿ, ಅವಶ್ಯವಾಗಿ ಬೇಕಾಗಿದ್ದು ಸಹಜವಾದ, ತೀವ್ರವಾದ, ನಮ್ಮಲ್ಲಿ ಉರಿಯುವ ಒಂದು ಜ್ವಾಲೆ, ಹಂಬಲದ ಒಂದು ಜ್ವಾಲೆ... ಏನೋ ಒಂದು, ಅದನ್ನು ಹೇಗೆ ಹೇಳಬೇಕೆಂದು ನನಗೆ ತಿಳಿಯುತ್ತಿಲ್ಲ.

ಈ ರೀತಿ ವಿಷಯಗಳು ತಲೆಗೆ ಹೋಗುತ್ತಿದ್ದರೆ, ಏನೂ, ಏನೇನೂ ಸಂಭವಿಸಲಾರದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/138 – ಶ್ರೀಮಾತೆ**

## ಅಹಂಕಾರರಹಿತ ಸ್ಥಿತಿ

*ಜನರು ಆಗಾಗ್ಗೆ ತಮ್ಮ ನಿಷ್ಪ್ರಯೋಜಕ ಪ್ರಶ್ನೆಗಳಿಗಾಗಿ ಶ್ರೀಮಾತೆಯವರ ಸಮಯವನ್ನು ತೆಗೆದುಕೊಳ್ಳುತ್ತಾರೆ ಮತ್ತು ಅವರು ಹೆಚ್ಚು ಮುಖ್ಯವಾದ ಕೆಲಸದ ಕಡೆಗೆ ಗಮನ ಕೊಡಲು ಅತಿ ಕಡಿಮೆ ಸಮಯ ಉಳಿಯುತ್ತದೆ ಎಂದು ಒಬ್ಬ ಶಿಷ್ಯ ದೂರಿದನು: ಅದಕ್ಕೆ ಶ್ರೀಮಾತೆಯವರು ಹೀಗೆ ಹೇಳಿದರು.*

ಅದು ಹಾಗೆ ಇದ್ದುದರಿಂದ, ಅದು ಹಾಗೆ ಇರಬೇಕು.

ಬಹುಶಃ ಅದೊಂದು ಪಾಠವಾಗಿದೆ (ಅದೊಂದು ಸೂಚನೆಯಾಗಿದೆ), ಆದರೆ ಅದಕ್ಕೊಂದು ಉದ್ದೇಶವಿದೆ. ನಾನು ತಿಳಿದುಕೊಳ್ಳಬೇಕಾದ ಪಾಠವನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ನಾನು ತಾಳ್ಮೆಯಿಂದಿರಲು ಕಲಿಯುತ್ತಿದ್ದೇನೆ,

ಓಹ್! ಎಂತಹ ತಾಳ್ಮೆ... ಅಲ್ಲಿ ಯಾವಾಗಲೂ ಪ್ರತಿಭಟನೆಗಳಿವೆ, ಅವಮಾನಗಳಿವೆ, ಅವೆಲ್ಲವೂ ಇವೆ. ನನಗೆ ಅದೆಲ್ಲವೂ ಶೂನ್ಯವಾಗಿದೆ ಮತ್ತು ಕೆಲವೊಮ್ಮೆ ಮೋಜಿನದಾಗಿದೆ. ನಾನು ನನ್ನ ನಿಜವಾದ ಅನುಕಂಪದ ಸ್ಥಿತಿಯಲ್ಲಿದ್ದಾಗ, ಅದು ಏನನ್ನೂ ಬದಲಾವಣೆ ಮಾಡುವುದಿಲ್ಲ, ಅದು ಮೇಲ್ಮೈಯಲ್ಲಿ ಕಿರುತೆರೆಗಳನ್ನೂ ಸಹ, ಏನನ್ನೂ ಎಬ್ಬಿಸುವುದಿಲ್ಲ.

ನಿನ್ನೆ ನನಗೆ ಪ್ರಶ್ನೆಯೊಂದನ್ನು ಹಾಕಲಾಯಿತು; ಅವಮಾನ, ಅವಮಾನಕ್ಕೊಳಗಾದ ಅನುಭವ, ಇಂಗ್ಲೀಷನಲ್ಲಿ ಕರೆಯುವ “ಆತ್ಮ ಗೌರವ” (ಫ್ರೆಂಚ್‌ನಲ್ಲಿ “amour-propre” ಶಬ್ದವನ್ನು ಹೋಲುವ) ಎನ್ನುವುದಕ್ಕೆ ಸಾಧನೆಯಲ್ಲಿ ಏನಾದರು ಸ್ಥಾನವಿದೆಯೆ ಎಂದು ನನ್ನನ್ನು ಕೇಳಲಾಯಿತು. ಖಂಡಿತವಾಗಿಯೂ, ಅದರಲ್ಲಿ ಅದಕ್ಕೆ ಸ್ಥಾನವಿಲ್ಲ, ಅದನ್ನು ಚೆನ್ನಾಗಿ ತಿಳಿದುಕೊಳ್ಳಲಾಗಿದೆ! ಆದರೆ ನಾನು ಕ್ರಿಯೆಯನ್ನು ನೋಡಿದ್ದೇನೆ, ಅದು ತುಂಬಾ ಸ್ಪಷ್ಟವಾಗಿತ್ತು, ಅಹಂಕಾರವು ಇಲ್ಲದಾಗ ನಾನು ಅದನ್ನು ನೋಡಿದ್ದೇನೆ, ಅಹಂಕಾರವಿಲ್ಲದಿದ್ದಾಗ ಪುರುಷನಲ್ಲಿ ಯಾವುದೇ ರೀತಿಯ ಕಳವಳ ಇರುವುದಿಲ್ಲ. ಯಾಕೆಂದರೆ ನಾನು ಭೂತ ಕಾಲದಲ್ಲಿ ಅದನ್ನು ಇನ್ನೂ ಅನುಭವಿಸುತ್ತಿದ್ದ ಕಾಲಕ್ಕೆ (ಬಹಳ ವರ್ಷಗಳ ಹಿಂದೆ) ಮರಳಿ ಹಿಂದೆ ಹೋದೆ, ಆದರೆ ಈಗ, ಅದು ಪರಕೀಯ ಸಹ ಅಲ್ಲ, ಅದು ಅಸಾಧ್ಯವಾದ ಸಂಗತಿ. ಪೂರ್ಣ ಪುರುಷ, ಮತ್ತು ಭೌತಿಕ ರಚನೆಯೂ ಸಹ (ಇದು ಆಶ್ಚರ್ಯವಾಗಿದೆ) ಅದು ಏನು ಎನ್ನುವುದನ್ನು ಅರ್ಥಮಾಡಿಕೊಂಡಿಲ್ಲ. ಅದು ಭೌತಿಕವಾಗಿ ಆಘಾತವಿದ್ದಾಗಿನ ಸಂಗತಿಯಂತಿರುತ್ತದೆ (ಶ್ರೀಮಾತೆಯವರು ತಮ್ಮ ಮೊಣಕೈ ಮೇಲೆ ಇದ್ದ ಗೀಚನ್ನು ತೋರಿಸುತ್ತಾರೆ) ಅದರಂತೆ ಉದಾಹರಣೆಗಾಗಿ; ಇನ್ನು ಮುಂದೆ ಅದು ನಾವು ಒಂದು ಗಾಯವನ್ನು ಅನುಭವಿಸಿದ ಅನುಭವದಂತೆ ಅಲ್ಲ, ಅದನ್ನು ಇನ್ನು ಮುಂದೆ ಆ ರೀತಿ ಭಾವಿಸಲಾಗುವುದಿಲ್ಲ. ಬಹಳಷ್ಟು ಸಲ ಅಲ್ಲಿ ಏನೂ ಇರುವುದಿಲ್ಲ, ಘನದಲ್ಲಿ ಅದು ಸಂಪೂರ್ಣವಾಗಿ ಗ್ರಹಿಸದ ರೀತಿಯಲ್ಲಿ ಮುಂದೆ ಹೋಗಿಬಿಡುತ್ತದೆ; ಆದರೆ ಏನೋ ಒಂದನ್ನು ಅನುಭವಿಸಿದಾಗ, ಅದು ಅನಿಸಿಕೆ ಮಾತ್ರವಾಗಿದೆ – ತನ್ನನ್ನು ತಾನು ಅನುಭವಿಸಲು, ಒಂದು ಪಾಠವನ್ನು ಕಲಿಯಲು ಬಯಸುವ ಸಹಾಯದ ತುಂಬಾ ಸೌಮ್ಯವಾದ, ತುಂಬಾ ಆತ್ಮೀಯ ಅನಿಸಿಕೆಯಾಗಿದೆ. ಆದರೆ ಮಾನಸಿಕ ರೀತಿಯಲ್ಲಿ ಮಾಡುವಂತೆ ಅಲ್ಲ, ಇದರಲ್ಲಿ ಯಾವಾಗಲೂ ಒಂದು ಗಟ್ಟಿಯಾಗುವಿಕೆ ಇರುತ್ತದೆ; ಆದರೆ ನಾವು, ಯಾವಾಗಲೂ ಬಿಗಿತವಿರುವ ಮಾನಸಿಕ ರೀತಿಯಲ್ಲಿ

ಮಾಡುವಂತೆ ಅಲ್ಲ; ಇದು ಅದಲ್ಲ, ಇದು ತಕ್ಷಣವೇ ಕಲಿಯಬೇಕೆಂದು ತನ್ನನ್ನು ತಾನು ಕೊಡಮಾಡುವ ಪುರುಷನ ಒಂದು ರೀತಿಯ ಅರ್ಪಣೆಯಾಗಿದೆ. ನಾನು ಕೋಶಗಳ ಬಗ್ಗೆ ಮಾತನಾಡುತ್ತಿದ್ದೇನೆ. ಅದು ತುಂಬಾ ಸ್ವಾರಸ್ಯಕರವಾಗಿದೆ. ಸ್ಪಷ್ಟವಾಗಿ ನೀವು ಮನಸ್ಸಿಗೆ ತಂದುಕೊಂಡರೆ, ಅದು ಎಲ್ಲ ವಸ್ತುಗಳಲ್ಲಿ ದೈವೀ ಉಪಸ್ಥಿತಿಯ ಮತ್ತು (ನೀವಿರುವ ಸ್ಥಿತಿಯಿಂದ ಉದ್ಭವಿಸಿದ) ಸಂಪರ್ಕ ವಿಧಾನದ ಅನುಭವ ಅಥವಾ ಪ್ರಜ್ಞೆ ಎಂದು ನೀವು ಹೇಳಲೇಬೇಕು.

ಹೌದು, ಅದು ದೇಹದ ಅನುಭವ.

ವ್ಯಕ್ತಿಗಳಲ್ಲಿ, ಯಾವುದೇ ಹೊಡೆತ ಅಥವಾ ಆಘಾತ ಉಂಟಾದಾಗ, ಯಾವಾಗಲೂ ಅಹಂಕಾರದ ಸ್ಪಷ್ಟ ನೋಟದ ಗ್ರಹಿಕೆ ಮಾತ್ರ ಆಗಿರುತ್ತದೆ – ಅಹಂ ಸ್ವತಃ ಅಭಿವ್ಯಕ್ತಗೊಳ್ಳುತ್ತದೆ. ಅವರು ಹೇಳುತ್ತಾರೆ, "ಇದು ಭಿನ್ನವಾದದ್ದು." "ಓಹ್! ಅದು ಸಿಟ್ಟಾಗಿತ್ತು" ಅಥವಾ "ಓಹ್! ಇದು...." ಇಲ್ಲ, ಅದು ಅವರ ಅಹಂಕಾರವಾಗಿದೆ; ಅವನ ಅಹಂಕಾರವೂ ಸಹ ಅಲ್ಲ: ಅಹಂಕಾರ, ಅಹಂಕಾರ ತತ್ವ – ಈಗಲೂ ಮಧ್ಯ ಪ್ರವೇಶಿಸುವ ಅಹಂಕಾರ ತತ್ವ. ಅದು ಅತ್ಯಂತ ಸ್ವಾರಸ್ಯಕರವಾಗಿದೆ, ಯಾಕೆಂದರೆ ನನಗೆ ಅಹಂಕಾರವು ಒಂದು ರೀತಿಯ ನಿರಾಕಾರ ಅಸ್ತಿತ್ವವಾಗಿದೆ, ಆದರೆ ಬೇರೆಯವರೆಲ್ಲರಿಗೂ ಅದು ಅವರ ವ್ಯಕ್ತಿತ್ವದ ತೀವ್ರವಾದ ಸಂವೇದನೆಯಾಗಿದೆ! ಅದಕ್ಕೆ ಬದಲಾಗಿ, ಇದು ಒಂದು ರೀತಿಯ ಅಸ್ತಿತ್ವದ ವಿಧಾನವಾಗಿದೆ (ಭೂಮಿಯ ಅಥವಾ ಮಾನವನ, ಎಂದು ಹೇಳಬಹುದು), ಇದು ಇಲ್ಲಿ ಅಥವಾ ಅಲ್ಲಿ ಹೆಚ್ಚಿನ ಅಥವಾ ಕಡಿಮೆ ಪ್ರಮಾಣದಲ್ಲಿದ್ದು, ಪ್ರತಿಯೊಬ್ಬರಿಗೂ ವ್ಯಕ್ತಿತ್ವದ ಭ್ರಮೆಯನ್ನು ನೀಡುತ್ತದೆ. ಅದು ಅತ್ಯಂತ ಸ್ವಾರಸ್ಯಕರವಾಗಿದೆ.

*ಪ್ರ: ಹೌದು, ಆದರೆ ತೊಂದರೆ ಇರುವುದೇನೆಂದರೆ ಇತರರು ತಮ್ಮ ಪಾಠವನ್ನು ಕಲಿಯುವುದಿಲ್ಲ, ಆದ್ದರಿಂದ....*

ಓಹ್! ಅವರು ತಮ್ಮ ಪಾಠವನ್ನು ಕಲಿತರೆ ಎಲ್ಲವೂ ಬೇಗನೆ ಬದಲಾಗಿ ಬಿಡುತ್ತದೆ.

*ಪ್ರ: ಇದರ ಫಲಿತಾಂಶವೇನೆಂದರೆ, ನೀವು ಆಕ್ರಮಣಕ್ಕೊಳಗಾಗಿದ್ದೀರಿ, ನೀವು ಸುತ್ತುವರೆಯಲ್ಪಟ್ಟಿದ್ದೀರಿ.*

ಆಗದು!

*ಪ್ರ: ನಿಮ್ಮೆಲ್ಲ ಸಮಯವನ್ನು ತೆಗೆದುಕೊಳ್ಳಲಾಗಿದೆ, ನಿಮ್ಮೆಲ್ಲ....*

ಅವರು ನನ್ನನ್ನು ಸುತ್ತುವರೆಯಲು ಸಾಧ್ಯವಿಲ್ಲ! (ಶ್ರೀಮಾತೆಯವರು ನಗುತ್ತಾರೆ) ನಾನು ತುಂಬಾ ದೊಡ್ಡವಳಾಗಿದ್ದೇನೆ!

*ಪ್ರ: ಪ್ರಾಪಂಚಿಕವಾಗಿ, ಎಲ್ಲವೂ ಒಂದೇ, ನೀವು ಮುಳುಗಿಸಲ್ಪಟ್ಟಿದ್ದೀರಿ.*

ನಾನು ಅಡ್ಡಿಪಡಿಸಿದರೆ, ಅದು ಕೆಟ್ಟದಾಗಿ ಬಿಡುತ್ತದೆ ಎನ್ನುವುದನ್ನು ನಾನು ಗಮನಿಸಿದ್ದೇನೆ. ನಾನು ಅನಿಶ್ಚಿತತೆಯ ಸ್ವಭಾವದ ಭಾವನೆಯನ್ನು ಹೊಂದಿದ್ದರೆ, ಹೊಡೆತಗಳಿರುವುದಿಲ್ಲ. ಇದು ಈ ಗೀರಿನಂತೆಯೇ ಇರುತ್ತದೆ (ಶ್ರೀಮಾತೆಯವರು ತಮ್ಮ ಮೊಣಕೈಯನ್ನು ತೋರಿಸುತ್ತಾರೆ). ಒಂದು ವೇಳೆ ನೀವು ಬಿಗಿಗೊಳಿಸಿದರೆ ಮತ್ತು ಸಂಗತಿಗಳು ಪ್ರತಿಭಟಿಸಿದರೆ, ನೀವು ಹೊಡೆತವನ್ನು ಅನುಭವಿಸುವಿರಿ. ಇದು, ಹೇಗೆ ಬೀಳಬೇಕೆಂದು ಗೊತ್ತಿರುವ ಮನುಷ್ಯರಂತೆ: ಅವರು ಬೀಳುತ್ತಾರೆ, ಅವರು ಏನನ್ನೂ ಹಾಳು ಮಾಡುವುದಿಲ್ಲ; ಆದರೆ ಹೇಗೆ ಬೀಳಬೇಕೆಂದು ಗೊತ್ತಿಲ್ಲದ ಮನುಷ್ಯರು, ಕೊಂಚ ಬೀಳುತ್ತಾರೆ ಮತ್ತು ಏನನ್ನಾದರೂ ಹಾಳು ಮಾಡಿಬಿಡುತ್ತಾರೆ. ಇದು ಒಂದೇ ಸಂಗತಿಯಾಗಿದೆ. ಹೇಗೆ ಇರಬೇಕೆಂದು ಕಲಿಯಬೇಕು... ಪರಿಪೂರ್ಣ ಏಕತೆಯ ಹಾಗೆ. ಸರಿಪಡಿಸುವುದು, ನೇರಗೊಳಿಸುವುದು ಸಹ ಪ್ರತಿರೋಧ. ಹಾಗಾದರೆ ನೀವು ಹೇಳಿದಂತೆ ಆಕ್ರಮಣವು ಮುಂದುವರಿದರೆ ಏನಾಗುತ್ತದೆ? ಇದು ತಮಾಷೆಯಾಗಿರುತ್ತದೆ, ನೋಡೋಣ! (ಶ್ರೀಮಾತೆಯವರು ನಗುತ್ತಾರೆ.) ಇತರರು ಅದೇ ಸ್ಥಿತಿಯಲ್ಲಿಲ್ಲದ ಕಾರಣ, ಬಹುಶಃ ಅವರು ಅಸಮಾಧಾನಗೊಳ್ಳ–ಬಹುದು, ಆದರೆ ನಾನು ಅಸಹಾಯಕಿ! (ಶ್ರೀಮಾತೆಯವರು ನಗುತ್ತಾರೆ.) ನಾವು ಯಾವಾಗಲೂ ನಗಬೇಕು, ಯಾವಾಗಲೂ. ಭಗವಂತನು ನಗುತ್ತಾನೆ, ಮತ್ತು ಅವನ ನಗು ತುಂಬಾ ಸುಂದರವಾಗಿದೆ, ಪ್ರೀತಿಯಿಂದ ತುಂಬಿದೆ. ಇದು ಅಸಾಧಾರಣ ಮಾಧುರ್ಯದಿಂದ ನಿಮ್ಮನ್ನು ಆವರಿಸುವ ನಗು. ಇದನ್ನೂ ಸಹ ಮನುಷ್ಯರು ಅಂದಗೆಡಿಸಿದ್ದಾರೆ – ಅವರು ಎಲ್ಲವನ್ನೂ ಅಂದಗೆಡಿಸಿದ್ದಾರೆ (ಶ್ರೀಮಾತೆಯವರು ನಗುತ್ತಾರೆ).

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/54–56 – ಶ್ರೀಮಾತೆ**

---

ನೀವು ಅದನ್ನು ಕೆಲಸ ಮಾಡಲು ಬಿಟ್ಟರೆ, ಎಲ್ಲೆಡೆಯೂ ಒಂದು ಪ್ರಜ್ಞೆ ಇರುವುದು ಮತ್ತು ಎಲ್ಲವೂ ಒಳ್ಳೆಯದಾಗಲು ಎಲ್ಲವನ್ನೂ ಮಾಡುವಂಥ ಅನುಗ್ರಹವಿದೆ, ಮತ್ತು

ಈ ಮೂರ್ಖತನದ ಕಾರ್ಯದಿಂದ ಎಲ್ಲವೂ ತಪ್ಪಾಗುತ್ತದೆ – ಇದು ವಿಚಿತ್ರವಾಗಿದೆ! ಅಹಂ ಕೇಂದ್ರಿತ ಮೂರ್ಖತನ...

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/207 – ಶ್ರೀಮಾತೆ**

## ಆಧ್ಯಾತ್ಮಿಕ ಶ್ರದ್ಧೆ

ಈ ವಿಧಾನವು ದೇವರಲ್ಲಿ, ತಮ್ಮ ದೇವರಲ್ಲಿ ನಂಬಿಕೆ ಇರುವವರಿಗಾಗಿ ಮತ್ತು ತಮ್ಮನ್ನು ತಾವು ಸಂಪೂರ್ಣವಾಗಿ ದೇವರಿಗೆ ಸಮರ್ಪಿಸಿಕೊಂಡವರಿಗಾಗಿ. ಅವರು ದೇವರಿಗೆ ಸಮಗ್ರವಾಗಿ ಸೇರಿದವರಾಗಿರುತ್ತಾರೆ; ಅವರ ಜೀವನದ ಘಟನೆಗಳೆಲ್ಲ ದೈವೇಚ್ಛೆಯ ಅಭಿವ್ಯಕ್ತಿಯಾಗಿವೆ ಮತ್ತು ಅವರು ಅವುಗಳನ್ನು ಬರೀ ಶಾಂತ ಶರಣಾಗತಿಯಿಂದ ಮಾತ್ರವಲ್ಲದೆ ಕೃತಜ್ಞತೆಯಿಂದಲೂ ಸ್ವೀಕರಿಸುತ್ತಾರೆ, ಯಾಕೆಂದರೆ ಸಂಭವಿಸುವುದೆಲ್ಲವೂ ಅವರ ಒಳ್ಳೆಯದಕ್ಕೆ ಸಂಭವಿಸುತ್ತದೆ ಎನ್ನುವುದು ಅವರಿಗೆ ಮನದಟ್ಟಾಗಿರುತ್ತದೆ. ಅವರು ತಮ್ಮ ದೇವರಲ್ಲಿ ಮತ್ತು ಅವನೊಂದಿಗಿನ ವ್ಯಕ್ತಿಗತ ಸಂಬಂಧದಲ್ಲಿ ಆಧ್ಯಾತ್ಮಿಕ ಶ್ರದ್ಧೆಯನ್ನು ಹೊಂದಿರುತ್ತಾರೆ. ಅವರು ತಮ್ಮ ಇಚ್ಛೆಯ ಸಂಪೂರ್ಣ ಶರಣಾಗತಿಯನ್ನು ಆತನ ಇಚ್ಛೆಗೆ ಮಾಡಿದ್ದಾರೆ ಮತ್ತು ಆತನ ಬದಲಾಗದ ಪ್ರೀತಿ ಮತ್ತು ರಕ್ಷಣೆಯನ್ನು ಅನುಭವಿಸುತ್ತಾರೆ, ಜೀವನ ಮತ್ತು ಸಾವಿನ ಅಪಘಾತಗಳಿಂದ ಸಂಪೂರ್ಣವಾಗಿ ಸ್ವತಂತ್ರರಾಗಿದ್ದಾರೆ. ಅವರು ಸಂಪೂರ್ಣ ಸ್ವಯಂ ಶರಣಾಗತಿಯಲ್ಲಿ ತಮ್ಮ ಪ್ರಿಯವಾದ ಪಾದಗಳ ಮೇಲೆ ಮಲಗಿರುವ ಅಥವಾ ಅವನ ತೋಳ ತೊಟ್ಟಿಲಿನಲ್ಲಿ ತೂಗಲ್ಪಡುವ ಮತ್ತು ಪರಿಪೂರ್ಣ ಭದ್ರತೆಯನ್ನು ಆನಂದಿಸುವ ನಿರಂತರ ಅನುಭವವನ್ನು ಹೊಂದಿದ್ದಾರೆ. ಇನ್ನು ಮುಂದೆ ಅವರ ಪ್ರಜ್ಞೆಯಲ್ಲಿ ಭಯಕ್ಕೆ, ಆತಂಕಕ್ಕೆ ಅಥವಾ ಹಿಂಸೆಗೆ ಯಾವುದೇ ಸ್ಥಾನವಿಲ್ಲ; ಅದೆಲ್ಲವನ್ನೂ ಶಾಂತ ಮತ್ತು ಸಂತೋಷಕರ ಆನಂದದಿಂದ ಬದಲಾಯಿಸಲಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/84 – ಶ್ರೀಮಾತೆ**

## ನಿಜವಾದ ಸಾಕ್ಷಾತ್ಕಾರ

*(ಶ್ರೀಮಾತೆಯವರ ಪ್ರಾರ್ಥನೆಗಳು ಮತ್ತು ಧ್ಯಾನಗಳು, ಜುಲೈ 17, 1914)*

ಐಹಿಕ ಸಾಕ್ಷಾತ್ಕಾರಗಳು ನಮ್ಮ ದೃಷ್ಟಿಯಲ್ಲಿ ಸುಲಭವಾಗಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ, ಏಕೆಂದರೆ ಅವು ನಮ್ಮ ಬಾಹ್ಯ ಅಸ್ತಿತ್ವಕ್ಕೆ ಅನುಗುಣವಾಗಿರುತ್ತವೆ

ಮತ್ತು ಈ ಸೀಮಿತ ರೂಪವು ನಮ್ಮನ್ನು ಮನುಷ್ಯರನ್ನಾಗಿ ಮಾಡುತ್ತದೆ. ಆದರೆ ನಿನ್ನ ಜೊತೆಗಿನ, ನಿನ್ನ ಮುಂಚಿನ ಐಹಿಕ ಸಾಕ್ಷಾತ್ಕಾರವೇನು? ಅದು ಎಷ್ಟೇ ಪರಿಪೂರ್ಣ, ಸಂಪೂರ್ಣ, ದೈವಿಕವಾಗಿದ್ದರೂ, ಅದು ನಿನ್ನ ನಿತ್ಯತೆಯಲ್ಲಿ ಒಂದು ಅಗ್ರಾಹ್ಯ ಕ್ಷಣವಲ್ಲ; ಮತ್ತು ಅದರಿಂದ ಪಡೆದ ಫಲಿತಾಂಶಗಳು ಎಷ್ಟೇ ಶಕ್ತಿಯುತ ಮತ್ತು ಅದ್ಭುತವಾಗಿದ್ದರೂ, ಅವು ನಿನ್ನ ಕಡೆಗಿನ ಅನಂತ ನಡಿಗೆಯಲ್ಲಿ ಅಗೋಚರ ಪರಮಾಣುವಲ್ಲದೇ ಬೇರೇನೂ ಅಲ್ಲ. ಇದನ್ನು ನಿಮ್ಮ ಶ್ರಮಿಕರು ಎಂದಿಗೂ ಮರೆಯಬಾರದು, ಇಲ್ಲದಿದ್ದರೆ ಅವರು ನಿನ್ನ ಸೇವೆಗೆ ಅನರ್ಹರಾಗುತ್ತಾರೆ....

ಓ ನನ್ನ ಪ್ರೀತಿಯ ಗುರುವೇ, ಯಾವುದಕ್ಕೂ ತಾನೇ ಜವಾಬ್ದಾರನೆಂದು ಭಾವಿಸುವುದು ಮತ್ತು ನಿನ್ನ ಶ್ರೇಷ್ಠ ಮತ್ತು ದೈವೀ ಇಚ್ಛೆಯನ್ನು ಪ್ರತ್ಯೇಕಿಸಲು ಬಯಸುವುದು ಎಂತಹ ಬಾಲಿಶತನ! ನಿನ್ನ ಹೃದಯದೊಂದಿಗೆ ಒಂದಾಗುವುದು ಮತ್ತು ಅಲ್ಲಿ ಶಾಶ್ವತವಾಗಿ ವಾಸಿಸುವುದು ಸಾಕಾಗುವುದಿಲ್ಲ? ನಂತರ ನೀನು ಎಲ್ಲಾ ಜವಾಬ್ದಾರಿಗಳನ್ನು ಮತ್ತು ಅದನ್ನು ತಿಳಿದುಕೊಳುವುದನ್ನೂ ಸಹ ಬಯಸದೆಯೆ ನಿನ್ನ ಚಿತ್ತವು ಕೆಲಸ ಮಾಡುತ್ತದೆ.... ಎಲ್ಲಾ ಬಾಹ್ಯ ಸನ್ನಿವೇಶಗಳಿಂದ ಸ್ವತಂತ್ರವಾದ, ಎಲ್ಲಾ ಬಾಂಧವ್ಯದಿಂದ ಮತ್ತು ಎಲ್ಲಾ ತಿಳುವಳಿಕೆಯಿಂದ ಮುಕ್ತವಾದ ಒಂದು ಸಾಕ್ಷಾತ್ಕಾರವು ಮಾತ್ರ ನಿಜವಾದ ಸಾಕ್ಷಾತ್ಕಾರವಾಗಿದೆ, ಮೌಲ್ಯಯುತವಾದ ಸಾಕ್ಷಾತ್ಕಾರವಾಗಿದೆ. ಮತ್ತು ಅಂತಹ ಸಾಕ್ಷಾತ್ಕಾರವು ನಿನ್ನೊಂದಿಗೆ ಸಮಗ್ರವಾಗಿ, ನಿಕಟವಾಗಿ, ನಿರ್ಣಾಯಕವಾಗಿ ಒಂದಾಗುವುದಾಗಿದೆ. ಪಲಾಯನ ಮಾಡಿದ ಅಸ್ತಿತ್ವದಲ್ಲಿ ಮತ್ತು ಅಸ್ಥಿರ ಜಗತ್ತಿನಲ್ಲಿ ನಿಮ್ಮ ಅಸ್ಥಿರತೆಯ, ಕ್ಷಣಿಕ ಅಭಿವ್ಯಕ್ತಿಯ ಕಾಳಜಿಗೆ ಸಂಬಂಧಿಸಿದಂತೆ, ಅದಕ್ಕೆ ಜವಾಬ್ದಾರರಾಗಲೇಬೇಕಿರುವುದು ನೀವು ಮತ್ತು ಅದು ಅಸ್ತಿತ್ವದಲ್ಲಿರಲು ಅಗತ್ಯವಾದದ್ದನ್ನು ನೀವು ಮಾಡಲೇಬೇಕು, ಅದು ಒಳ್ಳೆಯದು ಎಂದು ನೀವು ಭಾವಿಸಿದರೆ.

ಓ ನನ್ನ ಪ್ರೀತಿಯ ಯಜಮಾನನೇ, ಸಾರ್ವಭೌಮನಾದ ಕರ್ತನೇ, ನೀನು ನನ್ನ ಎಲ್ಲಾ ಕಳವಳಗಳನ್ನು ತೆಗೆದು ಹಾಕಿರುವೆ ಮತ್ತು ದಿವ್ಯಾನಂದವನ್ನು, ನಿನ್ನಯ ದೈವೀ ಬಾಂಧವ್ಯದ ಶ್ರೇಷ್ಠ ಆನಂದವನ್ನು ಮಾತ್ರ ನನಗೆ ಬಿಟ್ಟಿರುವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/201** **– ಶ್ರೀಮಾತೆ**

## ಶ್ರೀ ಅರವಿಂದರ 'ಕರ್ಮಯೋಗಿನ್' ಪತ್ರಿಕೆಯ ಲೇಖನಗಳು

**– ಅನು: ಪುಟ್ಟು ಕುಲಕರ್ಣಿ**

## ಅರ್ಥರ್, ಎಲನ್ ಎವಿಲಾನ್‌ರ "ದೇವಿ ಸ್ತೋತ್ರಗಳು"

### 2

ಆದರೆ ಇದು, ಇಲ್ಲಿ ಪ್ರಚಲಿತದಲ್ಲಿರುವ ಸಂಪೂರ್ಣ ವಿಶ್ವಾಸದಿಂದಲೇ ಆಚರಣೆಯಲ್ಲಿರುವ ತತ್ತ್ವಾಧಾರಿತ ಸತ್ಯಕ್ಕೆ ದೂರವಾಗಿದ್ದು, ಜೊತೆಗೆ "ಪರಂಪರೆಯ ವಿಕೃತಿಯನ್ನು" ಹೊಂದಿದೆ. ಇಲ್ಲಿ ಲೇಖಕರು ಅನುವಾದಗೊಳಿಸಿರುವದೆಂದರೆ, "ಜಗತ್ತಿನ ಯಾವದೇ ಸ್ತ್ರೀಯನ್ನೂ ಸಹಿತ ಬಿಡದಂತೆ" ಎಂದಿದೆ. ಇಲ್ಲಿ ನಮಗೆಲ್ಲ ಅಚ್ಚರಿಯ ವಿಷಯವಾಗಿರುವದೇನೆಂದರೆ, ಈ ಸಾಲು ಹೃದಯಾಂತರಾಳಕ್ಕೆ ಪ್ರವೇಶ ಪಡೆಯಬಹುದಾದ ಮತ್ತೂ ಗಾಢವಾದ ಅರ್ಥ ವ್ಯಾಪ್ತಿಯನ್ನು ಹೊಂದಿರುವ ಅವಕಾಶವನ್ನು ಕಡೆಗಣಿಸಿದೆ. ಅಲ್ಲಿರುವ ಮೂಲ ಶ್ಲೋಕವು **"ವಿದ್ಯಾಃ ಸಮಸ್ತಾಸ್ತವದೇವಿಭೇದಾಃ। ಸ್ತ್ರೀಯಾಃ ಸಮಸ್ತಾಃ ಸಕಲಾ ಜಗತ್ಸು॥"** ಎಂದಿದೆ. ಇಲ್ಲಿ **ಭೇದಾಃ ಮತ್ತು ಸಕಲಾಃ** ಎಂದು ಸ್ಪಷ್ಟವಾಗಿಯೇ ಇರುವದನ್ನು ಸಂಕೇತಿಸುತ್ತಿಲ್ಲವೇ? "ಸರ್ವ ವಿದ್ಯೆಗಳ (ವಿಜ್ಞಾನಗಳ) ಸ್ವರೂಪದವಳೇ, ಓ ದೇವಿಯೇ, ಈ ಎಲ್ಲ ವಿದ್ಯೆಗಳೂ ನಿನ್ನದೇ ಅಂಶಗಳಾಗಿವೆ, ಲೋಕ ಲೋಕಗಳ ಸರ್ವ ಸ್ತ್ರೀ(ಪ್ರಕೃತಿ)ಯರೂ ಸಹಿತ" ಎಂದು ವ್ಯಾಪ್ತಿಯನ್ನು ಹೊಂದಿದೆ. ಇದರ ಅಂತರಾರ್ಥವೆಂದರೆ, ಎಲ್ಲೆಲ್ಲಿ ಜೀವನ ಸ್ವರೂಪದಲ್ಲಿ ಆಕಾರವನ್ನು ಪಡೆದುಕೊಂಡು ಅಸ್ತಿತ್ವ ಪಡೆದಿರುವ ಈ **ಪ್ರಕೃತಿ(ಸ್ತ್ರೀ) ತತ್ತ್ವ** ಇರುವದೋ ಅಲ್ಲೆಲ್ಲವೂ ನಾವು ಆ ದೈವೀ ಕೃಪೆಯ ಮಾತೃ ಸ್ವರೂಪದ ಆತ್ಮದ ಸ್ವರೂಪವನ್ನೇ ಕಾಣುತ್ತೇವೆ. ಈ ತತ್ತ್ವವೇ ಇಡೀ ಜಗತ್ತನ್ನು ಪೋಷಿಸುವ ಸಲುವಾಗಿಯೇ ಅಸ್ತಿತ್ವ ಪಡೆದಿರುವದನ್ನು ಕಾಣುತ್ತೇವೆ. ಇವೆಲ್ಲ ಆಯಾಮಗಳಿಂದಾಗಿ ದೇವಿಯು **'ಕಲಾ'(64 ಕಲೆಗಳಾಗಿ)ಗಳಾಗಿ** ಸ್ತ್ರೀ ಸಮುದಾಯದಲ್ಲಿ ನೆಲೆಸಿರುತ್ತಾಳೆ; ಹೀಗಾಗಿಯೇ ನಾವು **'ದುರ್ಗಾ, ಅನ್ನಪೂರ್ಣಾ, ತಾರಾ, ಮಹಾವಿದ್ಯಾ'ಗಳಲ್ಲಿ** ಇರುವದನ್ನೇ **"ತಂತ್ರ ಶಾಸ್ತ್ರ"**ದಲ್ಲಿ ಹೇಳಿದೆ. ಆದರೆ ಇಲ್ಲಿ ಎವಿಲಾನ್ ತಮ್ಮ ಮುನ್ನುಡಿಯಲ್ಲಿ, "ಎಲ್ಲಿ ಎಲ್ಲಿ ಸ್ತ್ರೀಯ ಪಾದಗಳನ್ನು ಕಾಣಲಾಗುತ್ತದೆಯೋ, ಅಲ್ಲೆಲ್ಲ ಪ್ರತಿಯೊಬ್ಬರೂ ಆ ಪಾದಗಳನ್ನು ತಮ್ಮ ಗುರುವಿನ ಸ್ವರೂಪದಲ್ಲಿಯೇ ಆರಾಧಿಸಬೇಕು" ಎಂದು ಬರೆಯುತ್ತಾರೆ.

ಈ ರೀತಿಯಲ್ಲಿ, ಹಿಂದೂ ಚಿಂತನಾ ವಿಧಾನದಲ್ಲಿ ಈ ಶಾಕ್ತ ವಿಷಯದ ಚಿಂತನವು, ಈ ಸ್ತ್ರೀಗೆ ಇರುವ ಈ ದೈವೀ ಸ್ವರೂಪಕ್ಕೆ (ದಿವ್ಯತ್ವಕ್ಕೆ) ಮತ್ತು ಅದನ್ನೂ ಆರಾಧಿಸುವ ಸಲುವಾಗಿ ಮತ್ತು ಆ ರೀತಿಯಲ್ಲಿ ಘೋಷಿಸಲೂ ಸಹಿತ ಯಾವುದೇ ರೀತಿಯಿಂದಲೂ ವಿಚಲನೆಗೊಳ್ಳದ ರೀತಿಯಲ್ಲಿಯೇ – ಅಂದರೆ ವೇದಾಂತದ ಅಭಿವ್ಯಕ್ತಿಗಳಲ್ಲಿ ಯಾವ ರೀತಿಯಲ್ಲಿ **ಪುರುಷ ತತ್ತ್ವದಲ್ಲಿ ಅಂತರ್ಗತಗೊಂಡಿರುವ ದಿವ್ಯತ್ವದ ಸ್ವರೂಪದಲ್ಲಿ** ಆರಾಧಿಸಲಾಗುತ್ತದೆಯೋ – ಅದೇ ರೀತಿಯಲ್ಲಿ ಆರಾಧಿಸುತ್ತಿದೆ. ಈ ಪರುಷ ತತ್ತ್ವದ ವೇದಾಂತದ ಅನುಷ್ಠಾನವೂ ಕೇವಲ ಪುರುಷರಿಂದ ಮಾತ್ರವೇ ಆರಾಧಿಸಲ್ಪಡುತ್ತಿರುವದನ್ನು ನಾವು ಅತ್ಯಂತ ಸ್ಪಷ್ಟವಾಗಿಯೇ ಕಾಣುತ್ತೇವೆ. ಈ ವಿಷಯವಾಗಿ ನಾವು ಸದಾ ಮೌನವನ್ನೇ ಆಧರಿಸಿಕೊಂಡಿದ್ದೇವೆ. ಹಾಗೆಂದು ನಾವು ಯಾವದನ್ನೂ ವಿರೋಧಿಸಿಲ್ಲ. ಪರಿಪಕ್ವವಾದ ಪರಿಪೂರ್ಣ ಸಮತೆಯು ಈ ಎರಡು ತತ್ತ್ವಗಳ ಸ್ವರೂಪಾವತರಣಗಳಲ್ಲಿ ಇದೆ ಎನ್ನುವದನ್ನು ನಾವು ಸ್ವೀಕರಿಸಿದ್ದೇವೆ.

ಇದೇ ರೀತಿಯಲ್ಲಿ ಎವಿಲಾನ್ ಪ್ರತಿಪಾದಿಸುತ್ತಿರುವ ಅನುವಾದದ ಹಂತದಲ್ಲಿ, ಈಗಾಗಲೇ ರೂಪಿಸಲ್ಪಟ್ಟಿರುವ ಭಾಷ್ಯಗಳಲ್ಲಿ ಇರುವ ತಪ್ಪು ಅರ್ಥದ ರೂಪಣೆಯ ಮೂಲಕ ಮಾಡಿರುವ ಕೆಲವು ಭ್ರಮಾಪೂರ್ಣ ವಿಷಯಗಳ ಉದಾಹರಣೆಗಳನ್ನು ನಾವು ಕಡೆಗಣಿಸಿ ಸಾಗದಂತೆ ಅಭಿಪ್ರಾಯ ಹೊಂದಿರುವಂತೆ ಕಾಣುತ್ತದೆ. ನಾವಿಲ್ಲಿ ಉದಾಹರಣೆಗೆ ಒಂದು ದೃಷ್ಟಾಂತವನ್ನು ಗಮನಿಸಿದರೆ, **"ಮಹಾದೇವಿ ಸ್ತೋತ್ರ"**ದ ಸಂದರ್ಭದಲ್ಲಿ, ಅಲ್ಲಿ ಮಹಾದೇವಿಯನ್ನು ಕಪ್ಪು (ಬ್ಲ್ಯಾಕ್) ಮತ್ತು ಬೂದಾ (ಗ್ರೇ) ವರ್ಣದಲ್ಲಿರುವ ವಿಷಯವನ್ನು ಕಾಣುತ್ತೇವೆ. ಇಲ್ಲಿ ಬೂದಾ ಎನ್ನುವದನ್ನು "ಬೂದಿ ಅಥವಾ ಹೊಗೆಯ ವರ್ಣದ" ಎನ್ನುವದು ನಾಮ ವಿಶೇಷಣವಾಗಿರುವ **"ಧೂಮ್ರಾ"** ಎನ್ನುವ ಅರ್ಥಕ್ಕೆ ಸಮೀಪವಿರುವ ಹಾಗೆ ಭಾಸವಾಗುತ್ತದೆ. ಆದರೆ ಟಿಪ್ಪಣಿಗಳಲ್ಲಿ ಮಾತ್ರ "ಧೂಮದೊಡನೆ ಕೂಡಿರುವ, ಯಾಗದ ಸಮಯದ ವಿಧಿಯಾಗಿ, ಇದನ್ನೇ ಜ್ಞಾನದ ವಿಧಿಗಳನ್ನಾಗಿಸಲಾಗಿದೆ" ಎಂದು ನಮೂದಿಸಿದ್ದಾರೆ. ಆದರೆ ಇದೊಂದು ಕೇವಲ ಪಾಂಡಿತ್ಯಾಭಿಮಾನಿ ಪ್ರತಿಪಾದನೆಯಾಗಿದ್ದು, ಇದನ್ನು ಯಾವುದೇ ಕಾರಣಕ್ಕೂ ನಾವು ಸ್ವೀಕರಿಸಲು ಸಾಧ್ಯವೇ ಇಲ್ಲ. ಇಲ್ಲಿ ಆರಾಧಿಸಲ್ಪಡುತ್ತಿರುವ ದೇವಿಯ ವಿವಿಧ ವರ್ಣಗಳೆಲ್ಲವೂ ಮನೋವೈಜ್ಞಾನಿಕವಾಗಿರುವ ಸಂಕೇತಗಳಾಗಿವೇ ವಿನಾ ಬೇರೆ ಅಲ್ಲ. ಇಲ್ಲಿ ಲೇಖಕ ಎವಿಲಾನ್ ತಮಗೆ ತಾವೇ ಒಂದು ಅತ್ಯುತ್ತಮ ಮಾದರಿಯ

ಮಾರ್ಗವೊಂದನ್ನು ಅವರು ನೀಡಿರುವ ಪ್ರವೇಶಿಕೆಯ ವಿಷಯದಲ್ಲಿ ನೀಡಿದ್ದಾರೆ. ಆದರೆ, ಇಲ್ಲಿ ಅಲ್ಲಲ್ಲಿ ಸಾಂದರ್ಭಿಕವಾಗಿ ಭಿನ್ನಾಭಿಪ್ರಾಯಗಳು ರೂಪಣೆ–ಗೊಳ್ಳುತ್ತಿದ್ದರೂ, ಇಲ್ಲಿ ಅವರು ನೀಡರುವ ಟಿಪ್ಪಣಿಗಳು ಮಾತ್ರ ತುಂಬ ಆಸಕ್ತಿಪೂರ್ಣ ವಿಷಯಗಳನ್ನು ಒಳಗೊಂಡಿವೆ; ಬೋಧಪ್ರದವಾಗಿವೆ ಮತ್ತು ಮೂಲ ಪಠ್ಯದ ವಿಷಯದಲ್ಲಿ ಒಂದು ಹೊಸ ಬೆಳಕನ್ನೂ ನೀಡುತ್ತಿದೆ.

ಲೇಖಕ ಎವಿಲಾನ್ ಅವರು ತಮ್ಮ ಈ ಗ್ರಂಥಗಳ ಪ್ರಕಾಶನದ ಮೂಲಕ, ತಂತ್ರಗಳ ಮಹತಿಯನ್ನು ತೋರಿಸುತ್ತಿರುವದರ ಜೊತೆಗೆ ಈ ಶಕ್ತಿಪೂರ್ಣವಾದ ಮತ್ತು ಪ್ರಗಾಢತೆಯನ್ನು ಹಾಗು ಅಲ್ಲಿರುವ ಸತ್ಯ–ಸಂಗತಿಗಳ ಕುರಿತು ಈಗ ಕವಿದಿರುವ ತಪ್ಪು–ಅಭಿಪ್ರಾಯಗಳ ಮೋಡಗಳನ್ನು ದೂರ ಸರಿಸುವ ಹಂತದಲ್ಲಿ ಇರಬೇಕಾದ ನಿರಪೇಕ್ಷ ಮನೋಭಾವದಲ್ಲಿ ಅಧ್ಯಯನದ ಮೂಲಕ ಇದನ್ನು ಕಂಡುಕೊಳ್ಳಲು ಬಯಸುತ್ತಾರೆ.

ನಾವೀಗ ಎವಿಲಾನ್ ಗ್ರಂಥದ ಕುರಿತು ವಿಶ್ಲೇಷಣೆಯನ್ನು ಕೈಕೊಳ್ಳಬೇಕಾದ ಮತ್ತು ಅವನ ಅಭಿಪ್ರಾಯದ ಕುರಿತು ವಿವೇಚಿಸಬೇಕಾದ ಸಂದರ್ಭವಿದೆ. ಅದರಲ್ಲೂ **'ಮಹಾನಿರ್ವಾಣ ತಂತ್ರ'**ದ ಕುರಿತು ನಮ್ಮ ಅಭಿಪ್ರಾಯವನ್ನು ಹೇಳಲೇಬೇಕಾಗಿದೆ. ಗ್ರಂಥದ ಅನುವಾದದಲ್ಲಿ ಲೇಖಕರು, ಈ ಮೊದಲು ಈ 'ಸ್ತ್ರೀ–ಸ್ವರೂಪದ ಮಹತಿಯ' ಬಗೆಗೆ, ದೇವರಿಗೂ ಗುಣ ವಿಶೇಷಗಳನ್ನು ರೂಪಿಸಿರುವ ವಿಷಯದ ಕುರಿತು ಅವರು ಹೊಂದಿರುವ ಪೂರ್ವ ಗ್ರಹಪೀಡಿತ ಮನೋಭಾವದ ಗ್ರಹಿಕೆಗಳನ್ನು ಮತ್ತೂ ಮುಖ್ಯವಾಗಿ ನವೀನ ಚಿಂತನಾ ವಿಧಾನದಲ್ಲಿ ಮೂರ್ತಿ ಪೂಜಾ ವಿಧಾನದ ಕುರಿತು ಇರುವ ಅಜ್ಞಾನವನ್ನೂ, ಸಮ್ಮತಿಸಿಕೊಂಡೇ ಬರೆಯುತ್ತಾರೆ. ಆದರೆ **'ಮೂರ್ತಿ ಪೂಜೆ' ಅಥವಾ 'ಸಾಕಾರ ಸ್ವರೂಪದ ಆರಾಧನೆ'** ಎನ್ನುವದು 'ತಂತ್ರ ಶಾಸ್ತ್ರ'ದಲ್ಲಿ ಒಂದು ಸಾಮಾನ್ಯ ವಿಧಿಯಾಗಿದೆ. ಇದು ಹಿಂದೂ ಆಚರಣೆಗಳ ಇತರ ವಿಧಾನಗಳಲ್ಲಿಯೂ ಇದ್ದು, ಅದನ್ನು – ಮೂರ್ತಿ ಪೂಜೆಯನ್ನು – ಧಾರ್ಮಿಕ ಆಧ್ಯಾತ್ಮಿಕ ಪ್ರಗತಿಯ ಪಥದಲ್ಲಿ ಪ್ರಥಮ ಮೆಟ್ಟಿಲು ಎಂದು ಗೌರವಿಸಿದ್ದಾರೆ. ಈ ಎರಡೂ ವಿಷಯದ ಬಗೆಗೆ ಎವಿಲಾನ್ ಹೇಳುತ್ತಿರುವ ಅಭಿಪ್ರಾಯಕ್ಕೆ ಒಂದು ಹಂತದವರೆಗೆ ಸಮ್ಮತಿಸಬಹುದು. ಆದರೆ ಈ ರೀತಿಯ ಮತ(ಪಂಥ)ಗಳ ವಿಕಾಸದ ಯಾನದಲ್ಲಿ, ಈ ತಂತ್ರ ಶಾಸ್ತ್ರವು ಮಾತ್ರ ಇದನ್ನು ರೂಪಿಸಿದೆ ಎನ್ನುವದನ್ನು ನಾವು ಎತ್ತಿ ಹಿಡಿಯಬೇಕಾಗಿಲ್ಲ.

ದೈವತ್ವದ ಕುರಿತು ಮಾನವನ ಪರಿಕಲ್ಪನೆಗಳು ತಮ್ಮಲ್ಲಿಯೇ ತಾವು ಪ್ರಪ್ರಥಮ–ವಾಗಿಯೇ ವಿಭಾಗೀಕರಣಗೊಂಡು ವೈವಿಧ್ಯತೆಯಿಂದಾಗಿ ವಿಭಾಗೀಕರಣಗೊಂಡು, ಆರಾಧನೆ ಪದ್ಧತಿಯಲ್ಲಿ ಸಾಗಿದವು. ಅದರಲ್ಲೂ ಸಾಕಾರ ರೂಪದ ಆರಾಧನೆ ಮುಂದುವರೆದವು. ಕ್ರಮೇಣ ನಿರಾಕಾರ ತತ್ತ್ವದ ಆರಾಧನೆಯನ್ನು ಹೊಂದುವ ಅಭೀಪ್ಸೆಯನ್ನೂ ಹೊಂದಿಯೇ ವಿಕಾಸಗೊಂಡವು.

ಎರಡನೇಯದಾಗಿ, ಪರಿಷ್ಕರಣೆಗೊಂಡು ಗುಣ ಸಂಪನ್ನತೆಯಿಂದ ಅರ್ಹತೆಯನ್ನು ಪ್ರಾಪ್ತಿ ಮಾಡಿಕೊಂಡ ಸ್ವರೂಪವನ್ನು ಆರಾಧಿಸುವ ಮೂಲಕ ಸಾಗಿತು. ಜೊತೆಗೆ ಇನ್ನೂ ಪರಿಷ್ಕರಣೆಗೊಂಡು ಗುಣ ಸಂಪನ್ನತೆಯನ್ನು ಪಡೆದುಕೊಳ್ಳದ ಕೆಲವು ವಿಶೇಷ ಶಕ್ತಿಗಳ ಕುರಿತು ಅದರಲ್ಲೂ ಪರಮೋಚ್ಚ ಪೂರ್ಣತೆಯ ಕುರಿತು ತೀವ್ರ ತುಡಿತವನ್ನೂ ಹೊಂದಿ, ಅನುಷ್ಠಾನಗೊಂಡಿದ್ದವು. ತಂತ್ರ ಶಾಸ್ತ್ರದ ಪೂಜಾ ಪದ್ಧತಿಯಲ್ಲಿ, ಆರಾಧನಾ ಸ್ವರೂಪದಲ್ಲಿ ಈ ಎಲ್ಲ ಹಂತಗಳನ್ನೂ, ತಂತ್ರ ಶಾಸ್ತ್ರದ ಅನುಷ್ಠಾನ ಪದ್ಧತಿಯ ಶಾಸ್ತ್ರಗಳನ್ನೂ ಸಹಿತ ರೂಪಿಸಿದೆ. ಹೀಗಿರುವಾಗ ನಿರಾಕಾರವಾದುದನ್ನು ಕುರಿತ ಚಿಂತನಗಳನ್ನು ಹೊಂದಿದ ಭಾವವು ಅದು ಹೇಗೆ ತನ್ನಷ್ಟಕ್ಕೆ ತಾನೇ **'ಸಾಕಾರ'**ವನ್ನು ರೂಪಿಸಿಕೊಳ್ಳುತ್ತದೆ ಎನ್ನುವ ಪ್ರಶ್ನೆಯನ್ನು ಈ ಧಾರ್ಮಿಕ(ಮತದ) ತರ್ಕವಾದಿಗಳಿಗೆ ಕೇಳಬೇಕಾಗಿದೆ. ಇದಕ್ಕೆ ಉತ್ತರವನ್ನು ಕೊಡಲು ವಿಶ್ವವೇ (ಬ್ರಹ್ಮಾಂಡವೇ) ನಮಗಿದೆ. ಹಿಂದೂ ಚಿಂತನಾ ಕ್ರಮವು **'ನಾರಾಯಣ'**ನನ್ನು ಶಿಲೆಯಲ್ಲಿ, ವೃಕ್ಷಗಳಲ್ಲಿ, ಪ್ರಾಣಿಗಳಲ್ಲಿ ಮತ್ತು ಮಾನವಲ್ಲಿಯೂ ಸಹಿತ ಆರಾಧಿಸುತ್ತಿದೆ. ಇದು ಬೌದ್ಧಿಕ ಮತ್ತು ಆಧ್ಯಾತ್ಮಿಕ ಆಯಾಮಗಳಲ್ಲಿ ಹೆಮ್ಮೆಯ ವಿಷಯವೂ ಆಗಿದೆ, ಅಥವಾ ಇನ್ನುಳಿದ ಧರ್ಮಗಳ(ಮತಗಳ) ತೀವ್ರಾತಿ ತೀವ್ರವಾದ ತಿರಸ್ಕಾರದ ಮನೋಭಾವವಾಗಿರಬಹುದು. ಏನೇ ಆದರೂ ಇದು ತನ್ನದೇ ಆದ ಹೆಮ್ಮೆಯನ್ನು ಪರಿವರ್ತನಗೊಳಿಸಿಕೊಂಡು ತನ್ನದೇ ಅಸ್ಮಿತೆಯ ತರ್ಕಪೂರ್ಣತೆಯ ತೀವ್ರತೆಯನ್ನು ಪಡೆದುಕೊಂಡಿತು. ಪಶುಗಳಲ್ಲಾಗಲಿ ಅಥವಾ ಶಿಲೆಯಲ್ಲಾಗಲಿ, ಚತುಷ್ಪಾದಿಗಳಲ್ಲಾಗಲಿ ಅಥವಾ ಮಾನವನಲ್ಲಾಗಲಿ, ಈ ಎಲ್ಲ ಅಸ್ತಿತ್ವಗಳೂ ದೇವರಲ್ಲಿ ಸಮಾನ ಸ್ವರೂಪದಲ್ಲಿಯೇ ಇದ್ದು, ಅವು ಸಹಿತ ಆ ದಿವ್ಯತ್ವದಲ್ಲಿ ನಮ್ಮ ಸಹೋದರರಂತೆ/ಸಹಜಾತರಂತೆ ಇವೆ. ಅದೂ ಅಲ್ಲದೇ ಸರ್ವವ್ಯಾಪಿಯಾಗಿರುವ ಪರಮನು ಈ ಯಾವುದೇ ರೂಪವನ್ನೂ ಧರಿಸಲೂ ಹಿಂಜರಿಯುವದಿಲ್ಲ.

ಆದರೆ ಈ ಭೌತಿಕ ಸ್ವರೂಪಗಳ ಆಚೆ ಆಚೆ ಕೆಲವೊಂದು ಸಂಕೇತ–ಪೂರ್ಣವಾದ ಮತ್ತು ಆದರ್ಶವಾಗಿರುವ ಇತರೇ ಸ್ವರೂಪಗಳೂ ಇವೆ. ಅವುಗಳ ಪ್ರಮಾಣವೇನೂ ಕಡಿಮೆಯಿಲ್ಲ. ಇವುಗಳು ನೈಜತೆಯಲ್ಲಿ ಅಗ್ರಗಣ್ಯವೇ ಆಗಿದ್ದು, ಮತ್ತೂ ಅಧಿಕಾಧಿಕವಾಗಿರುವ ದೈವೀ ಶಕ್ತಿಯನ್ನು ಹೊಂದಿದ್ದು, ಇವುಗಳು ಭೌತಿಕ ಸ್ವರೂಪದ ಪ್ರಸ್ಫುಟಿತ ಸ್ವರೂಪವನ್ನು ಪಡೆದುಕೊಂಡಿವೆ. ಇವೆಲ್ಲವೂ ಮನೋರೂಪಾತ್ಮಕವಾಗಿರುವ ಮೂರ್ತಿ ಸ್ವರೂಪವಾಗಿದ್ದು, ನಾವು ಅವುಗಳನ್ನೇ 'ದೇವರು' ಎಂದು ಆರಾಧಿಸುತ್ತೇವೆ. ಹಿಂದೂ ವ್ಯಕ್ತಿಯು ತನ್ನ ಭಕ್ತಿಪೂರ್ವಕ ಸಮರ್ಪಣೆಗಾಗಿ, ಯಾವುದೇ ರೂಪವನ್ನೂ ಸಹಿತ "ದೇವರು" ಎಂದು ಆರಾಧಿಸುವ ವಿಶ್ವಾಸ ಹೊಂದಿದ್ದಾನೆ. ಹೀಗಾಗಿ ಇಲ್ಲಿ ಹಿಂದುವು ರೂಪಣೆಗೊಳಿಸಿಕೊಳ್ಳುವ ಯಾವುದೇ ಸ್ವರೂಪಕ್ಕೂ ಸಮರ್ಪಣಾ ಮನೋಭಾವದಲ್ಲಿ ಇರುತ್ತಾನೆ, ದೇವರ ಮೇಲಿನ ಪ್ರೇಮವು ಈ ಅಭಿಪ್ರಾಯಕ್ಕೇ ಬದ್ಧನಾಗಿರುವದನ್ನು ಮತ್ತು ಆ ರೀತಿಯಲ್ಲಿಯೇ ವಿಶ್ವಾಸದಿಂದ ಪರಿಗ್ರಹಿಸುವದನ್ನು ಜೊತೆಜೊತೆಗೆ ಅದನ್ನು ಚೈತನ್ಯಗೊಳಿಸಿಕೊಳ್ಳುತ್ತಲೇ ಇರುತ್ತಾನೆ. ಈ ಮನೋಭಾವವನ್ನು ವಿಶ್ವಾಸವನ್ನು ನಾವು ತರ್ಕರಹಿತವೆಂದು ಹೇಳಲು ಸಾಧ್ಯವಿಲ್ಲ. ಅದಕ್ಕಾಗಿ, ಇಲ್ಲಿ ಒಂದು ವೇಳೆ ಈ ವಿಶ್ವದಲ್ಲಿ ಚೇತನವು ಇದೆ ಎಂದಾದಲ್ಲಿ, ಅದು ಇಲ್ಲಿಗೆ ಅವತರಣಗೊಳ್ಳಲು – ಇಳಿದು ಬರಲು – ಜೊತೆಗೆ ಇಲ್ಲಿರುವ ಜೀವಿಗಳಲ್ಲಿ ಅಸ್ತಿತ್ವಗೊಳ್ಳಲು ಆಕುಲತೆಯ ತುಡಿತವನ್ನು ಹೊಂದಿ, ಎಲ್ಲದಕ್ಕೂ ಪರಿಹಾರವೆನ್ನುವಂತೆ ತಂದೆಯ, ಮಾತೆಯ, ಮಿತ್ರನ, ಪ್ರೇಮಿಯ ಮತ್ತು ಈ ಸರ್ವಸ್ವವನ್ನೂ ಏಕೀಭವಗೊಳಿಸುವ ವೈಶ್ವಿಕ ಪ್ರೇಮದ ಸ್ವರೂಪದಲ್ಲಿ ಆಗಮಿಸುತ್ತದೆ. ಯಾವುದೇ ಕಾರಣಕ್ಕೂ ಕೇವಲ ತನ್ನದೇ ತೋಷಕ್ಕಾಗಿ ಹಾಗೂ ವೈಭವಕ್ಕಾಗಿ ವಿಶ್ವದಲ್ಲಿರುವ ಈ ಸ್ವರೂಪಗಳನ್ನು ರೂಪಿಸಿಕೊಳ್ಳಲು ಕಲ್ಪಿಸಿಕೊಳ್ಳುತ್ತದೆ ಎನ್ನಬಹುದು. ಆದರೆ ಇದರ ಗರಿಮೆಯಿಂದಾಗಿ ಇಂತಹ ಸ್ವರೂಪಗಳನ್ನು ತಿರಸ್ಕರಿಸುವದಾಗಲೀ ಅಥವಾ ಆರಾಧನಾ ಮನೋಭಾವದಲ್ಲಿ ಆರಾಧಕನು ರೂಪಿಸಿಕೊಂಡ ಅವನ ಕಲ್ಪನೆಗಳ ಮೂಲಕ ಸಲ್ಲಿಸುತ್ತಿರುವ ವಿಷಯವಾಗಲೀ, ಈ ಎಲ್ಲವೂ ಆ ಆರಾಧಕನ ಹೃದಯದಲ್ಲಿಯೇ ರೂಪ ತಾಳಿದ್ದು ಅಥವಾ ಅವನ ಕಲ್ಪನೆಗಳಲ್ಲಿ ರೂಪುಗೊಂಡ ವಿಷಯವಾಗಿರುತ್ತವೆ. ಹೀಗಾಗಿ ಅದು ನಿರ್ಲಿಪ್ತವಾಗಿಯೇ ಇರುತ್ತದೆ. ಈ ರೀತಿಯಲ್ಲಿ ಮನೋಭೂಮಿಕೆಯಲ್ಲಿ ರೂಪು ಪಡೆಯುವ ರೂಪಗಳಿಗೆ ಮಾನಸಿಕ ಆರಾಧನೆಯನ್ನೇ ಸಲ್ಲಿಸಬಹುದಾಗಿದೆ, ಮತ್ತು

ಇದೇ ಉಚ್ಚ ಹಾಗು ಸೂಕ್ತ ಮಾರ್ಗವೂ ಆಗಿದೆ. ಅಥವಾ, ನಾವು ಉಪಾದಾನ ಭಿತ್ತಿ (ಭೌತಿಕ ಆಧಾರ)ವನ್ನು ಕೊಡಬಹುದಾಗಿದೆ. ಇದನ್ನೇ ಮೂರ್ತಿಯೊಂದನ್ನು ಪ್ರತಿಷ್ಠಾಪಿಸುವ ಮೂಲಕ ಅಥವಾ ಚಿತ್ರ ಸ್ವರೂಪದ ಒಂದು ಆಕಾರವನ್ನು ಆ ಮನೋಭೂಮಿಕೆಯ ಕಲ್ಪನೆಗೆ ಒಂದು ಭೌತಿಕ ರೂಪದ ಆರಾಧನೆಯ ಸಲುವಾಗಿ ರೂಪಿಸಿಕೊಳ್ಳಲಾಗುವದು. ಇಲ್ಲವೇ ಈ ರೀತಿಯ ದೈಹಿಕ ಕ್ರಿಯೆಗಳ ಮೂಲಕವೇ ಆರಾಧಿಸುವ ಸಲುವಾಗಿ (ಮೂರ್ತಿ ಪೂಜೆಯ ಸಲುವಾಗಿ) ರೂಪವೊಂದನ್ನು ಕಾಣಬಹುದು.

ನಿರಾಕಾರ ಸ್ವರೂಪದಲ್ಲಿಯೂ ನಾವು ದೇವರನ್ನು ಆರಾಧಿಸುತ್ತೇವೆ, ಇಲ್ಲಿ ಅವನ ಗುಣ ಸ್ವರೂಪವನ್ನು, ಅವನ ಪ್ರೇಮವನ್ನು, ಶಕ್ತಿಯನ್ನು, ಆನಂದವನ್ನು, ಜಾಣ್ಮೆಯನ್ನು, ಇಡೀ ಬ್ರಹ್ಮಾಂಡದ ಆ ಮಹತ್–ತತ್ತ್ವಗಳಲ್ಲಿ ತನ್ನನ್ನು ತಾನೇ ಅಭಿವ್ಯಕ್ತಗೊಳಿಸಿಕೊಂಡಿರುವ ಆ ದೇವನನ್ನು, ನಮ್ಮ ಜ್ಞಾನಪೂರಿತ ದೃಷ್ಟಿಯಿಂದ ಈ ರೀತಿಯ ನಿರಾಕಾರದ ಆರಾಧನೆಯನ್ನು ಕೈಗೊಳ್ಳುತ್ತೇವೆ. ನಾವು ಯಾವಾಗಲೂ ತತ್ ಅಂದರೆ ಆ ದೇವನನ್ನು ನಿರಾಕಾರತ್ವದ ಹಿನ್ನಲೆಯಲ್ಲಿಯೇ ಈ ರೂಪಗಳಲ್ಲಿ ಅಭಿವ್ಯಕ್ತಗೊಂಡಿದ್ದಾನೆ ಅಥವಾ ಇಲ್ಲಿ ರೂಪುಗೊಂಡಿರುವ ಅಂತರಂಗದಲ್ಲಿ ಅವನೇ ಇದ್ದಾನೆ ಎನ್ನುವ ವಿಶ್ವಾಸದಲ್ಲಿಯೇ ಆರಾಧಿಸುತ್ತೇವೆ. ನಾವು ಸರ್ವೋಚ್ಚ ತಾಣದ ಶೃಂಗಕ್ಕೆ ತಲುಪಿದಾಗ, ಅಲ್ಲಿ ಅದು ನಿರಾಕಾರವಾಗಿರುವದಲ್ಲದೇ ಅಂದರೆ **“ಅರೂಪಾ”** ಆಗಿರುವದಲ್ಲದೇ, ನಿರ್ಗುಣವಾಗಿರುತ್ತದೆ. ಈ ಒಂದು ಗುಣಾತೀತ, ಅನಿರ್ವಚನೀಯ, ಅನಿರ್ದೇಶ್ಯಂ ಆಗಿರುವದನ್ನು ಭಗವದ್ಗೀತೆಯೂ ವಿವರಿಸುತ್ತಿದೆ.

ನಮ್ಮ ಮಾನವ ಸಹಜ ಅಜ್ಞಾನದಿಂದಾಗಿ, ನಮ್ಮದೇ ಮಾನಸಿಕ (ಬೌದ್ಧಿಕ) ಅನುರಾಗಗಳಿಂದಾಗಿ ಇಲ್ಲಿ ಹಂತಗಳನ್ನು ಮತ್ತು ಭೇದಗಳನ್ನು, ಶ್ರೇಷ್ಠತಾ ಸ್ಥಾನಕ್ಕಾಗಿ ಹಾಗು ನಿರಾಕರಣೆಯನ್ನು ರೂಪಿಸುವ ಸಲುವಾಗಿ, ನಾವೂ ಈ ರೀತಿಯ ಶ್ರೇಣಿಯನ್ನು ನಿರ್ಮಿಸಿಕೊಳ್ಳುತ್ತೇವೆ. ತನ್ಮೂಲಕ ಇದು ಶ್ರೇಷ್ಠ, ಇದು ಕನಿಷ್ಠ ಎಂದು ಪರಿಭಾವಿಸಿಕೊಳ್ಳುವ ಶ್ರೇಣಿಯನ್ನೇ ನಿರ್ಮಿಸಿಕೊಳ್ಳುತ್ತೇವೆ. ಇದೆಲ್ಲವೂ ಅಜ್ಞಾನ ಮತ್ತು ಕೀಳರಿಮೆಯಿಂದ ಕೂಡಿರುವ ಜೀವಿಗಳ ಅವಸ್ಥೆಯಿಂದಾಗಿದೆ.

ರೂಪಾರಾಧನೆಯ ಮೂಲಕವೇ ಆರಾಧಿಸುತ್ತಿರುವ **ಮೂರ್ತಿ ಪೂಜಕನನ್ನು** ಮತ್ತು **ಬಹು ದೇವತಾವಾದಿ**ಯನ್ನು, ಈ ತತ್ತ್ವ ಸ್ವರೂಪದ ಅಥವಾ **ಈಶ್ವರವಾದಿಯಾಗಿರುವ** ವ್ಯಕ್ತಿಯು, ಸದಾ ಖಂಡನಾ ದೃಷ್ಟಿಕೋನದಿಂದಲೇ

ಕಾಣುತ್ತಾನೆ ಎನ್ನುವ ವಿಷಯ ನಮಗೆ ತಿಳಿದಿದೆಯೇ? ಇನ್ನು ಅದ್ವೈತಿಯಾದರೋ ಈ ಈಶ್ವರವಾದಿಯನ್ನು ಕೇವಲ ಗುಣಾಧಾರಿತ ಭಾವವನ್ನೇ ಆರಾಧಿಸುವ, ವಿಚಾರ ಶಕ್ತಿಯಲ್ಲಿ ಕ್ಷೀಣವಿರುವ ವ್ಯಕ್ತಿತ್ವದವನೆಂದೇ ಭಾವಸಿದರೂ ಸಹಿತ ಅದನ್ನೂ ಪ್ರಶಾಂತ ಹಾಗೂ ಸಹನಾಶೀಲತ್ವದಿಂದಲೇ ಕಾಣುತ್ತಾನೆ. ಆದರೆ ನಮಗೆ ಇಲ್ಲಿ ಕಾಣುತ್ತಿರುವದೇನೆಂದರೆ, ದೇವರು ಏನನ್ನೂ ತಿರಸ್ಕರಿಸುವದಿಲ್ಲ. ಈ ಜೀವಾತ್ಮನ ಎಲ್ಲ ವಸ್ತು–ವಿಷಯಗಳೂ ಪ್ರಾರ್ಥನೆಯ ಸ್ವರೂಪದಲ್ಲಿ – ಅದರಲ್ಲೂ ಮುಗ್ಧ ಶಿಶುವಿನ ಭಾವದ ಹಂತದಲ್ಲಿ ಇದ್ದಲ್ಲಿ – ಅವೆಲ್ಲವನ್ನೂ ಸ್ವೀಕರಿಸುತ್ತಾನೆ. ಇಲ್ಲವೇ ಒಂದು ಹೂವನ್ನೋ ಅಥವಾ ಒಂದು ಎಲೆಯನ್ನೋ(ಪತ್ರವನ್ನೋ) ಆಕಾರವೊಂದರರಲ್ಲಿ ಚಿತ್ರೀಕರಿಸಲ್ಪಟ್ಟಿರುವ ಮೂರ್ತಿಯ ಮುಂದೆ ಸಲ್ಲಿಸುವದೂ ಸಹಿತ – ತತ್ತ್ವ ಶಾಸ್ತ್ರೀಯನೋರ್ವನು ಆ ಶೃಂಗದುತ್ತುಂಗಕ್ಕೇ ಆರೋಹಗೊಂಡು ಅನಿರ್ವಚನೀಯವಾದ ಮತ್ತು ಅಜ್ಞೇಯವಾದ ಹಂತಕ್ಕೆ ಪುಟಿಯುತ್ತಾನೆಯೋ, ಅದೇ ರೀತಿಯಲ್ಲಿಯೇ ಮೂರ್ತಿ ಪೂಜಕನ ಸ್ಥಿತಿಯೂ ಇರುತ್ತದೆ. ಯಾರು ಆ ಔನ್ನತ್ಯವನ್ನು ತಲುಪಿ ಅಲ್ಲಿರುವ ಅನಂತತೆಯ ಸಾಕ್ಷಾತ್ಕಾರದ ಹಂತಕ್ಕೆ ತನ್ನನ್ನು ವ್ಯಾಪ್ತನನ್ನಾಗಿಸಿಕೊಳ್ಳುತ್ತಾನೆಯೋ ಮತ್ತು ಅವನ ಹೃದಯವು ಶಿಶು ಸಹಜವಾಗಿರುವ ಮುಗ್ಧತೆಯಲ್ಲಿ ಇರುವದೋ ಜೊತೆಗೆ ರೂಪಗಳನ್ನು ದೃಷ್ಟಿಸಬಲ್ಲ ಋಷಿಯ ಸಾಧನಾಪೂರ್ಣ ಸಾಮರ್ಥ್ಯವನ್ನು ಹೊಂದಿರುತ್ತಾನೆಯೋ, ಅದೇ ಸಮಭಾವದಲ್ಲಿಯೇ ಇರುತ್ತದೆ.

ಇದೆಲ್ಲ ಏನೇ ಇದ್ದರೂ, ಈ ದೇವೀ ಸ್ತೋತ್ರಗಳು ನಮ್ಮನ್ನು ದೇವಿಯ ಸಾಮಿಪ್ಯಕ್ಕೆ ಕರೆತರುತ್ತಿವೆ ಎನ್ನುವ ದೃಷ್ಟಿಕೋನವು ಪ್ರಮುಖವಾಗಿದೆ. ದೇವಿಯ ಸರ್ವ ರೂಪಗಳ ವೈಭವಗಳ ಕುರಿತು ಇಲ್ಲಿ ವರ್ಣನೆಗಳಿವೆ, ದೃಷ್ಟಿಗೆ ಗೋಚರವಾಗುತ್ತಿರುವ ಅವಳ ಕಾಯವಿದೆ. ಚಿಂತನಾಶೀಲ ಅಭಿವ್ಯಕ್ತಿಗಳನ್ನು ರೂಪಿಸುವವರಿಗೆ, ವೈಶ್ವಿಕ ಸ್ವರೂಪದ ಎಲ್ಲ ಆಕಾರಗಳ ಅನುಭಾವವನ್ನು ಒದಗಿಸುತ್ತಿವೆ. ಅವಳ ಮನೋವೈಜ್ಞಾನಿಕ(ಚಿತ್ತಗ್ರಾಹ್ಯವಾಗುವ) ಸರ್ವ ಅಂಶಗಳನ್ನೂ ಹೊಂದಿವೆ. ಪ್ರಾರಂಭದ ಅವಧಿಯ ಸಂವೇದನಾಪೂರ್ಣವಾದ ಹಂತದಲ್ಲಿ ಈ ರೀತಿಯಲ್ಲಿ ಅಭಿವ್ಯಕ್ತಗೊಂಡಿರುವದಲ್ಲದೇ ಜೊತೆಗೆ ದೇವಿಯು "ಅವಳದೇ ಏಕತ್ವ"ವಾಗುವ ಹಾಗೂ ಆದ್ಯಂತರಹಿತಳಾಗಿ ಅನಂತಾನಂತ ಅವಕಾಶವಾಗುತ್ತಾಳೆ.

ಲೇಖಕ ಎವಿಲಾನ್ ಈ ವಿಷಯವನ್ನು ಸಂಪೂರ್ಣ ಸಾಮರ್ಥ್ಯಪೂರ್ಣವಾಗಿ ಅಷ್ಟೇ ಗಟ್ಟಿಯಾಗಿ(ಬಲವಾಗಿ) ಇಲ್ಲಿ ರೂಪಸಿದ್ದಾರೆ. ಇದರ ಜೊತೆಗೆ ಅಲ್ಲಿರುವ ವೈವಿಧ್ಯತೆಯನ್ನೂ ತಮ್ಮ "ಗ್ರಂಥ ಪರಿಚಯ" ಭಾಗದಲ್ಲಿ ಕೊಟ್ಟಿದ್ದಾರೆ. ಆದರೆ ಅದೇ ಸಮಯಕ್ಕೆ ಇದು ಲಕ್ಷ್ಯಕೊಡದೇ ಈ ಸ್ತೋತ್ರಗಳನ್ನು ಓದುವ ಸಾಮಾನ್ಯ ಓದುಗನಿಗೂ ಸುಸ್ಪಷ್ಟಗೊಳ್ಳುವಂತಿರಬೇಕು. ಇದಕ್ಕಾಗಿ ಈ ಕೆಳಗಿನ ಸಂಗತಿಯನ್ನು ಉದಾಹರಣೆಗೆ ತೆಗೆದುಕೊಂಡರೆ, –

**"ಯಾವಾಗಲೂ ಯಾರು ಶಾಶ್ವತಳೂ ಆಗಿದ್ದಾಳೆಯೋ ಅವಳಲ್ಲಿ ಶ್ರದ್ಧೆಯಿರಲಿ, ಯಾರು ರೌದ್ರಾ ಆಗಿದ್ದಾಳೆಯೋ ಅವಳಿಗೆ, ಗೌರಿಗೆ, ಮತ್ತು ಧಾತ್ರೀಗೆ ಸದಾ ಶ್ರದ್ಧೆ ಇರಲಿ, ಶ್ರದ್ಧೆ ಇರಲಿ, ಯಾರು ಚಂದ್ರಿಕೆಯಾಗಿಯೂ ಸ್ವರೂಪದಲ್ಲಿ ಚಂದ್ರಾ ಆಗಿಯೂ ಇದ್ದಾಳೆಯೋ ಅವಳಿಗೆ, ಯಾರು ಪರಮಾನಂದ ಸ್ವರೂಪಳಾಗಿದ್ದಾಳೆಯೋ ಅವಳಿಗೆ, ಸದಾ ಸದಾ ಶ್ರದ್ಧೆ ಇರಲಿ ಯಾವಾಗಲೂ ಶ್ರದ್ಧಾಭಾವವಿರಲಿ"**, ಎನ್ನುವ ಈ ಭಾವದ ಶ್ಲೋಕವು ಪ್ರಸಿದ್ಧವಿರುವ **"ಚಂಡೀ–ಮಹಾತ್ಮ್ಯ"**ದಲ್ಲಿ ಅಭಿವ್ಯಕ್ತಗೊಂಡಿರುವ ಸ್ವರೂಪವಾಗಿದೆ. ಪವಿತ್ರ ಹಾಗೂ ಪೂಜನೀಯ ಗ್ರಂಥಗಳಲ್ಲಿ ಈ "ಚಂಡೀ ಮಹಾತ್ಮ್ಯವು" ಒಂದು ಅತ್ಯುತ್ತಮವಾದ ಸ್ಥಾನದಲ್ಲಿ ಅರ್ಹತೆಯಲ್ಲಿಯೇ ಆರಾಧಿಸಲ್ಪಡುತ್ತಿದೆ. ಆದರೆ ಎಲ್ಲೆಡೆಗೂ ಅಂದರೆ ಎಲ್ಲ ಅಭಿವ್ಯಕ್ತಿಗಳಲ್ಲೂ ವಿಭಿನ್ನ ಸ್ವರೂಪದ ಅಂಶಗಳೇ ದಟ್ಟೈಸಿರುವದನ್ನು ಕಾಣುತ್ತೇವೆ. ಹನ್ನೊಂದನೇ ಶ್ಲೋಕವು ದೇವಿಯ ಭೌತಿಕ ಸ್ವರೂಪದ ಇಂದ್ರಿಯಗಳ ಕುರಿತು ಸಂವೇದನಾಪೂರ್ಣವಾಗಿರುವ ವಿವರಗಳೊಂದಿಗೆ ಇದೆ.

**"ಓ ಗೌರೀ! ನನ್ನ ಹೃದಯದಾಳದ ಸ್ಪಂದದಿಂದಲೇ ತತ್–ರೂಪವನ್ನು**
**ಪರಿಕಲ್ಪಿಸಿಕೊಂಡು ಧ್ಯಾನಿಸುತ್ತೇನೆ,**
**ಸೌಂದರ್ಯದಿಂದ ಮನೋಹರವಾದ ಮುಖಮಂಡಲದವಳೆ,**
**ಸೌಂದರ್ಯದ ಗುರುತ್ವವನ್ನು ಅಧಿಕಗೊಳಿಸುವಂತೆ ತೂಗಾಡುತ್ತಿರುವ**
**ಕೇಶರಾಶಿಯನ್ನು ಹೊಂದಿದವಳೆ,**
**ಪೂರ್ಣವೃತ್ತಕಾರದಲ್ಲಿರುವ ಕಳಶಕುಚಗಳನ್ನು ಹೊಂದಿದವಳೇ,**
**ವೃತ್ತಾಕರವಾಗಿರುವ ಕ್ಷೀಣ ನಡುವಿರುವವಳೆ,**
**ನಿನ್ನ ಮೂರು ಕರಗಳಲ್ಲಿ – ಜಪಮಾಲೆ, ಕಳಶ ಮತ್ತು ಪುಸ್ತಕವನ್ನು – ಜೊತೆಗೆ**
**ನಿನ್ನದೇ ನಾಲ್ಕನೇ ಕರದಿಂದ 'ಜ್ಞಾನ ಮುದ್ರೆ'ಯನ್ನು ತೋರುತ್ತಿದ್ದೀಯಾ,"**

(ಎನ್ನುವ ವರ್ಣನೆಯಲ್ಲಿ, ಇಲ್ಲಿ ಮನೋವೈಜ್ಞಾನಿಕ ಸಂಕೇತಗಳ ಸಾಕಾರಗಳು ಹೇಗೆ ಸೂಕ್ಷ್ಮವಾಗಿಯೇ, ಸ್ವಾಭಾವಿಕವಾಗಿಯೇ ರೂಪುಗೊಳ್ಳುತ್ತಿರುವದನ್ನು ಗುರುತಿಸಬೇಕು).

ಅದರಲ್ಲೂ ಒಂಬತ್ತನೇ ಶ್ಲೋಕವಂತೂ ಯೋಗದ ವಿವರಗಳನ್ನು ಶಬ್ದ–ಚಿತ್ರದ ಮೂಲಕ ಅದರ ಸ್ವರೂಪವನ್ನು ಹೇಳುತ್ತಿರುವದು ಮಹತ್ವಪೂರ್ಣವಾದ ವಿಷಯವಾಗಿದೆ –

**"ಓ ಮಾತೆಯೇ! ಸುಪ್ತಾವಸ್ಥೆಯಲ್ಲಿರುವ ಕುಂಡಲೀನಿ ಸರ್ಪದ ಹಾಗೆ**
**ನೀನು ಸುಪ್ತಿಯಲ್ಲಿದ್ದೀಯಾ**
**ಆಧಾರ ಚಕ್ರದ ಕಮಲದ ಮಧ್ಯದಲ್ಲಿ ನೀನು ವಾಸವಾಗಿದ್ದೀಯಾ,**
**ತತ್–ಭಾವದಲ್ಲಿಯೇ ಈ ವಿಶ್ವವನ್ನು ಸೃಷ್ಟಿಸಿದ್ದೀಯಾ.**

**ಸೆಳೆಮಿಂಚಿನ ಧಾರೆಯಂತೆಯೇ ನೀನು ಆರೋಹಣ ಗೈಯುವೆ,**
**ನಾದ–ಸ್ಪಂದನದ ತಾರಾ ವಲಯವನ್ನು ಪ್ರಾಪ್ತಗೊಳಿಸಿಕೊಳ್ಳುತ್ತೀಯಾ –**

ಎನ್ನುವ ಅತ್ಯಪೂರ್ವ ವಿವರಣೆಯಲ್ಲಿ, ಇಲ್ಲಿ ಪ್ರಥಮ ಭಾಗದಲ್ಲಿ, ಮಹಾನ್ ಕಾವ್ಯಾತ್ಮಕ ಸಾಮರ್ಥ್ಯದಲ್ಲಿಯೇ ತುರೀಯ ಸ್ಥಿತಿಯಲ್ಲಿರುವ ಉಚ್ಚತಮ ತತ್ತ್ವ ಶಾಸ್ತ್ರವಾಗಿದೆ, ಮತ್ತು ಇದು ಸಮೃದ್ಧಪೂರ್ಣವಾಗಿರುವ ಕಾವ್ಯಾತ್ಮಕ ವರ್ಣಕಗಳಲ್ಲಿ ಆ ಪಥಗಳಲ್ಲಿ ಪಡಿಮೂಡಿಕೊಂಡಿದೆ – ಈ ಮೂಲಕ

**'ಈ ಜಗತ್ತಿಗೇ ಮಾತೆಯಾಗಿರುವ (ಜಗನ್ಮಾತಾ) ಮತ್ತು ಆ ಕಾರಣವನ್ನು**
**ಆ ಶಬ್ದಬ್ರಹ್ಮವನ್ನೇ ಸ್ವರೂಪವನ್ನಾಗಿಸಿಕೊಂಡವಳು ಅವಳು,**
**ಮತ್ತೆ ಯಾರ ಅಂಶ–ಅಂಶವೂ ಆನಂದಮಯವಾಗಿದೆಯೋ ಅವಳೇ ಜಗನ್ಮಾತೆ.**

**ಅಗಣಿತ ಜೀವ–ಸಂಕುಲಕ್ಕೆ ಮಾತೆಯಾಗಿರುವವಳು,**
**ಸೃಷ್ಟಿಗೊಳಿಸಲೆನೆ. ಪಾಲನೆಗೊಳಿಸಲೆನೆ ಮತ್ತು ಲಯಗೊಳಿಸುವ ಸಲುವಾಗಿ**
**ಕಮಲದಿಂದ ಉದಿತಗೊಂಡವನ, ವಿಷ್ಣುವಿನ ಮತ್ತು ಶಿವನ ಸ್ವರೂಪವನ್ನು**
**ಸೃಷ್ಟಿಸಿದವಳು ..**

**ನಿನ್ನದೇ ಈ ಕಲೆಗಲೇ ಈ ಜಗತ್ತಿಗೆ ಕಾರಣಸ್ವರೂಪದಲ್ಲಿ ಆದಿಸ್ವರೂಪದ**
**ಬೀಜಭೂತಗಳಾಗಿವೆ,**
**ಆದರೂ ನಿನ್ನ ಕಲೆಗಳೆಲ್ಲವೂ ತಾರುಣ್ಯಪೂರ್ಣವಾಗಿಯೇ ನಿರಂತರವಾಗಿವೆ.**

**ಪರ್ವತರಾಜನ ಪುತ್ರಿಯಾಗಿ ನಿನ್ನ–ಕಲೆಗಳೆಲ್ಲ ಇದ್ದರೂ,**
**ನೀನು ಮಾತ್ರ ಸದಾ ಸುಕೋಮಲ ಸ್ವರೂಪದ ಕಲಾಪೂರ್ಣೆಯಾಗಿ ಇರುತ್ತೀಯಾ.**
**ಸರ್ವ ವೇದಗಳ ಮಾತೆಯಾಗಿ ನಿನ್ನ ಕಲೆಯು ಅಭಿವ್ಯಕ್ತಗೊಂಡಿದ್ದರೂ,**
**ಅವರೆಲ್ಲರೂ ನಿನ್ನನ್ನು ಅರಿತುಕೊಳ್ಳಲು, ವಿವರಿಸಲು ಸಾಧ್ಯವಾಗಿಲ್ಲ,**
**ಮನು ಕುಲವೆಲ್ಲವೂ ಖಚಿತದಲಿ ನಿನ್ನನ್ನೇ ಧ್ಯಾನಿಸುತ್ತಿದ್ದರೂ ಸಹಿತ,**
**ಅವರ ಮನಸೆಂದಿಗೂ ನಿನ್ನನ್ನು ಮನಃಪೂರ್ವಕವಾಗಿ ಗ್ರಹಿಸಲು ಸಾಧ್ಯವಾಗಿಲ್ಲ."**

**"ತಂತ್ರಸಾರ"** ಗ್ರಂಥದ ತಾಂತ್ರಿಕ ಸಂಕಲನಗಳಿಂದ ಈ ಶ್ಲೋಕವನ್ನು ಆಯ್ದುಕೊಳ್ಳಲಾಗಿದೆ ಎಂದು ಇಲ್ಲಿ ಉಲ್ಲೇಖಿಸಲಾಗಿದೆ. ಇದರ ಪ್ರಾರಂಭವಂತೂ ಸಂಪೂರ್ಣವಾಗಿ ಪರಮೋಚ್ಚವಾದ ಅರ್ಥವ್ಯಾಪ್ತಿಯನ್ನೇ ಹೊಂದಿದೆ. ಅದೂ ದೇವಿಯ ಮಹತ್–ಸಂಕೇತವಾಗಿಯೇ ಇಲ್ಲಿ ಪೂರ್ಣತೆಯಲ್ಲಿ ಅಭಿವ್ಯಕ್ತಗೊಂಡಿದೆ. ಇದರ ಮಂಗಳ ಭಾಗವಂತೂ ಆ ದೇವಮಾತೆಯ ಸಗುಣ–ರೂಪಾರಾಧನೆಯ ಮೂಲಕವೇ ಸ್ವಯಂ–ಭಾವವನ್ನು ಸಂಪೂರ್ಣವಾಗಿ ಪರಿಹರಿಸಿಕೊಂಡು ಸರ್ವಸ್ವವೂ ಅವಳಲ್ಲಿ ಒಂದಾಗುವ ವಿವರಗಳಿವೆ. ಇದು ಇಡೀ ತಾಂತ್ರಿಕ ವ್ಯವಸ್ಥೆಯು ಹೊಂದಿದ ತನ್ನದೇ ಆದ ವಿಶಿಷ್ಟ–ಉದಾರತೆಯಿಂದಾಗಿ, ಅದು ಹೊಂದಿರುವ ಅದರದೇ ಆದ ಅಭೀಪ್ಸೆಯ ಪ್ರಕಾರ ಇರುವ ಅನೇಕಾನೇಕ ಮಹತ್ತರವಾದ ಪ್ರಯತ್ನಗಳಲ್ಲಿ ಸಾಗಿದ್ದರೂ ಸಹಿತ, ಆ ದೈವತ್ವದ ಸ್ವರೂಪವನ್ನು ಅಭಿವ್ಯಕ್ತಿಯಾಗಿರುವ (ಸಗುಣವನ್ನು) ಸಾಕಾರವನ್ನು ಮತ್ತು ಇನ್ನೂ ಅಭಿವ್ಯಕ್ತಗೊಳ್ಳದ ರೂಪಧಾರಣೆಗೊಳ್ಳದ ನಿರಾಕಾರವಾಗಿರುವ (ನಿರ್ಗುಣತ್ವ) ಅದನ್ನು ಸ್ಪರ್ಶಿಸಿ ಒಂದಾಗಲು ಇನ್ನೂ ಆರಾಧನಾಪೂರ್ಣ ಪ್ರಯತ್ನ, ಆತ್ಮಾನುಶಾಸನ ಮತ್ತು ಜ್ಞಾನವನ್ನು ಏಕಾಕಿಯಾಗಿಯೇ ಸಾಗುವ ಮಾನವನ ಜೀವವು ಪಡೆದುಕೊಳ್ಳಬೇಕಿದೆ, ಪಥದಲ್ಲಿ ಸಾಗಬೇಕಿದೆ.

---

ವಿವರಗಳಿಗೆ ಶ್ರೀ ಅರವಿಂದರ ಸಮಗ್ರ ಸಂಪುಟ 1.

# ತ್ರಾಟಕ ಸೂರ್ಯ

**– ಪುಟ್ಟು ಕುಲಕರ್ಣಿ**

**'ಅಮಾವಾಸ್ಯಾ ತ್ರಯಾಸ್ಪರ್ಶಾ'** ಎನ್ನುವದೇ ಮೂಲ ಮಂತ್ರವಲ್ಲವೇ? ಅಮಾವಾಸ್ಯೆ ಎಂದರೆ ಕಾಳಿಮಾತೆಯ ದಿನವೂ ಹೌದು, ಹೀಗಾಗಿಯೇ ನನಗೂ ಅಷ್ಟೇ ಶುಭಕಾರಿಯಾದ ದಿನ. **'ತ್ರಯಾಸ್ಪರ್ಶಾ'** ಎನ್ನುವ ಮುಹೂರ್ತವು ಪೂರ್ವನಿರ್ಧರಿತದಂತೆಯೇ, ನನ್ನ ಯೋಗ ಪಥದಲ್ಲಿ ಮಹತ್ವಪೂರ್ಣವಾದ ಪ್ರಗತಿಯನ್ನು ಸಾಧಿಸುವ ಕ್ಷಣ. ಈ ಕ್ಷಣಕ್ಕಾಗಿಯೇ ನಾನು **ಬಿರಸಾಲ** ಕಡೆಗೆ ಪಯಣ ಬೆಳೆಸಿದೆ. ಕಲಕತ್ತೆಯಿಂದ ಸರಿಯಾಗಿ ನೂರು ಮೈಲುಗಳು! ಸ್ಟೀಮರ್‌ದಲ್ಲಿಯೇ ಪ್ರಯಾಣ ಮಾಡುವದೆಂದು ನಿರ್ಧರಿಸಿಕೊಂಡೆ. ಸುದೀರ್ಘವಾಗಿ ಇರುವ ಈ ಜಲದಾರಿಯಲ್ಲಿ ಎರಡೂ ದಂಡೆಗಳಿಗೆ ಸಂಪರ್ಕ ಕಲಿಸುತ್ತಾ, ಜೀವನಾಡಿಯಾಗಿಯೇ ಇದ್ದ ಸ್ಟೀಮರ್ ಇಡೀ ವಂಗನಾಡನ್ನೇ ತನ್ನೊಡಲಿನಲ್ಲಿ ತುಂಬಿಕೊಂಡು, ಭಾರಕ್ಕೋ ಆಥವಾ ಮುಂದೆ ಸಾಗಲೋ ದೀರ್ಘ ಉಸಿರು ಬಿಡುತ್ತದೆಯೋ ಎನ್ನುವಂತೆ ಶಬ್ದ ಮಾಡುತ್ತಲೇ ಸಾಗುತ್ತಿತ್ತು. ಒಳಗುದಿ ಏನಿದೆಯೋ ಎಲ್ಲವನ್ನೂ ಹೊರಹಾಕುತ್ತಿದ್ದಂತೆ ಹೊಗೆ ಕೊಳಿವೆಯ ಮೂಲಕ ತನ್ನ ದುಗುಡವನ್ನು ಹೇಳಿಕೊಳ್ಳುತ್ತಿದೆಯೋ ಎಂದು ಯೋಚಿಸಿದೆ. ಒಮ್ಮೆ ನನ್ನ ಯೋಚನೆಗೆ ನನಗೇ ನಗು ಬಂದು, ಮುಖದ ಮೇಲೆ ಕಿರುನಗೆಯಾಗಿ ಮರೆಯಾಯಿತು. ದೀರ್ಘ ಪ್ರಯಾಣವೇ ಇದ್ದರೂ ಅಲ್ಲಿಗೆ ಹೋಗಲೇಬೇಕೆಂಬ ಅಭೀಪ್ಸೆ ಮಾತ್ರ ದಿನೇ ದಿನೇ ಹೆಚ್ಚುತ್ತಲೇ ಇತ್ತು. ಅಲೀಪುರ ಸೆರೆಮನೆಯಿಂದ ಹೊರಗೆ ಬಂದು ಇಂದಿಗೆ ಒಂದು ವರ್ಷ ಒಂದು ತಿಂಗಳೇ ಆಗಿದೆ. ದಾರಿಯುದ್ದಕ್ಕೂ ಕಳೆದ ಒಂದೆರಡು ವರ್ಷಗಳ ಘಟನೆಗಳು ಕಣ್ಮುಂದೆ ಮತ್ತೆ ಮತ್ತೆ ಕಾಣುತ್ತಾ ಸಾಗಿದವು. ಸೆರೆಮನೆಯಿಂದ ಹೊರಬಂದು ನಾನು ಸ್ವತಂತ್ರನಾದರೂ, ನನ್ನ ಸುತ್ತಲಿದ್ದ ಬಂಧು–ಬಳಗ ಮಾತ್ರ ತಿರಸ್ಕಾರದ ಬಂಧನದಿಂದ ಹೊರಗೆ ಬಂದಂತಿರಲಿಲ್ಲ, ಅಥವಾ ನನ್ನ ಬದುಕೇ ಮುಳುಗಿಹೋಯಿತೋ ಎನ್ನುವಂತಹ ಭ್ರಮೆಯಲ್ಲಿ ಇದ್ದರೂ ಇರಬಹುದು, ಡಾಕ್ಟರ್ ಕೃಷ್ಣಧನ ಘೋಷರ ಮಗನಾಗಿ, ಉನ್ನತ ವಿದ್ಯಾಭ್ಯಾಸ ಮಾಡಿದ್ದೂ ಅಲ್ಲದೇ, ಅದನ್ನೂ ಪೂರ್ತಿಯಾಗಿಸದೇ ಇದ್ದಾಗಲೇ ನನ್ನ ಬಗೆಗೆ ಈ ತಿರಸ್ಕಾರ ಅಂಕುರ ಪಡೆದುಕೊಂಡಿರಬೇಕು. ಅದೂ ಭಾರತದ ಬದುಕು ಎಂದಿಗೂ ಕಾಣದ ನವನವೀನ ಜೀವನ ಶೈಲಿಯ, ಪಾಶ್ಚಾತ್ಯ ಸಂಭ್ರಮದ ಅಬ್ಬರದ ಸುಳಿಗೆ ಎಲ್ಲರೂ ಸಿಲುಕಿಕೊಂಡವರೇ. ಎಲ್ಲರಿಗೂ ಈ

ರೀತಿಯ ಜೀವನ ಎಂದರೆ ಸ್ವರ್ಗಸುಖವಾಗಿತ್ತು. ಇಂಗ್ಲಂಡನ್ನಿಂದ ಇಲ್ಲಿಗೆ ಬಂದ ಮೇಲೆ ಅದೃಷ್ಟವೇ ಒಲಿದಂತೆ ಲಭ್ಯವಾದ ಬಡೋದಾ ಸಂಸ್ಥಾನದ ಪ್ರಮುಖ ಹುದ್ದೆ ದೊರೆತಾಗ, ಕೊಂಚ ಗೌರವ ಕಂಡರೂ, ಇದೀಗ ಆ–ಸ್ಥಾನವನ್ನೂ ತೊರೆದಿದ್ದೇನೆ ಎಂದು ಗೊತ್ತಾದಾಗ, ಅವರೆಲ್ಲರ ದೃಷ್ಟಿಯಲ್ಲಿ ನಾನು ಹೇಗೆ ಕಂಡಿರಬಹುದು? ಒಮ್ಮೊಮ್ಮೆ ಇದನ್ನೆಲ್ಲ ಯೋಚಿಸಲೇಬಾರದು ಎಂದುಕೊಂಡರೂ, ಈ ಘಟನೆಗಳು ನನ್ನನ್ನು ಯಾವ ಪಥದೆಡೆಗೆ ಕೊಂಡೊಯ್ಯುತ್ತಿವೆ ಎನ್ನುವ ಸುಳಿವು ಸಿಕ್ಕದ್ದರಿಂದ, ಅವರೆಲ್ಲರ ಅಭಿಪ್ರಾಯಕ್ಕೆ ಏನನ್ನೂ ಪ್ರತಿಕ್ರಿಯಿಸಿರಲಿಲ್ಲ. ಈಗಂತೂ ನನ್ನ ಗುರಿ ನನಗೇ ಸುಸ್ಪಷ್ಟವಾಗಿದೆ. ಅದೇ ಪಥದಲ್ಲಿಯೇ ಮುನ್ನಡೆಯುದಷ್ಟೇ ನನ್ನ ಕಾರ್ಯವೆಂದು ನಿರ್ಧರಿಸಿಕೊಂಡೇ, ಈ ಪಯಣ ಪ್ರಾರಂಭಿಸಿದೆ.

ಬಳಗವೇನೋ ಆ ಪಶ್ಚಿಮದ ಭ್ರಮೆಗೆ ಬಲಿಯಾಗಿರಬಹುದು, ಇನ್ನುಳಿದ ಚಿಂತಕರ ವಲಯಕ್ಕೇನಾಗಿದೆ? ಇಡೀ ಭಾರತವೇ ಆತ್ಮರಹಿತವಾಗಿ ಬದುಕಿನ ನಾಟಕ ನಡೆಸುತ್ತಿದೆಯಲ್ಲ? ಅಲೀಪುರ ಸೆರೆಮನೆಯಲ್ಲಿದ್ದಾಗ ದರ್ಶನವಾದ ಕೃಷ್ಣ ಚೈತನ್ಯದ ಜೊತೆಗೆ ನನ್ನ ಆತ್ಮ ನಡೆಸಿದ ಸಂವಾದ, ಜೊತೆಗೆ ರಾಮಕೃಷ್ಣರ ಶಿಷ್ಯ ವಿವೇಕಾನಂದರೂ ಚಿದ್ಭಾವದಲ್ಲಿಯೇ ನೀಡಿದ್ದ ಸಲಹೆಯೂ ಸದಾ ಗುರಿಯತ್ತಲೇ ಸಾಗುವಂತೆ ಮಾರ್ಗದರ್ಶನ ಮಾಡುತ್ತಿದೆ. ಜೊತೆಗೆ ನನ್ನ ಚಿತ್ತದಲ್ಲಿಯೂ ಸ್ಥಾಯಿಯಾಗಿಯೇ ಇದ್ದದ್ದರಿಂದ, ನನ್ನಲ್ಲಿ ಯಾವುದೇ ಗೊಂದಲಗಳೂ ಮೂಡಲಿಲ್ಲ, ಮೂಡಲು ಅವಕಾಶವನ್ನೇ ಕೊಡುತ್ತಿರಲಿಲ್ಲ.

ಅಲೀಪುರ ಕೇಸ್ ವಿಚಾರಣೆಯ ಸಮಯದಲ್ಲಿ ನಾನು ಸಂಪೂರ್ಣ ನಾನಾಗಿರಲಿಲ್ಲ. ಸರ್ವಸ್ವವೂ ಕೃಷ್ಣನೇ ಆಗಿರುವ ದರ್ಶನವಾದ ಮೇಲೆ, ನ್ಯಾಯಾಲಯದಲ್ಲಿ ಏನೇ ನಡೆದರೂ ನಿರ್ಲಿಪ್ತ ಭಾವದಲ್ಲಿಯೇ ಸ್ವೀಕರಿಸುವ ಮನೋಭೂಮಿಕೆಯೂ ನಿರ್ಮಾಣಗೊಂಡಿತ್ತು. ಆದರೆ ಕೃಷ್ಣನೂ ಸಹಿತ ಭಾರತದ ಆತ್ಮಕ್ಕೆ ಅಂಟಿಕೊಂಡಿರುವ ಕ್ಲೈಬ್ಯವನ್ನು ಹೋಗಲಾಡಿಸಲು ಪರಿಶ್ರಮ ಪಡುತ್ತಿದ್ದಾನೆ ಎನ್ನುವದು ಅರಿವಾದಾಗ, ನಾನು ಇದೀಗ ಅನುಭವಿಸುತ್ತಿರುವ ಎಲ್ಲ ಕಷ್ಟಗಳು ಏನೂ ಅಲ್ಲ ಎನಿಸಿತು. ಭಗವಂತನೇ ಪರಿಶ್ರಮದಿಂದ ಹೋಗಲಾಡಿಸಬೇಕಾದ, ಜಡಗಟ್ಟಿರುವ ಹಂತದ ಮೌಢ್ಯದಲ್ಲಿ ಸಮುದಾಯ ಮುಳುಗಿದೆ.

ಆ ಪರಮಾತ್ಮ ಅಭಿಲಾಷೆಯಾದರೂ ಏನು? ಎಂದಿಗೂ ಹತಾಶೆಗೊಳ್ಳಬೇಡ.. ಹತಾಶೆ ಬೇಡವೇ ಬೇಡ ಎಂದಲ್ಲವೇ? ನಿರಾಶೆಯ ಪರಾಕಾಷ್ಠೆಯೇ ಹತಾಶೆಯಾಗಿ

ವ್ಯಕ್ತಿತ್ವದ ನಾಶವಾಗುತ್ತದೆ ಎಂದಲ್ಲವೇ ತಿಳಿಸಿದ್ದು, ಈ ಹತಾಶೆಯನ್ನು ಜಯಿಸುವ ಆತ್ಮಶಕ್ತಿಯು ಪ್ರಜ್ವಲನಗೊಂಡಲ್ಲಿ ಅದೇ ನವೀನ ಸೃಷ್ಟಿಗೆ ಕಾರಣವಾಗುತ್ತದೆ ಎಂದು ತಿಳಿಸುತ್ತಲೇ ಇದೇ ನಿಯತಿಯೂ ಆಗಿದೆ ಎನ್ನುವ ವಾಣಿ ಸದಾ ಭರವಸೆಯ ಪಥವನ್ನೇ ರೂಪಿಸುತ್ತ ಬಂದಿತು.

ಅಲ್ಲಿ ದರ್ಶಿಸಿದ್ದು ವಾಸ್ತವವೇ? ಸ್ವಪ್ನವೇ? ಕಾಣ್ಕೆಯೇ? ಇವೆಲ್ಲವೂ ಸಂಯೋಗಗೊಂಡು ಸಾಕಾರವಾದ 'ದರ್ಶನವೇ?', ಏನೇ ಇರಲಿ ಅದು ನನ್ನ ಆತ್ಮದ ಸ್ಪಂದನವಾಗಿಯೇ ಇದ್ದುದರಿಂದ, ಸೆರೆಮನೆಯ ಆ ಬಂಧನದ ಪಂಜರದಲ್ಲಿ ಬರೆಯಲೂ ನನಗೆ ಅವಕಾಶವಿರಲಿಲ್ಲ. ಅದೆಷ್ಟೋ ಸಂಗತಿಗಳನ್ನು, ಹೀಗೆಯೇ ಆತ್ಮಗತವಾಗಿಸಿಕೊಂಡೇ, ಆಗಾಗ ಲೇಖನ ಸ್ವರೂಪ ಕೊಡುತ್ತಿದ್ದೇನೆ, ಆ ಘಟನೆಯನ್ನೇ ಪುನರಪಿ ಸ್ಮರಣೆಗೆ ತಂದುಕೊಂಡೆ, ಅಲ್ಲಿ ಕಂಡ ಶ್ರಾವ್ಯಗೊಂಡ ಜೊತೆ ಸ್ಪಂದಗೊಂಡ ವಿಷಯವನ್ನು ಮತ್ತೆ ಲಿಖಿತಗೊಳಿಸಲು ಅನುವಾಗುತ್ತಿದ್ದಂತೆ, ಲೇಖನಿಯು ತಾನೇ ತಾನಾಗಿ ಅಕ್ಷರಗಳಲ್ಲಿ ಶಿಲ್ಪಗೊಳಿಸುತ್ತ ಸಾಗಿತು, ರಜತ ಪವನದ ಸೂತ್ರಗಳಲ್ಲಿ ಈ ಅಭಿಲಾಶೆಯ ಕುರಿತು ಸ್ವಪ್ನ ಮಾಲೆಗಳನ್ನು ಹೆಣೆದು ನಿರ್ಮಿಸಿಕೊಂಡ ಈ ನಿರ್ಮಿತಿಯು ಆ ಸ್ವರ್ಣ ಮತ್ತು ಈ ನೀಲದ ಮಧ್ಯದಲ್ಲಿಯೇ ಪೋಣಿಸಲ್ಪಟ್ಟಿದೆ. ಇಲ್ಲಿ ಸ್ವರ್ಣವು ವ್ಯೋಮಸ್ಥಿತವಾಗಿರುವ ಪರಮ ದೇವನ ಕೃಪೆಯಾಗಿದ್ದು, ಈ ನೀಲವೆನ್ನುವದು ಮಾನವನ ಹೃದಯದಲ್ಲಿ ಸ್ಥಿತವಿರುವ ಅನಾಹತದ ವರ್ಣವಾಗಿದೆ. ಮಾನವನ ಹೃದಯ ಮತ್ತು ದೇವನ ಇಚ್ಛೆ ಎರಡೂ ಒಂದೇ ಶ್ರುತಿಯಲ್ಲಿ ಮಿಡಿದಾಗ, ಅಲ್ಲಿ ಸೃಷ್ಟಿಯಾಗುವದು ಭವ್ಯ ಹಾಗು ದಿವ್ಯತ್ವವೇ ಆಗಿರುತ್ತದೆ. ಈ ರೀತಿಯ ಕೋಮಲ ಸ್ವರೂಪದಲ್ಲಿ ಅವುಗಳನ್ನು ಆವರಣಗೊಳಿಸಿ, ಅಲ್ಲಿಯೇ ಪ್ರತಿಸ್ಥಾಪಿಸುತ್ತಾನೆ, ರತ್ನಖಚಿತದಲ್ಲಿ ಹೊಳೆಯುತ್ತಿರುವ ಸ್ವಪ್ನಗಳನ್ನು ನಾನು ಕಂಡಿರುವೆನಾದರೂ, ಅವೆಲ್ಲವೂ ನೀನೇ ನನಗಿತ್ತಿರುವ ಕೃಪೆಯಾಗಿವೆ ಎಂದು ನಮ್ರತೆಯಲ್ಲಿಯೇ ಸಮರ್ಪಣೆಯನ್ನು ತೋರುತ್ತೇನೆ. ಮೃಣ್ಮಯದ ಬದುಕನ್ನು ಮತ್ತು ಸ್ವರ್ಗದ ಸಂತೋಷವನ್ನು ಸಂಪರ್ಕಿಸಲು ಇಂದ್ರಚಾಪವೊಂದನ್ನು ರೂಪಿಸಿಕೊಳ್ಳಲೆಂದೇ ನನ್ನೆದೆಯು ಸದಾ ಮಿಡಿಯುತ್ತಿದೆ. ಈ ಮೂಲಕ ಬಾನು ಹಾಗು ಬುವಿಗೆ ಸದಾ ಸಂಪರ್ಕವೊಂದನ್ನು ರೂಪಿಸಿದಂತಾಗುತ್ತದೆ. ವಿರಾಟ್ ವಿಶ್ವದ ನಿಯತಿ ನಿಗದಿತ ಸೂತ್ರದ ತಾಳದಂತೆಯೇ ಈ ಕ್ಷೀಣವಾಗಿರುವ ಗ್ರಹದಲ್ಲಿ– ಬುವಿಯಲ್ಲಿ – ಈ ಸ್ವಪ್ನವನ್ನು ಬಿತ್ತುತ್ತ, ಅದು ಅಂಕುರಗೊಂಡು, ಅನಂತತೆಯ ಆ ಚಿತ್ತವೃತ್ತಿಗಳೂ ಇಲ್ಲಿ ಸದಾ ಸ್ಪಂದಗೊಳ್ಳುವಂತೆ ರೂಪಿಸಬೇಕಾಗಿದೆ.

ಆದರೆ, ಈ ರೀತಿಯ ಉದಾತ್ತವಾಗಿರುವ ನಮ್ಮ ಸ್ವರ್ಗಗಳು ನಮ್ಮಿಂದ ದೂರ ದೂರ ದೂರದಲ್ಲಿವೆ; ಪರಿಶುಭ್ರತೆಯ ಪರಮೋಚ್ಚ ಹಂತದಲ್ಲಿವೆ. ಅವುಗಳ ಎಡೆಗೆ ನಾವೀಗ ಸಾಗಬೇಕಾಗಿದೆ. ಈ ಪಾರಲೌಕಿಕದ ಕೃಪಾ ಕೊಡುಗೆಯಲ್ಲಿ ಭಂಗುರತೆ ಎನ್ನುವದು ಇರುವದಿಲ್ಲ. ಅಲ್ಲಿರುವ ಆ ವೈಭವದ ಭರತದ ಜೊತೆಗೆ, ಆ ತೇಜತ್ವದ ಜೊತೆಗೆ, ನಮ್ಮ ನೆಳಲೂ ಸಹಿತ ನಿಲ್ಲಲು ವಿಫಲವಾಗುತ್ತದೆ. ಅದರ ಮೂಲದ ತಲಕ್ಕೆ ತಲುಪಲೆನೆ ಇನ್ನೂ ನಾವು ಸಫಲತೆಯನ್ನು ಸಾಧಿಸಲು ವಿಫಲರಾಗಿದ್ದೇವೆ. ಮಾನವನ ಸೀಮಿತತನದ ಹಾಗೂ ಅವನ ಈ ಕ್ಷೀಣ ಸ್ಥಿತಿಯನ್ನು ಅರಿತುಕೊಂಡ 'ಆ ದೇವನು' ತನ್ನದೇ ಸ್ವರ್ಗಗಳನ್ನು ಇಲ್ಲಿಗೆ ಅವತರಣಗೊಳಿಸಿ ತರುತ್ತಾನೆ. ಈ ಮೃಣ್ಮಯದ ಬದುಕಿಗೆ ತಾನೇ ತಾನಾಗಿ ಸದಾ ರಕ್ಷೆಯ ಆವರಣವಾಗುವಂತೆಯೇ ರೂಪುಗೊಳಿಸುತ್ತಾನೆ; ರೂಪುಗೊಳ್ಳುತ್ತಾನೆ. ಈ ಮೂಲಕ ಭೂ ಬದುಕಿನ, ಮಾನವನ ಎಲ್ಲ ಕಷ್ಟಗಳನ್ನೂ ತಾನು ಧರಿಸಿಕೊಂಡು, ಅವುಗಳಿಗೆ ಸೂಕ್ತ ಪರಿಹಾರ ಮತ್ತು ಶಾಂತಿಯನ್ನು ಒದಗಿಸುತ್ತಾ, ಈ ಶೋಕ ತುಂಬಿರುವ ಪಥದಲ್ಲಿ 'ತೋಷದುಂಬಿದ ಜೀವನ'ವನ್ನು ತುಂತುಂಬಿಸುತ್ತ ಬರುತ್ತಾನೆ. ಆದರೆ ಇಲ್ಲಿರುವ ಮಾನವನ ಗತಿ–ಪ್ರಗತಿಯಲ್ಲಿ ಆಗಿರುವ ವಿಚಲನೆಯನ್ನು ಕಂಡ ದೇವನೂ ಸಹಿತ ಇಲ್ಲಿಗೆ 'ಇಳಿದು ಬಂದ' ಮೇಲೆ, ಇಲ್ಲಿನ ಸ್ಥಿತಿಯನ್ನು ಕಂಡು ಕ್ಷಣಕಾಲ ವಿವಶವಾಗುತ್ತಾನೆ. ಅವನೂ ಸಹಿತ ಈ ಮೃಣ್ಮಯದ ಗತಿಗೆ ಸಿಲುಕಿ ಪತನಗೊಂಡಂತಾಗಿದ್ದಾನೆ.

ಮಾನವ ಕುಲವು ಅನಭಿಜ್ಞತೆಯಲ್ಲಿಯೇ ಸಿಲುಕಿಕೊಂಡು, ಸದಾ ಪರಿಶ್ರಮಿಸುತ್ತಲೇ, ಪ್ರಗತಿ ಹೊಂದಿದ್ದೇನೆ ಎಂದು ಭಾವಿಸುತ್ತಲೇ, ತನ್ನ ಅನುಭವಗಳನ್ನು ತಿರುಚು ತಿರುಚುತ್ತಲೇ, ಮತ್ತೆ ಜನನ–ಮರಣಗಳ ಸುಳಿಗೆ ಸಿಲುಕಿ ಅಲ್ಲಿಯೇ ಪರಿತಾಪ ಪಡಬೇಕಾಗಿದೆ. ಇಂತಹ ವಿಪರೀತ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದ್ದರೂ, ಅಲ್ಲಿಯೇ ಪರಿಹಾರದ ಪಥವೂ ಇರುತ್ತದೆ. ಆ ಆಳದಲ್ಲಿಯೇ ಮತ್ತೂ ಖನನದಲ್ಲಿ ತೊಡಗಿಕೊಳ್ಳುವದರಿಂದಾಗಿ, ಅಲ್ಲಿ ಉತ್ಪತ್ತಿಯಾಗುತ್ತಿರುವ ಧೂಳು – ಕತ್ತಲೆಯ ಜೊತೆಗೆ ಮಲಿನತೆಯೇ ತುಂಬಿರುವ ಕೆಸರಿನಲ್ಲಿಯೇ ಸುದೀರ್ಘವಾಗಿ ಸಾಗಬೇಕಾಗಿದೆ.

ಇಂತಹ ವಿಷಣ್ಣತೆಯ ಪರಮಾವಧಿಯಲ್ಲಿಯೇ, ಇಲ್ಲಿಂದ ಮುಕ್ತಿಗೊಳ್ಳುವ ಸಲುವಾಗಿ ಇರುವ ಅಭೀಪ್ಸೆಯಿಂದಾಗಿ, ಆ ಊರ್ಧ್ವದಲ್ಲಿರುವ ಸ್ವರ್ಣ–ಸಲಿಲದಾ ನಾದಮಯ ಗಾನಕ್ಕಾಗಿ ಆಧಾರವೊಂದನ್ನು ಅರಸಿಕೊಳ್ಳುತ್ತೇನೆ. ಆ ಚಿರಂತನದ, ಆ

ನಿತ್ಯತ್ವದ ಅಗ್ನಿಯು ಶಾಶ್ವತವಾಗಿ 'ಇಲ್ಲಿಯೂ' ನೆಲಸಲೆಂದು, ಅದಕ್ಕಾಗಿ ಚಿರನೆಲೆಯನೊಂದನ್ನು ಅರಸುತ್ತೇನೆ. ಈ ಜಂಜಡದ ಜಡದ ತಮಸ್ಸಿನಲ್ಲಿ ಬಳಲುತ್ತಾ ಬಳಲುತ್ತಾ ಇದ್ದರೂ ನಾನು ಸದಾ ಬೆಳಕಿಗಾಗಿ ಪರಿಶ್ರಮಿಸುತ್ತಿರುವೆ. ಆ ದಿವ್ಯಾಗ್ನಿಯನ್ನು ಈ ಮನುಜ ನೆದೆಯಲ್ಲಿಯೂ ಸ್ಥಾಪಿಸಲು ಮತ್ತು ಅದು ನಿತ್ಯತ್ವದಲ್ಲಿ ತೇಜವಾಗಿಯೇ ಇರಲು ಅಭೀಪ್ಸೆ ಹೊಂದಿರುವೆ. ಆದರೆ ಇದನ್ನರಿಯದ ಮನುಕುಲವು ಹಗೆಯ ದ್ವೇಷದೊಳಗೆ ಸಿಲುಕಿಕೊಂಡು, ನರಕವನ್ನೇ ಸೃಷ್ಟಿಸಿಕೊಂಡು ಬಳಲುತ್ತಿವೆ. ಈ ಜಗತ್ತು ಸೃಷ್ಟಿಯಾದಾಗಿನಿಂದಲೂ ಇವುಗಳೇಕೆ ಈ ರೀತಿಯಲ್ಲಿ ಇವೆ? ಇವೂ ಸಹಿತ ನನ್ನ ಕೊಡುಗೆಗಳೇ ಎನಿಸುತ್ತಿದೆ. ಇದಕ್ಕೆ ಕಾರಣವನ್ನರಸಿದಾಗ ಗೊತ್ತಾದದ್ದು, ಮಾನವನ ಮನಸ್ಸು ಅವನದೇ ಆಗಿರುವ ವನ್ಯ–ಜೀವಾತ್ಮದ (ಪಶು ಸಹಜ) ನಕಲಿನಲ್ಲಿಯೇ ಇರಲು ಸದಾ ಯತ್ನಿಸುತ್ತಿರುವದೇ ಆಗಿದೆ. ಮಾನವನು ತನ್ನ ವಾಂಛೆಗಳ ವಿಜಯ ಮಹೋತ್ಸವಕ್ಕಾಗಿ ಸದಾ ಆಶಿಸುತ್ತ–ಹಪಹಪಿಸುತ್ತ, ಅದಕ್ಕಾಗಿ ತನ್ನ ಅಂತರಂಗದಲ್ಲಿಯೇ ಬೇತಾಳನನ್ನೂ ಆಹ್ವಾನಿಸಿಕೊಂಡು ಬದುಕುತ್ತಿದ್ದಾನೆ. ಅದೂ ಕ್ರೂರ ಬೇತಾಳವನ್ನೇ ಅಹ್ವಾನಿಸಿಕೊಂಡಿದ್ದಾನೆ. ಹೀಗಾಗಿ ದುಃಖಗಳು, ಪಾಪಗಳು, ಕ್ರೂರ ಕರ್ಮಗಳಲ್ಲಿಯೇ ಅನುರಕ್ತವಾಗಿ ಈ ಭವದ ನಿವಾಸಿಯಾಗಿದ್ದಾನೆ.

ಅವತರಣಗೊಂಡ ಈ ಸ್ವರ್ಗದ ದಿವ್ಯ ಜ್ವಾಲೆಯಿಂದ, ಆ ಕ್ರೂರ ಬೇತಾಳ ಮತ್ತು ಧೂಳಿಯೂ ಸಹಿತ ಥರಗುಟ್ಟಿ ಹಿಂದೆ ಸರಿಯತ್ತಿವೆ. ಅವುಗಳು ಮರೆಯಾದ ಕೂಡಲೇ ಅಲ್ಲಿ ಸರ್ವ ವಿಷಯಗಳಿಗೂ ಆನಂದಪೂರ್ಣವಾದ ಪಾವಿತ್ರ ಪರಮ ತೋಷವು ಪ್ರಾಪ್ತಿಯಾಗುತ್ತದೆ. ಆದರೆ ಮೃಣ್ಮಯದ ಅಂಶದಿಂದಾಗಿ ರೂಪಣೆಗೊಳ್ಳುವ ರಾಗಗಳ ಮತ್ತು ಸುಖಕ್ಕಾಗಿ ಅನಿವಾರ್ಯವಾಗಿರುವ ವೇದನೆಯನ್ನೂ ಹೊಂದ–ಬೇಕಾಗುತ್ತದೆ. ಜೀವನ ನಾಟಕದ ಅಂಕ ಅಂಕಗಳಲ್ಲಿ ಈ ರೀತಿಯ ಗತಿಯಲ್ಲಿಯೇ ಸಹನೆಯನ್ನೂ ಗಳಿಸಿಕೊಳ್ಳಬೇಕಾಗುತ್ತದೆ. ಮನುಕುಲವನ್ನು ಸದಾ ಆವರಿಸಿಕೊಂಡು ತನ್ನಲ್ಲಿಯೇ ಅಂತರ್ಗತಗೊಳಿಸಿಕೊಳ್ಳಲು ಅಂಧಕಾರವು ಸದಾ ದಟ್ಟೈಸಿಕೊಂಡೇ ಇರುತ್ತದೆ, ವ್ಯಾಪ್ತವಾಗಿಯೂ ಇರುತ್ತದೆ. ಆದರೆ ಅಲ್ಲಿ ಪ್ರತ್ಯಕ್ಷಗೊಂಡಿರುವ ಆ 'ದಿವ್ಯ ಜ್ಯೋತಿ'ಗೆ ಇದೀಗ ಇವರೆಲ್ಲರೂ ಆಹ್ವಾನವನ್ನು ನೀಡಿ ಸ್ವಾಗತಿಸಲು ತವಕದಲ್ಲಿದ್ದಾರೆ. ಆದರೆ ಅರೆಯರಿವಿನ ಸ್ಥಿತಿಯಲ್ಲಿ ಸಿಲುಕಿಕೊಂಡು, ಅದಕ್ಕೇ ದಕ್ಕುವ ಅರೆಬರೆಯ ಹೊಳಪಿಗೇ ಬೆರಗಾಗಿ, ಪಥದಲ್ಲಿ ಮುಗ್ಗರಿಸುವದೇ ಸಾಮಾನ್ಯವಾಗಿರುತ್ತದೆ. ಇಂತಹ ಮುಗ್ಗರಿಸುವಿಕೆಯು ಖಿನ್ನತೆಯನ್ನು ಮತ್ತು ಹತಾಶೆಯನ್ನು ತರುತ್ತದೆ. ಆದರೆ ಆ ಅಮರತ್ವದ ನೆಲೆಯಿಂದ ಆಗಮಿಸಿರುವ ಆ ಪರಮಾತ್ಮನು ತನ್ನದೇ

ಏಕತ್ವಗೊಳಿಸಲೆಂದು ಎರಕ ಹೊಯ್ಯುತ್ತಿರುತ್ತಾನೆ. ಈ ಎರಕವು ಸಂಪೂರ್ಣವಾಗಿ ಮಾನವನನ್ನು ದೇವತ್ವದ ಹಂತಕ್ಕೇ ಏರಿಸುವ ಭಾವದಲ್ಲಿಯೇ ಇರುತ್ತದೆ.

ಅಲ್ಪ ತೃಪ್ತಿಯಲ್ಲಿಯೇ ಪರಮ ಸಂತೋಷ ಕಾಣುವ ಮನುಜ ತನ್ನ ಆಶೆಯ ದೀವಟಿಗೆ ಅತ್ಯಂತ ಕ್ಷೀಣವಾಗಿದ್ದರೂ ಸಹಿತ ಅದನ್ನೇ ಬೆಳಗಿಸಲು, ಬೆಳಗಿಸಿದ್ದೇನೆಂದು ಪರಿಭಾವಿಸಿಕೊಂಡು ಬೀಗುತ್ತಾನೆ. ಅದು ಮೊದಮೊದಲಿನಲ್ಲಿ ಮುಂಚೂಣಿಯಲ್ಲಿ ಇದ್ದರೂ ವಿಫಲತೆಯ ಅಂಚನ್ನೇ ತೋರುತ್ತದೆ. ಬ್ರಹ್ಮಾಂಡವನ್ನೇ ಆಧರಿಸಿಕೊಂಡಿರುವ 'ಋತ'ದ ಅಂಶವೊಂದು ಮಾತ್ರ ಮಾನವನ ಸುವ್ಯಾಪ್ತ ಇಚ್ಛೆಯಾಗುತ್ತಿದ್ದಲ್ಲಿ, ಆಗ ಈ ತೀರ್ಥಯಾತ್ರೆಯಲ್ಲಿ ಇದುವು ತಾತ್ಕಾಲಿಕ ಧರ್ಮಛತ್ರವಾಗಿ ಇರುತ್ತದೆ. ಮಾನವನ ಸೀಮಿತತನದಿಂದಾಗಿ, ಸತ್ಯದ ಮೂಲವೇ ಋತ ಎನ್ನುವದನ್ನು ಅಲ್ಲಗಳೆಯುತ್ತಾನೆ. ಸರ್ವ ಕಾಂತಿಗಳ–ಜ್ಯೋತಿಗಳ ಪ್ರಕಾಶದ ಮೂಲವೇ ಆ ದಿವ್ಯ–ಪ್ರಕಾಶ ಎನ್ನುವದನ್ನೂ ಕಡೆಗಣಿಸಿಕೊಂಡು ಬಾಳಲು ಇಚ್ಛಿಸುತ್ತಾನೆ. ಇದುವರೆಗೂ ಅನಭಿಜ್ಞವಾಗಿರುವ ದೇವ ಗಣವನ್ನು ಆ ಕ್ರಂದದ ಮೂಲಕ ಆರಾಧಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ರಕ್ಕಸನ ಆಯ್ಕೆಯನ್ನು ಮಾಡಿಕೊಳ್ಳುವ ಸ್ಥಿತಿಗೆ ತಲುಪುತ್ತಾನೆ.

ಈ ರೀತಿಯ ಪ್ರಯತ್ನದಲ್ಲಿ ಲಭ್ಯಗೊಳ್ಳುವದೆಲ್ಲವೂ ಖಚಿತವಾಗಿಯೂ ಮತ್ತೆ ಮತ್ತೆ ಕೋರಿ ಪಡೆಯುವದೇ ಆಗಿರುತ್ತದೆ. ಆ ಅವಿರತದ ಪ್ರಯತ್ನಕ್ಕೆ ತಕ್ಕ ಫಲವಿರುತ್ತದೆ. ಇಲ್ಲಿ ಎದುರಾಗುವ ಎಲ್ಲ ಶತ್ರು ಭಾವಗಳನ್ನೂ ತುಂಡರಿಸಿಕೊಂಡು, ಅದಕ್ಕಾಗಿ ಇರುವ ಹೋರಾಟವೂ ಸಹಿತ ಸಮರ ಸ್ವರೂಪದ್ದೇ ಆಗಿರುತ್ತದೆ. ಪದೇ ಪದೇ ಇಂತಹ ಹೋರಾಟಗಳೂ ಇರುತ್ತವೆ. ಬಹುತೇಕವಾಗಿ ನಿಷ್ಫಲದ ಜೀವ–ಜೀವಗಳ ಚಿತ್ತದ ಪಥವೇ ಇಲ್ಲಿ ಮುಖ್ಯವಾಗಿರುತ್ತದೆ. ಈ ಸಂಗ್ರಾಮದಲ್ಲಿ ನನಗೆ ಸಾವಿರಕ್ಕೂ ಮಿಕ್ಕಿ ಗಾಯಗಳಾಗಿವೆ. ಅದರಲ್ಲೂ ದೈತ್ಯರದೇ ರಾಜಗಣದ ಮಂಡಳಿಯೇ ಆಕ್ರಮಣದ ಮುಂದಾಳತ್ವ ವಹಿಸಿ ನನಗೆ ಎದುರಾಗಿದೆ. ಇಂತಹ ಯಾವುದೇ ಅಡೆ–ತಡೆಗಳು, ಆಕ್ರಮಣಗಳು ಬಂದರೂ ನನ್ನ ಕಾರ್ಯವು ವಿರಾಮವನ್ನು ಬಯಸುವದಿಲ್ಲ. ಶಾಶ್ವತದ ಇಚ್ಛೆಯು ಈ ರೀತಿಯಲ್ಲಿ ಉಳಿಯ ಪೆಟ್ಟನ್ನಿತ್ತು ನನ್ನ ಚಿತ್ತವನ್ನು ಪ್ರತಿಮೆಯಾಗಿಸುತ್ತಿದೆ.

ನನ್ನ ಈ ಸಹನೆಯನ್ನು ಅಣಕು ಮಾಡುತ್ತಿರುವ ದಾನವರ ಜೊತೆ ಜೊತೆಗೆ ಮಾನವರೂ ಇರುವರು! ಕೇವಲ ಭ್ರಮಾಪೂರ್ಣ ಕಲ್ಪನೆಯ ಭಯಾನಕ ಮೂರ್ತಿಗಳಂತೆ ಅಭಿಲಾಶೆಗಳನ್ನು ಪರಿವರ್ತಿಸುವ ಹುನ್ನಾರಿನಲ್ಲಿದ್ದಾರೆ. ಸದ್ಯ

ಇದರ ಉಗ್ರ ಜ್ವಾಲೆಗಳು ಇಡಿ ಗಗನವನ್ನೇ ಆವರಿಸಿಕೊಂಡಿವೆ. ಅತ್ಯುಗ್ರವಾದ ಜ್ವಾಲೆಯು ಗುರುತು ಪತನದ ಸಂಕೇತವಾಗಿ ನೆಲೆಗೊಳ್ಳಲೆಳಸುತ್ತಿದೆ. ನಿರ್ಮಾಣಗೊಳ್ಳುವ ಕಾರ್ಯಗಳೆಲ್ಲವೂ ಮೃತಪ್ರಾಯವಾಗಿ ಇರಬೇಕೆಂಬುದೆ ಅವರ ಹಂಬಲವಾಗಿದೆ. ಆದರೆ ಇದನ್ನು ಸಂಪೂರ್ಣವಾಗಿ ತಡೆದು, ನಿಯಂತ್ರಿಸಿ ಇಲ್ಲಿ ಸ್ವರ್ಗೀಯ ನೆಲೆಯನ್ನು ಸ್ಥಾಪಿಸುವ ಸಲುವಾಗಿ ಸೂಕ್ತಿಗಳನ್ನು ರೂಪಿಸಿದ್ದೀಯ. ಆನಂದದ ಹಾಗೂ ಸ್ವರ್ಣಮಯ ಧಾಮವನ್ನು ಸೃಷ್ಟಿ ಮಾಡಿದ್ದೀಯ. ಇದೆಲ್ಲವನ್ನೂ ನಮಗಾಗಿ ನಿರ್ಮಿಸಿರುವೆ, ಆದರೆ ನಾವು ಇದನ್ನು ಗಮನಿಸದೇ ಪರಿತ್ಯಕ್ತರಂತೆ ಸಾಗುತ್ತಿದ್ದೇವೆ. ಚೇತನಾರಹಿತರಾಗಿ ಅದರದೇ ಸಾಗರದಲ್ಲಿ ಸಿಲುಕಿ ಮತ್ತೆ ಜೀವನದ ಗುಮ್ಮಟದ ಒಳಗೆ ಸಿಲುಕಿಕೊಂಡಿದ್ದೇವೆ. ಹೀಗಾಗಿ ನಮ್ಮದೇ ಆದ, ನಮಗಿರುವ ಈ ಬುವಿಯ ಬರಿ ತಮವೇ ತುಂಬಿದ ಕ್ಷೇತ್ರವನ್ನಾಗಿಸಿಕೊಂಡಿದ್ದೇವೆ. ನಮ್ಮದೇ ಕ್ಷೀಣ ಬಯಕೆಗಳ, ಅಲ್ಪ ತೃಪ್ತಿಗಳ ಬೇಗೆ ಸಿಲುಕಿ ಸಾಗುತ್ತಿದ್ದೇವೆ. ಇಂತಹ ವಿಷಣ್ಣ ಸ್ಥಿತಿಯಲ್ಲಿ ಆ ಗೂಢ ಬೆಳಕಿನ ಕಿರು ತೊರೆಯನ್ನಾದರೂ ಪಡೆದುಕೊಳ್ಳಲು ಸಾಧ್ಯವಾಗುತ್ತದೆಯೆ? ಅಥವಾ ಈ ರೀತಿಯಲ್ಲಿ ಪರೀಕ್ಷೆಗೊಳಪಡುತ್ತಲೇ ಸಾಗುವದೇ ದೇವನ ಇಚ್ಛೆಯೂ ಆಗಿದೆಯಾ? ಅಥವಾ ದೇವನ ಸಹನೆಯಾಗಿದೆಯಾ?

ಈ ಎಲ್ಲ ಗೊಂದಲಗಳನ್ನೂ ತೊಡೆದು ಹಾಕಲು, ಕತ್ತರಿಸಲೆಂದು ಸಿದ್ಧವಾಗಿ ಆಗಮಿಸಬೇಕಿದೆ. ಆ ರೀತಿಯ ವಿಚಲನದ ಕ್ರಮವನ್ನು ಖಚಿತವಾಗಿಯೂ ತಡೆಯಬೇಕಿದೆ. ಆಗ ಮಾತ್ರವೇ ನಮ್ಮ ಹೃದಯಗಳು ಮುಕ್ತತ್ವವನ್ನು ಪಡೆದುಕೊಳ್ಳಬಲ್ಲವು. ಆ ಹೊಣೆಗಾರಿಕೆಯಿಂದ, ಜೊತೆಗೆ ಅವನ ಭೀಮಶಕ್ತಿಯ ವೈಭವವನ್ನು ಆಹ್ವಾನಿಸುತ್ತಾ, ವ್ಯಾಪ್ತವೇ ಸ್ವರೂಪವಾಗಿರುವ ಶುಭ್ರ ಶಾಂತಿಯನ್ನು ನೆಲೆಗೊಳಿಸುವ ಸಲುವಾಗಿ ಕರೆಯನಿಡುವಾ.

ಜನನ–ಮರಣಗಳ ವಶವರ್ತಿಯಾಗಿರುವ ನನ್ನ ಹೃದಯದಲ್ಲಿಯೇ ಈಗಿದೋ ದೇವನ ವಾಸವಿದೆ. ಇದು ನನಗಿರುವ ಅದೃಷ್ಟ ಮತ್ತು ದೋಷಗಳ ಮಧ್ಯೆ ಮಲ್ಲಯುದ್ಧದಲ್ಲಿಯೇ ಪಕ್ವಗೊಳ್ಳಬೇಕಿದೆ. ಸಾಗಬೇಕಿರುವ ಪಥವೂ ಸಹಿತ ಬರಿ ಜವುಳು, ಕೆಸರು ತುಂಬಿ ಹಾಳು ಬಿದ್ದ ಪಥಗಳಾಗಿವೆ. ಈ ಪಥದ ಮೂಲಕವೇ ನಾಮರಾಹಿತ್ಯದ ನಿರ್ಮಲವನ್ನು ಪಡೆದುಕೊಳ್ಳಬೇಕಾಗಿದೆ. ಅದಕ್ಕಾಗಿ ನನ್ನೊಳಗಿನಿಂದಲೇ ಅಂತರಾತ್ಮದ ಧ್ವನಿ ಅಬ್ಬರಿಸಿ, 'ನಡೆ, ನಡೆ, ಯಾರೂ ನಡೆಯದಾ ಪಥವನ್ನು ಅರಸಿ ಮುಂದೆ ಸಾಗು. ಮತ್ತೂ ಆಳದಾಳಕ್ಕೆ ಆಳದಾಳಕ್ಕೆ ಖನನ ಗೈಯುತ್ತಾ ಅಲ್ಲಿರುವ ಆ ಘನದ ತಲಾತಲದ ಹಂತವನ್ನು ತಲುಪು.

ಅಲ್ಲಿರುವ ಆ ರೌದ್ರಪೂರ್ಣತೆಯ ವಾಸ್ತು ಶಿಲೆಯನ್ನು ನೀನು ಸ್ಪರ್ಶಗೊಳ್ಳುವವರೆಗೆ ಮುಂದೆ ಸಾಗು. ಇಲ್ಲಿ ಯಾವದೇ ಬೀಗ ಹಾಕಿದ, ಬಂಧನವನ್ನು ರೂಪಿಸುವ ಯಾವ ದ್ವಾರಗಳೂ ಇಲ್ಲಿ ಇಲ್ಲವೇ ಇಲ್ಲ. ಆ ದ್ವಾರಗಳು ಇದ್ದರೂ ಅವು ತಂತಾನೇ ತೆರೆದುಕೊಳ್ಳುವವರೆಗೂ ಮುಂದುವರೆ' ಎಂದು ಹೇಳುತ್ತಿದೆ.

ಆದರೆ ಒಂದು ಮಿಥ್ಯಾಭಿಮಾನವು ಈಗಾಗಲೇ ಬಿತ್ತಲ್ಪಟ್ಟಿದ್ದು, ಅದು ಸರ್ವ ವಸ್ತುಗಳ ಬೇರಿನಾಳ ಆಳದಲ್ಲಿಯೂ ಹುದುಗಿಕೊಂಡಿದೆ. ಇದು ಈಗ ಕಾಣುತ್ತಿದೆ. ಯಾಕೆ ಈ ರೀತಿಯಲ್ಲಿ ದೇವನ ಗೂಢ–ಪ್ರಶ್ನೆ ಇದೆ? ಏಕೆ ಈ ಸುಪ್ತಿ? ಮೇಲಾಗಿ ಇದಕ್ಕೆ ಧೂಸರದ ಸ್ಫಿಂಕ್ಸ ರಕ್ಷೆ ಕೂಡಾ! ಜೊತೆಗೆ ಆ ವ್ಯಾಲಸರ್ಪವೂ ತನ್ನ ಕ್ರೂರ ರೆಕ್ಕೆಗಳನ್ನು ಚಾಚಿ ರಕ್ಷೆಯನ್ನು ಒದಗಿಸುತ್ತಿದೆ?

ಈ ಎಲ್ಲ ಮಸುಮಸುಕು ಆವರಣಗಳು ವರ್ಣಮಯವಾಗಿದ್ದರೂ ನಾನೀಗ ಅವುಗಳನ್ನು ತೊರೆಯಲು ಶಕ್ತನಾಗಿದ್ದೇನೆ, ಜೀವ ಜೀವನದ ಅತೃಪ್ತತೆಯ ಉದಧಿಗಳನ್ನೇ ಯಶಸ್ವಿಯಾಗಿ ಈಜಿಕೊಂಡು ಮುನ್ನಡೆದಿದ್ದೇನೆ. ಆದರೂ ಈ ದುರ್ಗಮದ ಮಾರ್ಗದಲ್ಲಿ ಮೋಹದಲ್ಲಿಯೇ ಸಾಗಿ ತಲ್ಲೀನಗೊಂಡೆ, ಹೀಗಾಗಿ ಈ ಅಧೋಲೋಕದಾ ಬೆಡಗುಗಳಲ್ಲಿ ನಾನು ಬಲುಬೇಗ ಲೀನವಾಗುವಂತಾಯಿತು. ಹೀಗಾಗಿ ಈ ಜಡದ ಬುವಿಯ ಭೀತ ಹೃದಯದಲ್ಲಿ ನಾನು ಬಲದಲ್ಲಿ ನಿಂತು, ಅವಳ ಆ ಸ್ಥೂಲ–ತಮದ ಘಂಟಾನಾದವನ್ನು ಆಲಿಸಲು ಶಕ್ತನಾಗಿದ್ದೇನೆ. ಅವಳ ಯಾತನೆಯ ಮೂಲಗಳನ್ನು ಅವುಗಳ ಅಂಶಗಳನ್ನು ಕಾಣಲು ನಾನೀಗ ಸಮರ್ಥನಾಗಿದ್ದೇನೆ. ಸರ್ವಾಂತರಂಗದಲ್ಲಿಯೂ ನರಕ ಸೃಟಿಸುತ್ತಿರುವ ಆ ಘೋರ ಆಂತರ್ಯದ ಹೇತುವನ್ನು ನಾನಿಲ್ಲಿ ಕಂಡುಕೊಂಡಿದ್ದೇನೆ. ಇವುಗಳ ಜೊತೆಗೆ ನನ್ನ ಊರ್ಧ್ವದಲ್ಲಿ ಆ ವ್ಯಾಲಸರ್ಪದ ಮರ್ಮರದ ಘೋರ ಅಪ್ರಲಾಪವನ್ನು ಕೇಳುತ್ತಿದ್ದೇನೆ. ಅದಕ್ಕೆ ತಾಳದಂತೆ ಆ ಭೂತ–ಬೇತಾಳ ನಿಶೆಯ ಧ್ವನಿಗಳೂ ಅಬ್ಬರಿಸುತ್ತಿವೆ, ತಾಪವನ್ನು ನೀಡುತ್ತಿವೆ.

ಇಂತಹ ಸ್ಥಿತಿಯಲ್ಲಿಯೇ ಚಿಂತನದಲ್ಲಿ ಉಗಮಗೊಂಡಿರುವ ಶೂನ್ಯವನ್ನು ನಾನೀಗ ಛಿದ್ರಗೊಳಿಸಿ, ಈ ತಳವಿರದ ಆಳದಲ್ಲಿಯೇ ನನ್ನನ್ನೂ ಇರಿಸಿಕೊಂಡಿರುವೆ. ಇದರಿಂದಾಗಿ ನನ್ನ ಪಾದಗಳು ಸದಾ ಹತಾಶೆಯ ಮೆಟ್ಟಲನ್ನೇ ಹತ್ತುವಂತಾಗಿದೆ. ಆದರೆ ಆ ನಿಸ್ಸೀಮ ಕವಚದಂತೆ ಸುರಕ್ಷೆಯನ್ನು ಒದಗಿಸುತ್ತಿರುವ ಆ ದೇವ ವೈಭವದ ದಿವ್ಯ ಭವ್ಯ ಜ್ವಾಲೆಗಳನ್ನು ನಾನೀಗ ಇಲ್ಲಿಗೆ ತರುತ್ತೇನೆ. ತನ್ಮೂಲಕ ಈ

ಮನುಜ ತಲವನ್ನು ಅಂತರಂಗದಲ್ಲಿಯೂ ಸಹಿತ ನಿತ್ಯತ್ವದಲ್ಲಿ ಬೆಳಗುಗೊಳಿಸುವಂತೆ ಮಾಡುತ್ತೇನೆ.

ನನ್ನ ಈ ಭೌತಿಕ ಸ್ವರೂಪದಲ್ಲಿ ಯಾರು ನೆಲೆಗೊಳ್ಳಲು ಅವತರಣ–ಗೊಂಡಿದ್ದಾರೆಯೋ, ಅವರಿಂದಾಗಿಯೇ ನನ್ನನ್ನು ಸುತ್ತುವರೆದಿದ್ದ ಸರ್ವ ಗವಸುಗಳು ಕತ್ತರಿಸಿಕೊಂಡು ಕರಗಿ ಹೋಗುತ್ತಿವೆ. ನನ್ನಿಂದ ದೂರ ದೂರ ಸರಿಯುತ್ತಿವೆ. ಆಗ ನಾನು ಆ ಪರಮ ದೇವನಾ ವಾಣಿಯನ್ನು ಶ್ರುತಿಗೊಳ್ಳುವದರ ಜೊತೆಗೆ ಅವನಿಚ್ಛೆಯನ್ನು ಪಡೆದುಕೊಳ್ಳುವೆ. ಎಂದಿಗೂ ಬಾಧೆಯನ್ನು ನೀಡದಂತಿರುವ ಸುವಿಶಾಲವಾಗಿರುವ ಆ ಭ್ರುಕುಟಿಯಲ್ಲಿ ನಾನೀಗ ಕಂಡುಕೊಳ್ಳುವೆ. ಈ ಅತಲಗಳಲೆಲ್ಲವೂ ತುಂತುಂಬಿಕೊಂಡು, ಜೊತೆಗೆ ಆ ಊರ್ಧ್ವದೆಡೆಗೆ ಸೇತುಬಂಧವಾಗುತ್ತಿದೆ. ಆ ಸ್ವರ್ಣಧಾರೆಯದು ಅಭಿಷೇಕಗಾಗಿ ಸದಾ ಛಂದದಲ್ಲಿ ಧಾರೆಗೊಳ್ಳುತ್ತಿದೆ. ಆ ನೀಲಮಣಿಯ ಶಿಖರದಡಿಯಲ್ಲಿ ಇಂದ್ರಚಾಪವು ಸೃಷ್ಟಿಗೊಳ್ಳುತ್ತದೆ. ಅದರ ಜೊತೆಗೆ ಜ್ಯೋತಿ–ಮಿಂಚುಗಳು ರಚಿತಗೊಂಡು ದಂಡೆ ದಂಡೆಗಳು ಉಗಮಗೊಳ್ಳುತ್ತಿವೆ. ಇಂತಹ ಅತ್ಯಪೂರ್ವ ಸ್ಪಂದನದಿಂದಾಗಿ ಈ ಬುವಿಯ ಹೃದಯದಲ್ಲಿ ದಿವ್ಯಾಗ್ನಿಯು ಪ್ರಜ್ವಲನಗೊಳ್ಳುತ್ತಿದೆ, ಅಕ್ಷಯದ ಸೂರ್ಯನ ತೇಜಪುಂಜಗಳು ಉಜ್ಜ್ವಲನದಲ್ಲಿ ಶೋಭಾಯಮಾನಗೊಳ್ಳುತ್ತಿವೆ. ಸೃಷ್ಟಿ–ಸೀಮೆಗಳು ಅಚ್ಚರಿಯ ಸಂಧಿ ಸಂಧಿಗಳ ಮಾರ್ಗದಿಂದ ಅವತರಣಗೊಳ್ಳುವ ಚಿತ್ತವು ಛಂದದ ಉತ್ಕಂಠ ಬಂಧದಿಂದ ಸ್ಪಂದಿಸುತ್ತದೆ.

ಈಗಿದೋ ಇಲ್ಲಿ ಋತದ ಸಂಗಾತಿಯಾಗಿರುವ ಆನಂದ ಘನದ ವೈರಾಜ್ಯ ಸರಣಿ ಸರಣಿಗಳು ದಿವ್ಯ ಜ್ವಾಲೆಗಳ ಮಾಲೆಗಳನ್ನು ಸೃಷ್ಟಿಸಿ ಪ್ರತ್ಯಕ್ಷವಾಗುತ್ತಿವೆ. ಈ ತಲಕ್ಕೂ ಅರುಣವರ್ಣದಾ ಸೋಪಾನಗಳ ಪಥದ ಲೀಲೆಯನ್ನು ನಿರ್ಮಿಸುತ್ತಿದೆ. ನಂದನ ವನದ ದೇದೀಪ್ಯಮಾನವಾದ ಸಂಕುಲವು ಇದಾಗಿದ್ದು, ಇಲ್ಲಿಯೂ ಅವತಾರಗೊಳ್ಳುತ್ತಿದೆ. ತಮದ ಅಂತಿಮವನ್ನು ಅದರ ತುರೀಯವಾಸ್ಥೆಗೇರಿಸಿ ತೀವ್ರಗೊಳಿಸುತ್ತಿದೆ.

ಇದಕ್ಕೂ ಕೊಂಚ ಮಿಗಿಲಾದಂತೆ ಇರುವ ಜೀವನದ ಕಡೆಗೆ ನವ್ಯ ದ್ವಾರವೊಂದು ತೆರೆದುಕೊಳ್ಳುತ್ತಿದೆ. ಪರಿಪೂರ್ಣವಾಗಿಯೇ ಆಕೃತಿಗೊಂಡು ರಜತ ಕಾಂತಿಯಲ್ಲಿ ಸೃಜನಗೊಳ್ಳುತ್ತಿವೆ. ಊರ್ಧ್ವದೆಡೆಯಲ್ಲಿ ರಕ್ಷೆಯಾಗಿರುವ ಸ್ವರ್ಣಿಮದ ಆಚ್ಛಾದದ ಜೊತೆಗೆ ಮಿಲನಗೊಂಡು ವರ್ಣಮೇಳಗಳು ಈ ತಲದಲ್ಲಿಯೂ

ಕಂಗೊಳಿಸುತ್ತವೆ. ಆ ಭಾಸುರದ ಲೋಕವು ಇಲ್ಲಿ ಅನಾವರಣಗೊಂಡು ಬೃಹತ್ ಲೋಕದ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತದೆ. ಅವರ ಈ '**ವೈರಂಭಣದ ಪವನ**'ದಲ್ಲಿಯೇ ನನ್ನ ಸ್ವಪ್ನಗಳನ್ನೂ ಇರಿಸುತ್ತಲೇ, ಆ ಸ್ವರ್ಣಿಮದ ಜೊತೆಗೆ ನೀಲಮಯದ ಅಂಬರವನ್ನು(ಗಗನವನ್ನು) ನಾನು ಪಡೆದುಕೊಳ್ಳುತ್ತೇನೆ. ಈ **ವೈರಂಭಣ ಪವನ**ವಾದರೋ ತನ್ನ ಸೂಕ್ಷ್ಮ ಆಕಾರದಿಂದ ಪ್ರಕೃತಿಯನ್ನು ಜಾಗ್ರತಿಗೊಳಿಸಿ, ಪ್ರೇಮ ಸೂತ್ರದ ಶ್ರದ್ಧೆಯನ್ನು ನೆಲೆಗೊಳಿಸುತ್ತದೆ. ದೇಹ ಸ್ವರೂಪದಲ್ಲಿ ಅನುಭವಕ್ಕೆ ಬರುವ ಪಂಚ ಪ್ರಾಣಗಳಿಗಿಂತ ಸೂಕ್ಷ್ಮವಾಗಿರುವ ಇವುಗಳನ್ನು ಪ್ರಕೃತಿ ಭಾವದಲ್ಲಿಯೇ ಅನುಭವಕ್ಕೆ ಸಿಗುತ್ತವೆ. ಇನ್ನು ಮುಖ್ಯ ವಾಯುವು ದೇಹದ ಎಪ್ಪತ್ತೆರಡು ನಾಡಿಚಕ್ರಕ್ಕೆ ಆಧಾರವಾಗಿಯೇ ಇರುತ್ತದೆ. ಇದೆಲ್ಲವನ್ನೂ ಸಾಕ್ಷಾತ್ಕಾರಗೊಳಿಸುವ **ಪ್ರಭಂಜನ ವಾಯು** ಬ್ರಹ್ಮಾಂಡದ ದರ್ಶನಕ್ಕೆ ಸೂಕ್ತ ಪಥವನ್ನು ತೋರುತ್ತದೆ. ಶರೀರ ರಚನೆಗೆ–ವಿಶ್ವದ ಸಂರಚನೆಗೆ ಆದರೆ ಶರೀರತ್ರಯದ ಹೊರಗೇ ಇರುವ ಈ **ಅಂತರ್ವಾಯು**ವು ಸೂರ್ಯನ ಸ್ಥಾನದಲ್ಲಿದ್ದು, ಸದಾ ಸರ್ವದ ಜಾಗ್ರತವಾಗಿಯೇ ಇರುತ್ತದೆ. ಇನ್ನು **ಮಹಾಪ್ರಾಣವಾಯು**ವು ಸರ್ವಾಂತರ್ಯಾಮಿ ಯಾಗಿದ್ದು, ನಾದಬ್ರಹ್ಮವಾಗಿ, ಜಾಗೃತ–ಸ್ವಪ್ನ–ಸುಷುಪ್ತಾವಸ್ಥೆಯಲ್ಲಿ ಏಕಾಕ್ಷರವಾಗಿ ಪರಬ್ರಹ್ಮ ಸ್ವರೂಪದಲ್ಲಿರುತ್ತದೆ. ಈ ಮಹಾಪ್ರಾಣವಾಯುವೇ ಪ್ರಕೃತಿಯನ್ನು ಸ್ಪರ್ಶಿಸುವ ಸೂಕ್ಷ್ಮಾತಿಸೂಕ್ಷ್ಮವಾಗಿ **'ವೈರಂಭಣ'**ವಾಗಿರುತ್ತದೆ. ಇಂತಹ ಸಾರೂಪ್ಯದಲ್ಲಿಯೇ ಈ ಬುವಿಯ ಮೇಲೆ ಸಂಚನಗೊಳ್ಳಲು ಆಗಮಿಸಿದ ಅ ಪರಮ ಸತ್ಯವನ್ನು, ನಿತ್ಯ ಸ್ಪಂದನದಲ್ಲಿ ಈಗ ನೆಲೆಯಾಗಿಸಿಕೊಂಡು ಸಾಗುವೆ."

ಸೆರೆಮನೆಯಲ್ಲಿ ಇದ್ದಾಗ ಕಂಡ ಕಾಣ್ಕೆ ಮತ್ತೆ ಅಕ್ಷರಕ್ಕೆ ರೂಪಕ್ಕೆ ಎಷ್ಟು ಬಂದಿದೆಯೋ... ಆದರೆ ಅದರ ಆಂತರ್ಯವನ್ನು ಕಂಡ ಸಂತೃಪ್ತ ಭಾವದಿಂದ ಪೂರ್ಣಗೊಂಡ ಚಿತ್ತವು ಇದನ್ನು ದಾಖಲಿಸಿಕೊಂಡಿದೆ. ಮನಸ್ಸಿನ ಮೂಲಕ ಗ್ರಹಿಸಿದ್ದು, ಮತ್ತೆ ಕಾಲಾಂತರದಲ್ಲಿ ಸ್ಮರಣೆಗೆ ಸಿಗುವದು ಅಪರೂಪ. ಇನ್ನೂ ಇದನ್ನು ಪ್ರಾಣದ ಮೂಲಕ ಗ್ರಹಿಸಿಕೊಳ್ಳುವ, ನಂತರ ಆತ್ಮಸಾತ್ ಮಾಡಿಕೊಳ್ಳುವ ಆ ಹಂತವನ್ನು ತಲುಪುವದು ಯಾವಾಗ? ಎನ್ನುವ ಪ್ರಶ್ನೆಯೂ ಕಾಣಿಸಿತು.

ಈ ರೀತಿ ಪ್ರಶ್ನೆಗಳು ಉದಿಸುತ್ತ ಹೋದರೆ, ಪಥದ ಗಮನ ಕುಂಠಿತಗೊಳ್ಳುತ್ತದೆ ಎನ್ನುವ ವಿಷಯ ಸ್ಮರಣೆಗೆ ಬಂದು, ಆ ವಿಷಯವನ್ನು ಅಲ್ಲಿಗೇ ಬಿಟ್ಟೆ. ಇಲ್ಲಿ ಹತಾಶನಾಗದೇ ಸದಾ ಮುಂದುವರೆಯುವದೇ ಮುಖ್ಯ. ಗಮ್ಯವೊಂದೇ

ಪ್ರಧಾನ ಸಂಗತಿ ಎಂದು ಯೋಚನೆ ಬರುತ್ತಿದ್ದಂತೆಯೇ, ಇದು ನನ್ನಲ್ಲಿದ್ದ ಅಹಂಕಾರವನ್ನು ಇದೀಗ ಸಂಪೂರ್ಣವಾಗಿ ಮಾಯಗೊಳಿಸಿಕೊಳ್ಳಲು ಸಹಕಾರಿಯಾಯಿತು. ಹಾಗೆಂದು ಮಮಕಾರವನ್ನೇನೂ ಹೊಂದಿಲ್ಲ, ಯೋಗ ಸಾಧನೆಯ ಪ್ರಾರಂಭದ ಅವಧಿಯಲ್ಲಿಯೇ ಅಲ್ಲವೇ ಶುಂಭ–ನಿಶುಂಭರ ಕಥೆಯ ಮೂಲ ತಿರುಳು ಅರ್ಥವಾದದ್ದು. ಅಹಂಕಾರವನ್ನು ಮೀರಿದ್ದೇನೆ ಎಂದರೆ ಮಮಕಾರಿಯಾಗುತ್ತೇನೆ; ಮಮಕಾರವನ್ನು ಹೊಂದಿಲ್ಲ ಎಂದರೆ ಅಹಂಕಾರದ ಜನ್ಮ. ಎಂತಹ ಸವಾಲು. ಇಷ್ಟು ಗಡಚಾದ ಸಂಗತಿಯನ್ನು, ಶುಂಭ–ನಿಶುಂಭರ ಹೆಸರಿನಲ್ಲಿ ದಾಖಲಿಸಿದ ಭಾರತೀಯ ಜಾಣ್ಮೆಗೆ ಬೆರಗಾಗುವದಷ್ಟೇ ಅಲ್ಲ, ಗೌರವಿಸಿ ಪೀಳಿಗೆ ಪೀಳಿಗೆಗೆ ತಿಳಿಸಿಕೊಡಬೇಕಾದ ಸಮಾಜಕ್ಕೆ ಏನಾಗಿದೆ? ಬೇರುಗಳನ್ನು ಕತ್ತರಿಸಿ ಕೊಡುತ್ತಿರುವ ಸಂಗತಿಗಳನ್ನೇ ಶಿಕ್ಷಣವೆಂದು, ಅದೂ ಆಂಗ್ಲ ಭಾಷೆಯಲ್ಲಿದ್ದರೇ ಪರಮ ಗುರಿ ಎನ್ನುವ ಹಪಾಹಪಿಯ ಭಾರತೀಯ ಸಮುದಾಯಕ್ಕೆ, ಆಡಳಿತದವರೂ ಅಷ್ಟೇ ಕುಟಿಲತೆಯಿಂದ, ನೀತಿಗಳನ್ನು ರೂಪಿಸಿದ್ದಾರೆ. ಅದು ಅವರ ಜನ್ಮಜಾತವಾಗಿಯೇ ಹೊಂದಿರುವ ಅಧಿಕಾರ ದಾಹದ ಪ್ರದರ್ಶನ. ಇದರ ಮೂಲವನ್ನು ಅರಿತೇ ಅಲ್ಲವೇ ನಾನು, ಈ ಹೋರಾಟದಲ್ಲಿ ತೊಡಗಿಕೊಂಡದ್ದು, ಎಂದುಕೊಳ್ಳುತ್ತಿದ್ದಂತೆಯೇ, ಅಲ್ಲಿ ಅಹಂಕಾರದ ಅವಶೇಷವಾಗಿ ಉಳಿದಿದ್ದರೂ ಅದು ಮಸುಕು–ಮಸುಕಾದ ಅವಶೇಷ ಮಾತ್ರ. ಹೀಗಿರುವಾಗಲೇ **'ಜೆ'(ಜಗನ್ಮಾತೆ)** ಆಗಮಿಸಿದ್ದು, ಆದರೆ ಮರುದಿನದವರೆಗೂ ಅವಳಷ್ಟಕ್ಕೆ ಅವಳೇ ತನ್ನನ್ನು ರೂಹುಗೊಳಿಸಿಕೊಳ್ಳಲು ಅವಳಿಚ್ಛಿಸಿರಲಿಲ್ಲ ಎನಿಸುತ್ತದೆ. ಟ್ರೇನ್ ಪ್ರಯಾಣದಲ್ಲಿ ಖುಲ್ನಾ ಕಡೆಗೆ ಪಯಣಿಸಿದೆ. ತೇಜತ್ವಪೂರ್ಣ–ಸೂರ್ಯ ಸೂಕ್ಷ್ಮ ಸ್ವರೂಪದಲ್ಲೀಗ ನನ್ನ ಹೃದಯದಲ್ಲಿ ರೂಹು ಪಡೆಯುತ್ತಿದ್ದ.

(ಸಶೇಷ)

* * * * *

ಶ್ರೀ ಅರವಿಂದರು ಯೋಗ ಸಾಧನೆಯಲ್ಲಿ ಅತ್ಯಂತ ಪ್ರಮುಖ ಘಟ್ಟವಾಗಿರುವ **'**ತ್ರಾಟಕ ಸೂರ್ಯ**'**ನ ದರ್ಶನವನ್ನು ಪಡೆಯಲು, ಅದರ ಸಾಧನೆಗೆ ಅವಶ್ಯವಿರುವ ಒಂದು ಸಪ್ತಾಹದ ಕ್ರಮದ ಸಲುವಾಗಿ, ಈಗ ಬಾಂಗ್ಲಾ ದೇಶದಲ್ಲಿರುವ ಖುಲ್ನಾ ಪ್ರದೇಶದ ಬಿರಸಾಲದ ಪ್ರಸಿದ್ಧ ಕಾಳೀ ಮಂದಿರಕ್ಕೆ ಬರುತ್ತಾರೆ. ಆ ಸಪ್ತಾಹದಲ್ಲಿ ಅವರ ಯೋಗ ಸಾಧನೆಯನ್ನು ಮತ್ತು ಆ ಅವಧಿಯ ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಆಧರಿಸಿದ ಕಾದಂಬರಿ ಇದು. (ಸಂ)

## ಹೊಮ್ಮಿತೋ ಚಿಮ್ಮಿ ಆಂತರ್ಯದಲ್ಲಿ ಸರ್ವಸ್ವ ಶೋಭೆಗೊಂಡು

**– ಅನು: ಪುಟ್ಟು ಕುಲಕರ್ಣಿ**

ಹೊಮ್ಮಿತೋ ಚಿಮ್ಮಿ ಆಂತರ್ಯದಲ್ಲಿ ಸರ್ವಸ್ವ ಶೋಭೆಗೊಂಡು
ದರ್ಶನದ ದಿವ್ಯ ಪ್ರಜ್ವಲನ ಭವ್ಯ ಮಿನುಗುತಲಿ ರೂಹುಗೊಂಡು;
ಹಲಕೆಲವು ಶ್ರೇಷ್ಠ ಸುವಿಶಾಲ ಪೀಠದಾಧಾರ ಖಂಡ–ಯುಕ್ತ
ಆವರಿಸಿತೀಗ, ಆವರಣಕೆಲ್ಲ, ಮುಕ್ತ ಸಹಜಾಭಿವ್ಯಕ್ತ

ಹೃತ್ಕೇಂದ್ರದಿಂದ ಉತ್ಕ್ರಮಿಸಿ ಬಂದು ವೇಗದಲಿ ಸಾಗುತಿರಲು
ಚಿಜ್ಜ್ಯೋತಿವರ್ಣದಾರ್ಣವದ ಸಂಘ, ಸುಜ್ಞಾನ ಹೊಮ್ಮುತಿರಲು,
ನಿರ್ದ್ರವ್ಯ ಸ್ಥಿತಿಯ ಘನಮೌನ ಯತಿಯ ಅವಕಾಶವದುವು ತಾನು
ಬೆಳಗುತಲಿ ಬಂದು ತೋರುತಲಿ ನಡೆವ ಬೆಳಕಿನಾ ಮಾಲೆಗಳನು,

ಅದ್ಭುತಾದ್ಭುತದ ಉದ್ಭೂತ ಶಕ್ತಿ ಜೊತೆ ಸ್ವರ್ಣ ವರ್ಣಜ್ವಾಲೆ
ಜೊತೆಗಿಲ್ಲಿ ಪ್ರಕೃತಿ ಕಂಪನದಿ ನಿತ್ಯ ವಿಕಸನದ ನವ್ಯ ಲೀಲೆ.
ಕೆಲವೊಂದು ಘಳಿಗೆ ವಿಶ್ವಾತ್ಮ ರೂಹು ನಮ್ಮೆಲ್ಲರನ್ನುಕಂಡು
ತನ್ನಾತ್ಮ ತತ್ವದಾಂತರ್ಯದಂತೆ ಸ್ವಾಧೀನವಿಟ್ಟುಕೊಂಡು,

ಪೋಷಿಸಿರೆ ಪೂರ್ಣ, ಪೂರ್ಣತ್ವದೆಡೆಗೆ ಪಥ ಕೊರೆವ ವಿಶ್ವ ತಥ್ಯ
ನಾವೀಗಲೂನು ಅರಿಯಲಿದೆ ಅದನು, ಅದು ನಮ್ಮದೆಂಬ ಸತ್ಯ;
ನಮ್ಮಾತ್ಮವೆಲ್ಲ ಒಮ್ಮತದಿ ಇಂದು, ಸಮ್ಮತಿಸಿ ತಾನು ನೆಲೆಯ
ನಮ್ಮುಸಿರಿಗೀಗ ಪರಮಾತ್ಮನಿಂದು ಆರಾಧ್ಯನಭಾವಕೊಡೆಯ,

ಭವ–ಬದುಕ ಕವಚದಾ ಕ್ಷೀಣ ಹಂತದಲು ಸಹಿತ ಹಣುಕಿ ನಿಂತ
ಅಹಂ–ತತ್ತ್ವವದು ಕರಗುತಲಿ ಈಗ, ಮರೆಯಾಗಲೆಂದು ಸತತ;
ಸ್ವಯಂ ಸ್ಥಿತಭಾರ ಹೊಂದಿ ನಿಂತಿರುವ ಭಾವಕ್ಕೆ ರೂಪವಾಗಿ
ಆಗ್ರಹದಿ ಮತ್ತೆ ಬಯಕೆಗಳನಿಡದೆ ನಿಗ್ರಹಿಸಿಕೊಂಡು ಸಾಗಿ

**(ಸಾವಿತ್ರಿ; ದಳ 1 ರೇಣು 4 ಪುಟ 47–48)**

# ಪೂರ್ಣ ಯೋಗದ ಆಂತರ್ಯ– ಜೀವನವೇ ಯೋಗ

**– ಅನು: ಪುಟ್ಟು ಕುಲಕರ್ಣಿ**

ಋತದ ಯೋಗದಲಿ ಸೃಷ್ಟಿ– ಜೀವನವು ತಾ ಕ್ಲಿಷ್ಟವಿದ್ದರೂನು
ಸಮತೆ ಸ್ಪಂದದಲಿ ಪೂರ್ಣಪಥದಲ್ಲಿ ಚಿರ ಗುರಿಯ ಹೊಂದಿ ತಾನು
ಸತತ ಯತ್ನದಲಿ ವಿಧದ ಸಲಿಲದಲಿ ರೂಪಗಳ ಪಡೆದು ಸಾಗಿ
ಭೂಮ ಭವ್ಯತೆಯ ದಿವ್ಯೋ ನೆಲೆಯೆಡೆಗೆ ನಿತ್ಯ ಸಮಸ್ಪಂದಿಯಾಗಿ ॥1॥

ಪರಿಪೂರ್ಣಗೊಳುವ ಮಿಡಿತದಲಿ ರೂಪ ರೂಪಗಳು ವಿಕಸಗೊಳುತ
ರಚನೆಯಲಿ ಖಚಿತ ವಿಕಸನದ ಗತಿಯು, ಪರಿಪೂರ್ಣಗೊಳುವ ತುಡಿತ
ದರ್ಶಗೊಂಡಿರುವ ಶಕ್ತಿ ಪ್ರಕಟನೆಯು ಘನನಿಬಿಡ ಸೂತ್ರ ಸತ್ಯ
ಅತಿಕಠಿಣದೊಳಗೆ ಪ್ರಕಟಗೊಳ್ಳುತಲಿ ತಾ ಶಕ್ತಿಗೊಂಡು ನಿತ್ಯ ॥2॥

ಕಾಲ ಸೂತ್ರದಲಿ ಲೀಲೆಗೊಳ್ಳುತಿರೆ ಖಿಲಗೊಳುತ ಸಕಲವೆಲ್ಲ
ತಮ್ಮಾತ್ಮ ಬಲವ ಜೊತೆ ತೇಜದೊಲವ ಕ್ಷೀಣತೆಗೆ ಸಿಲುಕಿ ಎಲ್ಲ,
ಗುಣದ ಶಕ್ತಿಯದು ನಿಶ್ಶಕ್ತಿಗೊಳುತ ಕರಗುತಿಹ ಹಂತದೊಳಗೆ
ಜೀವಕಳೆಯನ್ನು ಕಳೆಕಳೆದುಕೊಂಡು ನಿರ್ಜೀವ ಹಂತದೆಡೆಗೆ ॥3॥

ಘನನಿಬಿಡ ತಮದಿ ಜಡತೆಯೆಡೆ ನಡೆದು ನಿರ್ಜೀವಗೊಳುತ ಕರಗಿ
ಸರ್ವಸ್ವವೆಲ್ಲ ಸ್ಪಂದನವೆ ಇರದ ನಿರ್ಜಡದಿ ಸಾಗಿ ಹುದುಗಿ,
ಈ ಕುಸಿತವನ್ನು ತಡೆತಡೆಯಲೆಂದು ಆಗಮಿಸಿ ಆತ್ಮ–ಸಲಿಲ
ಸತತದಲಿ ಧಾರೆ ಧಾರೆಗೊಳ್ಳುತಲಿ ಅವತರಣದೊಳಗೆ ಲೀಲ ॥4॥

ಆವರ್ತದೊಳಗೆ ಆವರಣಗೊಳುವ ರೂಪಧಾರಣೆಯ ಸರಣಿ
ಸರಣಿಯಲಿ ಸಾಗಿ ಊರ್ಧ್ವಕೇರುವದೆ ಅಮರತ್ವದೆದೆಯ ವಾಣಿ,
ಜನನ–ಮರಣಗಳ ಮೈಲುಗಲ್ಲಿನಲಿ ಚಿರಯಾನ ಗಮ್ಯದೆಡೆಗೆ
ಭೂತ–ಭೌತಿಕದ ತತ್ತ್ವ ತಾನಿದುವು ಆಧಾರವಾಗಿ ಪ್ರಭೆಗೆ ॥5॥

**(ಆಧಾರ: ಶ್ರೀ ಅರವಿಂದರ 'Synthesis of Yoga')**

## ಇಲ್ಲಿಹುದು ದೇವಗಣಗಳಾ ಉಷೆಯ ಪ್ರತ್ಯೂಷ–ತೋಷ ಘೋಷ

**– ಅನು: ಪುಟ್ಟು ಕುಲಕರ್ಣಿ**

ಇಲ್ಲಿಹುದು ದೇವಗಣಗಳಾ ಉಷೆಯ ಪ್ರತ್ಯೂಷ–ತೋಷ ಘೋಷ;
ಪಾರಲೌಕಿಕದ ಸರಣಿ– ಸರಣಿಗಳು ಕರಣವನು ಬೆಳಗಿ ತೇಲಿ
ಸುಪ್ತಿಯೊಳಗೀಗ ಉದಿತಗೊಂಡಿರುವ ಅವುಗಳಾ ರೂಪಗಳಲಿ
ಪರಮನಾ ದೀರ್ಘ ದೀರ್ಘಾತಿ–ತಮದ ರಾತ್ರಿಗಳು ಕರಗುತಿಲ್ಲಿ

ಈಗಿದೋ ಮತ್ತೆ ನ್ಯಾಯಸಂಗತದಿ ಅವು ಉಷೆಯ ಬೆಳಗಿನಲ್ಲಿ.
ಸಹನಗೊಂಡೀಗ ಭಾವದಾವೇಗವೊಂದೀಗ ತಾನು ಇಲ್ಲಿ
ಮತ್ತಿದೋ ಜೊತೆಗೆ ನವ–ಜನ್ಮವೀಗ ವೈಭವದಿ ಸ್ಪಂದದಲ್ಲಿ
ವರ್ಣ–ವರ್ಣಗಳ–ರೆಕ್ಕೆಯಲಿ ಕಾಣ್ಕೆ ಕಾಣ್ಕೆಗಳು ಸಾಲುಗೊಂಡು

ಕಣ್ಣೆವೆಗಳೀಚೆ ಅಲೆ–ಅಲೆಯಲೀಗ ಅಲೆದಾಟದೊಳಗೆ ಸಂದು,
ಸ್ವರ್ಗೀಯ–ನಾದ ಪತಣದಲಿ ರಾಯಭಾರಿಗಳು ನಿನದಲಿಂದು
ನಿಮೀಲಿತಗೊಂಡ ಅವಕಾಶದಕ್ಷಿಗಳನೀಗ ಜಾಗೃತಿಗೆ ತಂದು,
ಸ್ವಪ್ನದಲಿ ಮಗ್ನರಾಗಿದ್ದ ದೇವಕುಲವೀಗ ಅವಲೋಕಗೊಂಡು

ದೃಷ್ಟದಾ ಆಚೆ ಆಚೆಯಾ ನೆಲೆಯ ತದುತ್ತರದಾಚೆ ಕಂಡು
ಅವರ ಚಿಂತನದ ಶ್ರೇಣಿಗಳಲೀಗ ಭೂಷಣವಗೊಳಿಸಿಕೊಂಡು
ಆ ದಿವ್ಯ ಭವ್ಯ ಚಿಲ್ಲೋಕಗಳನು ಚಿನ್ಮೂಲ ಸ್ಪಂದದಿಂದು
ಪರಿಮಾಣವಿರದ ಆ ಒಂದು ಕ್ಷಣದಿ, ಅಭಿಲಾಶೆ ತಾನು ಹೀಗೆ

ಉದ್ಭೂತಗೊಂಡು ಅಂಕುರಿಸಿತೀಗ ವಿಕಸನಕೆ ಮಾರ್ಗವಾಗೆ,
ತಳವಿರದ ಆಳ ಅತಳದಾ ಕೆಲವು ಹೃದಯದಲಿ ಒಮ್ಮೆ ಅದನು
ಅದು ಹೀಗೆ ಅಲ್ಲಿ ತಳವೂರಲೆಂದು ನೆಲೆಗೊಳಿಸೆ ಸಲಿಸಿ ಇದನು.
ಚಿನ್ಮಯದ ಅಗ್ನಿಜ್ವಾಲೆಯದು ಇಂತು ಆಗಮಿಸಿತಿಲ್ಲಿ ಒಳಗೆ
ಈಗಿದೋ ದಹಿಸಿ ತಮದ–ಹೃದಯವನು, ಪರಿಪೂರ್ಣಗೊಳಿಸಿ ಬೆಳಗೆ;

**(ಸಾವಿತ್ರಿ; ದಳ 10 ರೇಣು 1 ಪುಟ 601–02)**

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 15/08/2023 ಮಂಗಳವಾರ ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆ ಮತ್ತು ಮಹರ್ಷಿ ಶ್ರೀ ಅರವಿಂದರ 151ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸಂಸ್ಥೆಯ ಮಹಾಪ್ರಬಂಧಕರಾದ ಶ್ರೀಯುತ ರವಿಶಂಕರ್ ರವರು ಆಗಮಿಸಿ ಧ್ವಜಾರೋಹಣ ಮಾಡಿ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಮಹನೀಯರ ಆದರ್ಶ ಗುಣಗಳನ್ನು ವಿದ್ಯಾರ್ಥಿಗಳು ತಮ್ಮ ಧೈರ್ಯವಾಗಿ ಸ್ವೀಕರಿಸಬೇಕು ಎಂದು ಹಿತವಚನ ನೀಡಿದರು. ವಿದ್ಯಾರ್ಥಿಗಳು ಭಾಷಣ, ನಾಟಕ, ದೇಶಭಕ್ತಿ ಗೀತೆಗಳನ್ನು ಹಾಡಿ ರಂಜಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು. ಕಾರ್ಯಕ್ರಮದಲ್ಲಿ ಶಾಲಾ ಪ್ರಾಂಶುಪಾಲರು ಶಿಕ್ಷಕ ವೃಂದದವರು ಭಾಗವಹಿಸಿದರು.

ದಿನಾಂಕ 15/08/2023 ಮಂಗಳವಾರ ಶ್ರೀ ಅರವಿಂದರ 151ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಶ್ರೀ ಅರವಿಂದ ಸಂಕೀರ್ಣದಲ್ಲಿ ಏರ್ಪಡಿಸಲಾಗಿತ್ತು. ಬೆಳಿಗ್ಗೆ 10.00 ರಿಂದ 10.20 ರವರೆಗೆ ಸಾಮೂಹಿಕ ಧ್ಯಾನ, ಪ್ರಸಾದ ವಿನಿಯೋಗ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ 10.30 ರಿಂದ 11.00 ರವರೆಗೆ ಅನಿಮೇಷನ್ ಚಿತ್ರ "Sri Aurobindo: A New Dawn" ವೀಡಿಯೊ ಪ್ರದರ್ಶನವನ್ನು ಪ್ರದರ್ಶಿಸಲಾಯಿತು. ನಂತರ 11.00 ರಿಂದ 12.30 ರವರೆಗೆ ಡಾ॥ರ.ವಿ. ಜಹಾಗೀರದಾರ (ಕಾರ್ಯನಿರ್ವಾಹಕ ಧರ್ಮದರ್ಶಿ–ಸಾಕ್ಷಿ, ಧರ್ಮದರ್ಶಿ–ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್, ಬೆಂಗಳೂರು) ರವರು "ದೇವಕುಸುಮ ಶ್ರೀಅರೋಬಿಂದೋ" ಕುರಿತು ಕನ್ನಡದಲ್ಲಿ ಉಪನ್ಯಾಸ ನೀಡಿದರು. ಜೂಮ್ ಲಿಂಕ್/ಯುಟ್ಯೂಬ್ ಮೂಲಕವೂ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಆಸಕ್ತಿಯಿಂದ ಭಾಗವಹಿಸಿದರು.

"Indian Literature - Part I" ವಿಷಯ ಕುರಿತು ದಿನಾಂಕ 10ನೇ ಆಗಸ್ಟ್ 2023 ರಿಂದ 20ನೇ ಅಕ್ಟೋಬರ್ 2023 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರಪ್ರದರ್ಶನ ಆಯೋಜಿಸಲಾಗಿದೆ.

* * *

## ಶ್ರೀ ಅರವಿಂದೋ ಸೊಸೈಟ ಸೆಂಟರ್, ಹುಬ್ಬಳ್ಳಿ

ದಿನಾಂಕ 15/08/2023 ಮಂಗಳವಾರ ಶ್ರೀ ಅರವಿಂದೋ ಸೊಸೈಟಿ ಸೆಂಟರ್, ಹುಬ್ಬಳ್ಳಿ ವತಿಯಿಂದ ದಿ॥ ಶ್ರೀ ಪ್ರಹ್ಲಾದ ನರೇಗಲ್ಲ ರವರು ಅನುವಾದಿಸಿದ ಮಹರ್ಷಿ ಶ್ರೀ ಅರವಿಂದರ ಮಹಾಕಾವ್ಯ ಸಾವಿತ್ರಿ ಗ್ರಂಥ ಪರಿಚಯಿಸುವ ಕನ್ನಡ ಕಿರು ಹೊತ್ತಿಗೆ ಪರಿಷ್ಕೃತ ಮುದ್ರಣದ ಪುಸ್ತಕವು ಹುಬ್ಬಳ್ಳಿಯ ಪತ್ರಕರ್ತರ ಭವನದಲ್ಲಿ ಲೋಕಾರ್ಪಣೆ–ಗೊಂಡಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಶ್ಯಾಮ ಸುಂದರ ಬಿದರಕುಂದಿ ರವರು ಆಗಮಿಸಿ, ಸಾವಿತ್ರಿ ಕಿರು ಹೊತ್ತಿಗೆ ಪುಸ್ತಕ ಮತ್ತು ಶ್ರೀ ಅರವಿಂದೋರವರ

ಆಧ್ಯಾತ್ಮಿಕ ಜೀವನ ಸಾಧನೆ, ಸಾಹಿತ್ಯ, ಪೂರ್ಣ ಯೋಗ ಮತ್ತು ಸಾವಿತ್ರಿ ಮಹಾಕಾವ್ಯ ಕುರಿತು ಸವಿಸ್ತಾರವಾಗಿ ತಿಳಿಸಿದರು. ಕಾರ್ಯಕ್ರಮದ ಅತಿಥಿಗಳಾಗಿ ಡಾ॥ ಅರುಣ್ ಕುಲಕರ್ಣಿ ಮತ್ತು ಶ್ರೀ ಪ್ರದೀಪ್ ತಾಪಸ ರವರು ಆಗಮಿಸಿದರು.

ಶ್ರೀ ಅರವಿಂದೊ ಸೊಸೈಟಿ ಹುಬ್ಬಳ್ಳಿ ಕೇಂದ್ರದ ಸದಸ್ಯರು ಹಾಗೂ ಕಾರ್ಯದರ್ಶಿ ಶ್ರೀ ಮಲ್ಲಿಕಾರ್ಜುನ ನರವಣಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ಮಂಗಳಗೌರಾ ಮಲ್ಲಿಕಾರ್ಜುನ ನರವಣಿ ರವರು ಅಚ್ಚುಕಟ್ಟಾಗಿ ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು. ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

* * *

## ಶ್ರೀ ಅರವಿಂದೋ ಸೊಸೈಟ ಸೆಂಟರ್, ರಾಯಚೂರು

ದಿನಾಂಕ 20/08/2023 ಭಾನುವಾರ ಶ್ರೀ ಅರವಿಂದೋ ಸೊಸೈಟ ಸೆಂಟರ್, ರಾಯಚೂರು ವತಿಯಿಂದ ಡಾ॥ ಬಿ.ಆರ್. ಭೀಡ್ ರವರ ಕನ್ನಡ ಅರ್ಥಾನುಸಂಧಾನ ವಿಸ್ತೃತ ವಿವರಣೆಯುಳ್ಳ ಶ್ರೀ ಅರವಿಂದರ ಸಾವಿತ್ರಿ ಮಹಾಕಾವ್ಯದ 12 ಹೊತ್ತಿಗೆಗಳು 49 ಸರ್ಗಗಳುಳ್ಳ ಮಹಾಗ್ರಂಥವನ್ನು ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ರವರು ಲೋಕಾರ್ಪಣೆ ಗೊಳಿಸಿದರು.

ಲೋಕಾರ್ಪಣೆಗೊಂಡ ಶ್ರೀ ಅರವಿಂದರ ಸಾವಿತ್ರಿ ಮಹಾಕಾವ್ಯ ಗ್ರಂಥದ ಬೆಲೆ ಇಳಿಸಿದ ದರದಲ್ಲಿ ರೂ. 350/– ಲಭ್ಯವಿದೆ. ಆಸಕ್ತ ಗುರು–ಬಂಧುಗಳು, ಭಕ್ತರು ಮತ್ತು ಸಾರ್ವಜನಿಕರು ಪುಸ್ತಕಕ್ಕಾಗಿ **ಶ್ರೀ ರಾಮಲಿಂಗ ಚಂದನಕೆರೆ, ಮೊಬೈಲ್ ನಂ. 97424 19555 ಅಥವಾ ಡಾ॥ ಬಿ.ಆರ್. ಭೀಡ್, ಮೊಬೈಲ್ ನಂ. 94802 18851 ರವರನ್ನು ಸಂಪರ್ಕಿಸಿ ತರಿಸಿಕೊಳ್ಳಬಹುದು.**

* * *

## ಶ್ರೀ ಅರವಿಂದ ಮಂಡಲ, ಹಲಸಂಗಿ

ದಿನಾಂಕ 15/07/2023 ಶನಿವಾರ ಕರ್ನಾಟಕ ಶ್ರೀ ಅರವಿಂದ ಮಂಡಲ, ಹಲಸಂಗಿ ವತಿಯಿಂದ ಶ್ರೀ ಅರವಿಂದರ ಪುಣ್ಯಾವಶೇಷಗಳ ಪ್ರತಿಷ್ಠಾಪನೆಯ 51ನೇ ವರ್ಷದ ವಾರ್ಷಿಕೋತ್ಸವ ಸಂಭ್ರಮಾಚರಣೆ ಕಾರ್ಯಕ್ರಮ ವಿಜೃಂಭಣೆಯಿಂದ ನೆರವೇರಿಸ–ಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ಎನ್.ಜಿ. ಕರೂರ, ಹಿರಿಯ ಸಾಹಿತಿಗಳು, ವಿಜಯಪುರ ರವರು ವಹಿಸಿದರು. ಅತಿಥಿಗಳಾಗಿ ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ಆಗಮಿಸಿದ್ದರು. ಹಿರಿಯ ಜಾನಪದ ವಿದ್ವಾಂಸರಾದ ಡಾ॥ ಎಂ.ಎಂ. ಪಡಶೆಟ್ಟಿ ರವರು **"**ಶತಮಾನ ಕಂಡ ಹಲಸಂಗಿ ಗೆಳೆಯರ ಬಳಗದ ಸಾಧನೆಗಳ ಪಕ್ಷಿನೋಟ**"** ಬಗ್ಗೆ ಉಪನ್ಯಾಸ ನೀಡಿದರು. ಶ್ರೀಮಾತಾರವಿಂದರ ವರ್ಣಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ ಜಗದೇವ ಸ. ಗಲಗಲಿ–ಕಾರ್ಯದರ್ಶಿ, ಡಾ॥ ಶ್ರೀಶೈಲ ಶ್ರೀ ತರಡಿ–ಕಾರ್ಯಾಧ್ಯಕ್ಷರು, ಪುಲಕೇಶಿ ಪು. ಗಲಗಲಿ–ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳು ಮತ್ತು ಕರ್ನಾಟಕ ಶ್ರೀ ಅರವಿಂದ ಮಂಡಲದ ಸದಸ್ಯರು, ಹಿರಿಯ ಸಾಧಕರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್


ಶ್ರೀಯುತ ಶ.ಸ. ಸಿಂಹ ರವರು ಅನುವಾದಿಸಿರುವ ಶ್ರೀಮಾತಾರವಿಂದರ ಕೆಳಕಂಡ ಪುಸ್ತಕಗಳ ಶೀರ್ಷಿಕೆಗಳು ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿಯ ಮಾರಾಟ ವಿಭಾಗದಲ್ಲಿ ದೊರೆಯುತ್ತವೆ.

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಚೈತ್ಯ ಪುರುಷ (ಸಂಗ್ರಹ) |
| 2 | ಶ್ರೀ ಮಾತಾಯನ |
| 3 | ಚೈತ್ಯ ಸಿಂಚನ (ಕವನ ಸಂಕಲನ) |
| 4 | ದಿವ್ಯ ಜೀವನ |
| 5 | ಶಿಕ್ಷಣದ ಮೇಲೆ ಶ್ರೀಮಾತಾರವಿಂದರ ಬೆಳಕು |
| 6 | ಬೆಳಕಿನ ಬೀಜಗಳು (ಪಾಕೆಟ್) |
| 7 | ಗೀತಾ ಪ್ರಬಂಧಗಳು |
| 8 | ಆತ್ಮ ಪರಿಪೂರ್ಣತೆಯ ಯೋಗ |
| 9 | ಪೂರ್ಣಯೋಗ ಸಾಧನೆ (ಪಾಕೆಟ್) |
| 10 | ಸಾವಿತ್ರಿಯ ಸಾರಾಂಶ (ಮೊದಲ ಆರು ಸರ್ಗಗಳು) |
| 11 | ಮಾನವ ಏಕತೆಯ ಆದರ್ಶ |
| 12 | ಯೋಗ ಸಮನ್ವಯ |
| 13 | ಭಾರತೀಯ ಸಂಸ್ಕೃತಿಯ ಅಡಿಪಾಯಗಳು |
| 14 | ಯುದ್ಧ ಮತ್ತು ಸ್ವನಿರ್ಧಾರ (ಪಾಕೆಟ್) |
| 15 | ವೇದದ ಗೂಢಾರ್ಥ |
| 16 | ಭವಿಷ್ಯ ಕಾವ್ಯ |
| 17 | Foundations of Indian Culture (English - abridged) |
| 18 | ಶ್ರೀಮಾತಾರವಿಂದರ ತತ್ವದರ್ಶನ |
| 19 | ಉಪನಿಷತ್ತುಗಳು |
| 20 | ಶ್ರೀ ಅರವಿಂದರ ಶಬ್ದ–ಅರ್ಥ ಚಿಂತನೆ (ಪ್ರಬಂಧಗಳು) |
| 21 | ಖಿನ್ನತೆ ಮತ್ತು ಅದರ ಪರಿಹಾರ (ಪಾಕೆಟ್) |
| 22 | ಪುನರ್‌ಜನ್ಮದ ಸಮಸ್ಯೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 23 | ಶ್ರೀ ಅರವಿಂದರ ಕರ್ಮ ಸಿದ್ಧಾಂತ |
| 24 | ಶ್ರೀ ಅರವಿಂದರ ರಾಷ್ಟ್ರೀಯತೆ |
| 25 | ನಚಿಕೇತ ಪ್ರಶ್ನೆ (ಪ್ರಬಂಧಗಳು) |
| 26 | ಭಾರತದ ಯುವಜನಕ್ಕೆ ಒಂದು ಕರೆ |
| 27 | ನಿದ್ರಾಯೋಗ |
| 28 | ಶ್ರೀ ಅರವಿಂದರ ಕೃತಿಗಳು ಮತ್ತು ಜೀವನೋದ್ದೇಶ (ಪ್ರಬಂಧಗಳು) |
| 29 | ಸಂಕೇತ ಮತ್ತು ಮಂತ್ರಕಾವ್ಯ (ಪ್ರಬಂಧಗಳು) |
| 30 | ದೇವತಾ ಸಂಹಿತೆ (ಪ್ರಬಂಧಗಳು) |
| 31 | ನವ ಸೃಷ್ಟಿ (ಪ್ರಬಂಧಗಳು) |
| 32 | ಆತ್ಮ ಅಂತರಾತ್ಮ ಜೀವಾತ್ಮ (ಪ್ರಬಂಧಗಳು) |
| 33 | ಸುಪ್ರಮಾನಸ (ಪ್ರಬಂಧಗಳು) |
| 34 | ದಿವ್ಯ ಮಾನುಷ ಪ್ರಬಂಧಗಳು (ಪ್ರಬಂಧಗಳು) (ಮುದ್ರಣದಲ್ಲಿ) |
| 35 | ಶ್ರೀ ಅರವಿಂದ ಶಬ್ದ ಮಂಜರಿ (ವಿಲೋಮ ಕೋಶ ಮತ್ತು ಸಿದ್ಧ–ಕೋಷ್ಟಕದ ಜೊತೆಗೆ) (ಮುದ್ರಣದಲ್ಲಿ) |
| 36 | ಪ್ರೌಢ ಯೋಗ ಸಾಧನೆ (Yogic Sadhanನ ಅನುವಾದ) (ಪಾಕೆಟ್) |
| 37 | ಜೀವಗಾಥೆ (ಪ್ರಬಂಧಗಳು) |
| 38 | ಮಂತ್ರ ಸಂಹಿತೆ (ಪ್ರಬಂಧಗಳು) |
| 39 | ಚೈತ್ಯಭವ ಭವ (ಕವನ ಸಂಕಲನ) |

ಶ್ರೀಮಾತಾರವಿಂದರ ಮೇಲಿನ ಭಕ್ತಿ ಗೀತೆಗಳ ಧ್ವನಿಚಕ್ರಗಳು (ಆಡಿಯೋ ಸಿ.ಡಿ.)
ದಿವ್ಯ ದನಿ ಆಡಿಯೋಸ್, ಬೆಂಗಳೂರು. ಸಂಪರ್ಕ: 97417 01516

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಆವೋ ಮಯ್ಯ |
| 2 | ನಯನಗಳು |
| 3 | ಚೈತ್ಯ ಸಿಂಚನ |
| 4 | ಲಾಸ್ಯವಾಡುತಾಳೆ |
| 5 | ಅಳಿಯಾಸೆ |
| ಧ್ವನಿಚಕ್ರಗಳ ಮೇಲೆ 75% ರಿಯಾತಿ ಇದೆ | |



ಫೋಟೋ: ಇಮೇಜಿಂಗ್ ಸಾವಿತ್ರಿ

ಪೂರ್ಣ ಯೋಗದ ಆಂತರ್ಯ–ಜೀವನವೇ ಯೋಗ

**– ಪುಟ್ಟು ಕುಲಕರ್ಣಿ**

**(ಪುಟ 71)**

**RNI No. 22511/1971**

No. of Pages **76 + 4 (Cov. Page)**

KAR Reg No.: RNP/KA/BGS/368/2021-2023

Kannada Monthly Magazine

Date of Publication on 7th of Every Month

Permitted to Post 10th of Every Month. Reg. Valid till: 31-12-2023

Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ಇಲ್ಲಿಹುದು ದೇವಗಣಗಳಾ ಉಷೆಯ ಪ್ರತ್ಯೂಷ–ತೋಷ ಘೋಷ;

**– ಪುಟ್ಟು ಕುಲಕರ್ಣಿ**

**(ಪುಟ 72)**

Ed. Sri Puttu Parashuram Kulkarni, Pub: Dr. Ajit Sabnis

Ptd. by M/s. Seshaasai e-forms Pvt. Ltd.,

on behalf of Sri Aurobindo Complex Trust, ‘Sri Aurobindo Marg’,

J.P. Nagar I Phase, Bengaluru - 560 078. Phone: 080 - 22449882.